ಶ್ರೀ ಜಿ.ಬಿ. ಶಿವಕುಮಾರ್: ಮಾನ್ಯ ಉಪಾಧ್ಯಕ್ಷರೇ ನನಗೆ ಮೊದಲು ಅವಕಾಶ ಮಾಡಿಕೊಡಬೇಕು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ನಾಗೇಗೌಡರು ಬರಲಿ, ತಾವು ಆಮೇಲೆ ತಮ್ಮ ವಿಷಯವನ್ನು ಪ್ರಸ್ತಾಪ ಮಾಡಿ.

ಶ್ರೀ ಜಿ.ಬಿ. ಶಿವಕುಮಾರ್: ನನ್ನ ವಿಷಯ ಅವರಿಗೆ ಸಂಬಂಧಪಟ್ಟಿದ್ದು ಅಲ್ಲ, ಕೈಗಾರಿಕೆ ಸಚಿವರು ಇಲ್ಲಿಯೇ ಇದ್ದಾರೆ. ನಾನು ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್ ಬಗ್ಗೆ ಪ್ರಸ್ತಾಪ ಮಾಡಬೇಕು. ಅದಕ್ಕಾಗಿ ನನಗೆ ಅವಕಾಶವನ್ನು ಮಾಡಿಕೊಡಬೇಕು.

## ವಿತ್ತೀಯ ಕಾರ್ಯಕಲಾಪಗಳು

### 1998-99ನೇ ಸಾಲಿನ ಅನುದಾನ ಬೇಡಿಕೆಗಳ ಮೇಲಿನ ಚರ್ಚೆ

+ ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಇವತ್ತು ಮಾನ್ಯ ಮುಖ್ಯಮಂತ್ರಿಗಳು ಮಂಡಿಸಿದಂತಹ ಸುಮಾರು ಅವರ ಹೆಸರಿನ ಮುಂದೆ ಇರತಕ್ಕಂತಹ ಬೇಡಿಕೆಗಳು ಏನಿದೆ, ಅದು ಗೃಹ ಇಲಾಖೆ, ಅಬ್ಕಾರಿ, ಜನರಲ್ ಅಡ್ಮಿನಿಸ್ಟ್ರೇಷನ್ ಮತ್ತು ಉಳಿದ ಕೆಲವು ವಿಷಯಗಳನ್ನೂ ಕೂಡ ಅವರು ಇವತ್ತು ಮಂಡಿಸಿದ್ದಾರೆ. ನಾನು ಒಂದೆರಡು ವಿಷಯದ ಮೇಲೆ ಸೀಮಿತವಾಗಿ ಮಾತನಾಡುತ್ತೇನೆ. ಈ ಒಂದು ಬೇಡಿಕೆಯನ್ನು ಅನಿವಾರ್ಯವಾಗಿ ನಾವು ವಿರೋಧಿಸಬೇಕಾಗುತ್ತದೆ. ಅದಕ್ಕೆ ಕಾರಣವೇನೆಂದರೆ ಮಾನ್ಯ ಮುಖ್ಯಮಂತ್ರಿಗಳು ಕಳೆದ 3½ ವರ್ಷಗಳಲ್ಲಿ ಅವರ ಪಕ್ಷದ ಸರ್ಕಾರ ಆಡಳಿತದಲ್ಲಿದೆ. ಅದು ಸಾಮಾನ್ಯ ಜನರ ಸಮಸ್ಯೆಗಳನ್ನು ಬಗೆಹರಿಸುವುದರಲ್ಲಿ ಮತ್ತು ಅವರ ನೆಮ್ಮದಿಯನ್ನು ಕೊಡತಕ್ಕಂಥ ದಿಸೆಯಲ್ಲಿ ವಿಫಲವಾಗಿದೆ ಎಂದರೆ ಅತಿಶಯೋಕ್ತಿ ಅಲ್ಲ ಮತ್ತು ತಪ್ಪು ಕೂಡ ಇಲ್ಲವೆಂದು ನಾನು ಭಾವಿಸುತ್ತೇನೆ. ಇವತ್ತು ಶ್ರೀಮಾನ್ ಜೆ.ಹೆಚ್. ಪಟೇಲ್‌ರವರು ಅಧಿಕಾರವನ್ನು ವಹಿಸಿಕೊಂಡಾಗ ನಮ್ಮೆಲ್ಲರ ಅನಿಸಿಕೆ ಏನಿತ್ತು ಎನ್ನತಕ್ಕ ಮಾತನ್ನು ನಾನು ಒಂದೆರಡು ಸಲ ಸದನದಲ್ಲಿ ಪ್ರಸ್ತಾಪ ಮಾಡಿದ್ದೇವೆ. ಅವರು ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿರುವ ಕಾರಣ, ಜನರ ಹಾಗೂ ಸಮಾಜದ ಅಪೇಕ್ಷೆ ಮತ್ತು ಆಡಳಿತ ಯಂತ್ರವನ್ನು ಯಾವ ರೀತಿಯಿಂದ ಚುರುಕುಗೊಳಿಸುತ್ತಾರೆ. ಅವರು ಅಧಿಕಾರದ ಚುಕ್ಕಾಣಿಯನ್ನು ಹಿಡಿದ ಮೇಲೆ, ಆ ಅಧಿಕಾರವನ್ನು ಉಪಯೋಗ ಮಾಡಿ ಸಾಮಾನ್ಯ ಜನರಿಗೆ ಏನು ಲಾಭವನ್ನು ಮಾಡುತ್ತಾರೆ, ಎಂತಹ ಪ್ರಗತಿಪರವಾದಂತಹ ಕಾನೂನುಗಳನ್ನು ತಂದು ಸಮಾಜದಲ್ಲಿ ಬದಲಾವಣೆಯನ್ನು ಮಾಡುತ್ತಾರೆ ಅಥವಾ ಪ್ರಗತಿಪರವಾದ ಕಾನೂನುಗಳನ್ನು ಜಾರಿಗೆ ತರುವುದರಲ್ಲಿ ಎಷ್ಟು ಆಸಕ್ತಿಯನ್ನು ವಹಿಸುತ್ತಾರೆ ಎನ್ನತಕ್ಕಂಥ ಒಂದು ಜನರ ಅನಿಸಿಕೆ ಏನಿತ್ತು ಅಥವಾ ಏನು ಅಪೇಕ್ಷೆ ಇತ್ತು ಅದರಲ್ಲಿ ಅವರು ಸಂಪೂರ್ಣವಾಗಿ ವಿಫಲರಾಗಿದ್ದಾರೆ. ಅವರು ಯಾವುದನ್ನೂ ಕೂಡ ಜನರ ಇಚ್ಛೆಯ ಪ್ರಕಾರ ಅಥವಾ ಅಪೇಕ್ಷೆಯ ಪ್ರಕಾರ ಕೆಲಸವನ್ನು ಮಾಡುವುದಕ್ಕೆ ಆಗಲಿಲ್ಲ ಎನ್ನುವುದಕ್ಕೆ ಅನೇಕ ಉದಾಹರಣೆಗಳು ಇದೆ.

ಒಂದು, ಎರಡು ಎಂದು ನಾನು ಹೇಳುತ್ತಾ ಹೋದರೆ ಒಂದು ದೊಡ್ಡ ಪಟ್ಟಿಯಾಗುತ್ತದೆ. ಈಗ ಉದಾಹರಣೆಗಾಗಿ ಕೆಲವು ಮಾತುಗಳನ್ನು ಹೇಳುತ್ತೇನೆ. ಹಿಂದೆ ಮುಖ್ಯಮಂತ್ರಿಗಳಾಗಿದ್ದ ದೇವರಾಜ ಅರಸರ ಕಾಲದಲ್ಲಿ ಜನರಲ್ ಅಡ್ಮಿನಿಸ್ಟ್ರೇಷನ್ ಬಗ್ಗೆ ಹೇಳಬೇಕಾದರೆ ಒಂದು ಬಿಗಿ ಇತ್ತು. ಅವರೂ ಕೂಡ ಸಮಾಜವಾದಿ ಹಿನ್ನೆಲೆಯಲ್ಲಿ ಬಂದಿದ್ದ ಹಿರಿಯರಾದ ಕಾರಣ ಅದೇ ಒಂದು ಹಿಡಿತ ಆಡಳಿತದಲ್ಲಿ ಇರುತ್ತದೆ ಎನ್ನುವ ಅಪೇಕ್ಷೆ ನನ್ನದಾಗಿತ್ತು. ಹಿಂದೆ ಮಾನ್ಯ ಮುಖ್ಯಮಂತ್ರಿಗಳಾದಂತಹವರು ಏನು ಒಂದು ಪರಿಪಾಠವನ್ನು ಹಾಕಿದ್ದರು ಎಂದರೆ ಯಾರೇ ಮಂತ್ರಿಗಳಾಗಲಿ, ಮುಖ್ಯಮಂತ್ರಿಗಳಾಗಲಿ ತಮ್ಮ ಆಪ್ತಕಾರ್ಯದರ್ಶಿಗಳಾಗಲಿ, ತಮ್ಮ ಸಿಬ್ಬಂದಿಯಲ್ಲಿ ಎಲ್ಲಾ ವರ್ಗದ ಜನರನ್ನು ಸೇರಿಸಬೇಕು. ಅದರಲ್ಲೂ ವಿಶೇಷವಾಗಿ ತಮ್ಮ ಜನರನ್ನು ದೂರ ಇಡಬೇಕೆಂದು ಹಿಂದೆ ಇತ್ತು. ವಿಶೇಷವಾಗಿ ಯಾವ ಜಾತಿಯ ಮಂತ್ರಿಗಳಿದ್ದಾರೆ ಅವರ ಜಾತಿಯ ಮೇಲೆ ಆಪ್ತ ಕಾರ್ಯದರ್ಶಿಗಳನ್ನು ತೆಗೆದುಕೊಳ್ಳುವುದು ಸೂಕ್ತವಲ್ಲವೆಂದು ಒಂದು ಕನ್‌ವೆನ್‌ಷನ್ ಹಾಕಿದ್ದರು. ಇದರ ಬಗ್ಗೆ ಮಾನ್ಯ ನಾಣಯ್ಯ ಮತ್ತು ಮಾನ್ಯ ಮೊಯಿದ್ದೀನ್ ರವರಿಗೂ ಗೊತ್ತಿದೆ. ಬಹುಶಃ ಆ ಕಡೆ ಕುಳಿತಿರತಕ್ಕಂತಹ ಕೆಲವು ಸದಸ್ಯರುಗಳಿಗೆ ಇದು ಗೊತ್ತಿರಬಹುದೆಂದು ನಾನು ತಿಳಿದುಕೊಂಡಿದ್ದೇನೆ. ಆದರೆ ಇವರು ಮಾಡಿದ್ದು ಏನು ? ಯಾವ ಮನುಷ್ಯ ಸಮಾಜವಾದಿ ಪಕ್ಷದಲ್ಲಿ ಇರಲಿಲ್ಲ, ಮಾಜಿ ಮುಖ್ಯಮಂತ್ರಿಗಳಾದ ದಿ. ಶ್ರೀ ಡಿ. ದೇವರಾಜ ಅರಸ್ ರವರು ತನ್ನ ಇಡೀ ಜೀವನವನ್ನು ಕಾಂಗ್ರೆಸ್ ಪಕ್ಷದಲ್ಲಿ ಕಳೆದಂಥವರು ಆ ಬದಲಾವಣೆಯನ್ನು ತರಬಹುದು. ಆದರೆ ನಮ್ಮ ಮುಖ್ಯಮಂತ್ರಿಗಳು ಸಮಾಜವಾದಿ ಪಕ್ಷದಲ್ಲೇ ತನ್ನ ಇಡೀ ಜೀವನವನ್ನು ರಾಜಕೀಯ ಆಯಸ್ಸನ್ನು ಕಳೆದಂಥವರು ತನಗೆ ಬೇಕಾದಂಥದನ್ನು ಇವತ್ತು ಮಾಡಿದ್ದಾರೆ. ಅದು ಹೇಗೆಂದರೆ, ಇವತ್ತು ಅವರ ಕಾರ್ಯದರ್ಶಿಗಳನ್ನು, ಆಪ್ತ ಕಾರ್ಯದರ್ಶಿಗಳನ್ನು, ಅವರ ಸಿಬ್ಬಂದಿವರ್ಗದವರನ್ನು ನೋಡಿ ಎಲ್ಲರೂ ಅವರ ಜಾತಿಯವರೇ ಇದ್ದಾರೆ. ನೀವು ಬೇರೆಯವರಿಗೆ ಜಾತಿ ಮಾಡಬಾರದು ಎಂದು ಹೇಳುತ್ತೀರಿ. ಆದರೆ ನೀವು ಮಾಡುವುದು ಏನು? ನಾನು ಹೇಳಿದರೆ ಅವರಿಗೆ ಸಿಟ್ಟು ಬರುತ್ತಿತ್ತು. ಸನ್ಮಾನ್ಯ ಮುಖ್ಯಮಂತ್ರಿಗಳು ಇಲ್ಲಿ ಇದ್ದರೆ ಅವರಿಗೆ ಸಿಟ್ಟು ಬರುತ್ತಿತ್ತು. ಈಗ ನಾಣಯ್ಯನವರಿಗೆ ಸಿಟ್ಟು ಬರುತ್ತದೆ. ಅವರಿಗೆ ನ್ಯಾಚುರಲಿ ಅದನ್ನು ಡಿಫೆಂಡ್ ಮಾಡುವುದಕ್ಕೆ ಬೇಕಲ್ಲಾ ಯಾರು ಮಾಡುತ್ತಾರೋ ಅಥವಾ ಬಿಡುತ್ತಾರೋ, ಆದರೆ ಜನರನ್ನು ನಿಮ್ಮನ್ನು ಅಪೇಕ್ಷೆ ಪಟ್ಟಿದ್ದಾರೆ. ಇನ್ನೊಬ್ಬರು ಮಾಡಿದರೆ ಅವರನ್ನು ಕ್ಷಮಿಸಬಹುದು. ಆದರೆ ಅವರು ಆ ತತ್ವದಲ್ಲಿ ಬೆಳೆದಿಲ್ಲ. ಅವನಿಗೆ ಏನು ಪಟ್ಟಭದ್ರಾ ಹಿತಾಸಕ್ತಿಗಳು ಇರುತ್ತದೆ ಅಥವಾ ಅವರು ಬೇರೆ ವಿಚಾರಧಾರೆಯಿಂದ ಬಂದಂಥವರು ಇರುತ್ತಾರೆ. ನೀವು ಒಂದು ವಿಶಿಷ್ಟವಾದಂಥಹ ವಿಚಾರಧಾರೆಯಲ್ಲಿ ಬಂದಂಥವರು ಎಂದು ಹೇಳಿಕೊಳ್ಳುವಂತಹ ಜನರು ಇದ್ದಾರೆ. ನೀವು ಎಲ್ಲಾ ಕಡೆ ನಿಮಗೆ ಬೇಕಾದವರನ್ನು ಹಾಕಿಕೊಂಡಿದ್ದಿರಿ. ಆದರೆ ಜನ ಏನು ಅಪೇಕ್ಷೆಯನ್ನು ಪಡುತ್ತಾರೆಂದರೆ, ನಮ್ಮ ಜಾತಿಯವರು ಮುಖ್ಯಮಂತ್ರಿಯಾಗಬೇಕೆಂದು ಆಸೆ ಪಡುತ್ತಾರೆ. ಈ ತರಹದ ಅನುಕೂಲಗಳು ಎಲ್ಲರಿಗೂ ಸಿಗುತ್ತದೆ. ನಮ್ಮವರು ಬಂದರೆ ನಮಗೆ ಒಳ್ಳೆಯ ಹುದ್ದೆ ಸಿಗುತ್ತದೆ. ನಮ್ಮವರು ಬಂದರೆ, ಆಪ್ತ ಕಾರ್ಯದರ್ಶಿಗಳು ಆಗಬಹುದು, ನಮ್ಮವರು ಬಂದರೆ ಡಿ.ಸಿ. ಆಗಬಹುದು, ನಮ್ಮವರು ಬಂದರೆ ಕಾರ್ಯದರ್ಶಿಗಳಾಗಬಹುದು. ಒಳ್ಳೆಯ ಎಕ್ಸಿಕ್ಯೂಟೀವ್ ಪೋಸ್ಟ್ ಸಿಗಬಹುದು ಎನ್ನತಕ್ಕಂಥ ಅನಿಸಿಕೆ, ಬಯಕೆ ಜನರಿಗೆ ಆಗುತ್ತದೆ. ಇದನ್ನು

ತಪ್ಪಿಸುವುದು ಹೇಗೆ? ನೀವು ನಿಮ್ಮ ಕೃತಿಯಿಂದಲೇ ತಪ್ಪಿಸಬೇಕು. ಇದರ ಬಗ್ಗೆ ಜನರ ಬಾಯಲ್ಲಿ ಬರದೇ ಇರತಕ್ಕಂಥ ರೀತಿಯಲ್ಲಿ ನೋಡಬೇಕೆಂದರೆ, ನೀವು ಅದೇ ರೀತಿಯಿಂದ ನಡೆದುಕೊಳ್ಳಬೇಕಾಗುತ್ತದೆ. ನೀವು ಅದೇ ರೀತಿ ನಡೆದುಕೊಂಡಾಗ ಮಾತ್ರ ಜನರು ನಿಮ್ಮನ್ನು ನಂಬುತ್ತಾರೆ. ಇಲ್ಲದಿದ್ದರೆ ಜನರು ನಂಬುವುದಕ್ಕೆ ಆಗುವುದಿಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇವತ್ತು ಅದರಲ್ಲಿ ವಿಫಲರಾಗಿದ್ದಾರೆ. ಮುಖ್ಯಮಂತ್ರಿಗಳು ವೈಯಕ್ತಿಕವಾಗಿ ಒಳ್ಳೆಯ ವ್ಯಕ್ತಿ ಇರಬಹುದು. ಆದರೆ ರಾಜಕೀಯವಾಗಿ, ಆಡಳಿತಾತ್ಮಕವಾಗಿ, ಆಡಳಿತ ಯಂತ್ರವನ್ನು ಉಪಯೋಗ ಮಾಡುವಂತದ್ದನ್ನು ನೋಡಿದಾಗ ಈ ಒಂದು ಜಾತಿ ವಾಸನೆ ಅವರಿಗೂ ಬಿಟ್ಟಿಲ್ಲ ಎನ್ನುವುದು ಸ್ಪಷ್ಟವಾಗುತ್ತದೆ. ನಾನು ಇನ್ನೊಂದು ಮಾತನ್ನು ಹೇಳುತ್ತೇನೆ. ಈ ಸರ್ಕಾರ ಬಂದ ಮೇಲೆ ಅನೇಕ ವೈಸ್‌ಚಾನ್ಸಲರ್‌ಗಳನ್ನು ನೇಮಕಾತಿ ಮಾಡಿದರು. ಸಾಮಾನ್ಯ ವಿಶ್ವವಿದ್ಯಾನಿಲಯಗಳು ಸುಮಾರು 7-8 ಇರಬೇಕು. 2 ಕೃಷಿ ವಿಶ್ವವಿದ್ಯಾನಿಲಯಗಳು ಇರಬೇಕು. ಹೀಗೆ ನಮ್ಮಲ್ಲಿ ಸಾಕಷ್ಟು ವಿಶ್ವವಿದ್ಯಾನಿಲಯಗಳು ಇದೆ. ಇದರಲ್ಲಿ ಒಂದು ಹುದ್ದೆ ಪರಿಶಿಷ್ಟ ಜಾತಿಯವರನ್ನು ವೈಸ್‌ಚಾನ್ಸಲರ್‌ನ್ನಾಗಿ ಮಾಡಿದ್ದೀರಾ? ಸುಮ್ಮನೆ ಹೇಳಿಬಿಡುತ್ತೀರಿ. ನೀವು ಮುಕ್ತ ವಿಶ್ವವಿದ್ಯಾನಿಲಯವನ್ನು ಕೌಂಟ್ ಮಾಡುತ್ತೀರಾ? ನೀವು ಕೌಂಟ್ ಮಾಡುತ್ತೇನೆಂದು ಹೇಳಿದರೆ ನಾನು ಒಪ್ಪಿಕೊಳ್ಳುತ್ತೇನೆ. ನೀವು ಮೂರೂವರೆ ವರ್ಷದಲ್ಲಿ ನಿಮ್ಮ ಕೃತಿಯಲ್ಲಿ ತೋರಿಸಬೇಕಲ್ಲಾ. ಅದಕ್ಕೂ ನಿಮಗೆ ಒತ್ತಾಯಬೇಕು. ಸಾರ್ ಷೆಡ್ಯೂಲ್ ಕಾಸ್ಟ್ ಇಲ್ಲ, ನಮಗೊಂದು ಚಾನ್ಸ್ ಕೊಡಿ ನಾವು ಯಾರೂ ಇಲ್ಲ ಎಂದು ಹೇಳುತ್ತಾರೆ. ಯಾರ್‍ಯಾರು ನೀವೆಲ್ಲರೂ ಹೋಗಬೇಕು. ನಾವು ಹೊರಗಡೆ ಹೋದರೆ ಜನ ನಮ್ಮನ್ನು ಬೈಯುತ್ತಾರೆ ಎಂದು ಹೇಳುತ್ತಾರೆ.

ಶ್ರೀ ಡಿ. ಮಂಜುನಾಥ್ (ಅರಣ್ಯ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಈಗ ಅಗ್ರಿಕಲ್ಚರ್ ವಿಶ್ವವಿದ್ಯಾನಿಲಯದಲ್ಲಿ ಪರಿಶಿಷ್ಟ ವರ್ಗವನ್ನು ಮಾಡಿದ್ದೇವೆ. ಮೈಸೂರು ಮುಕ್ತ ವಿಶ್ವವಿದ್ಯಾನಿಲಯದಲ್ಲಿ ಪರಿಶಿಷ್ಟಜಾತಿಯವರಿಗೆ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : 1997-98ರಲ್ಲಿ ಪರಿಶಿಷ್ಟ ವರ್ಗದವರು ಇರತಕ್ಕಂಥವರು ಶೇಕಡ 5ರಷ್ಟು, ನೀವು ಶೇಕಡ 5 ರಂತೆ ಕೊಟ್ಟದ್ದೀರೆಂದು ತಿಳಿದುಕೊಳ್ಳೋಣ. ಉಳಿದ 19 ಪರ್ಸೆಂಟ್ ಜನ ಏನು ನಿಮಗೆ ಅನ್ಯಾಯ ಮಾಡಿದ್ದಾರೆ? ತಾವು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಹೋಗಬೇಡಿ. ಇಲ್ಲ ಅಂದರೆ ಇಲ್ಲವೆಂದು ಹೇಳಿ, ಮುಂದೆ ನಾವು ಮಾಡುತ್ತೇವೆಂದು ಹೇಳಬೇಕು. ನಾನು ಈ ಮಾತನ್ನು ಏತಕ್ಕೆ ಹೇಳುತ್ತೇನೆಂದರೆ ಇದಕ್ಕೂ ನಾವು ಕಾಡಬೇಕಾ, ಬೇಡಬೇಕಾ, ಇದೇ ಆಡಳಿತದಲ್ಲಿ ನಿಮಗೆ ಅವಕಾಶ ಸಿಕ್ಕಿದಾಗ ಎಲ್ಲರನ್ನೂ ಸರಿಸಮಾನವಾಗಿ ನೋಡತಕ್ಕಂತಹ ದೃಷ್ಟಿಯನ್ನು ಇಟ್ಟುಕೊಂಡು ಕೆಲಸ ಮಾಡಿದಾಗ ಮಾತ್ರ ಆ ಆಡಳಿತದಲ್ಲಿ ಎಲ್ಲರೂ ಕೂಡ ಭಾಗಿಯಾಗಿ, ಇದು ನಮ್ಮ ಸರ್ಕಾರ, ನಮ್ಮ ರಾಜ್ಯ ಇದು ನಮ್ಮ ದೇಶ ಎನ್ನತಕ್ಕಂತಹ ಸ್ವಾಭಿಮಾನ ಜನರಲ್ಲಿ ಮೂಡುತ್ತದೆ; ಇಲ್ಲದಿದ್ದರೆ ಏನಪ್ಪ ಯಾರಿಗೆ ಸಿಕ್ಕಿತೋ, ಅವರು ಹುಚ್ಚಿ ಮದುವೇಲಿ ಉಂಡುವನೇ ಜಾಣ' ಯಾರಿಗೆ ಸಿಕ್ಕಿತೋ ಅವರೇ ಮಾಡಿಕೊಂಡು ಹೋದರೆ ಇದು ಕಷ್ಟವಾಗುತ್ತದೆ. ಇದರಿಂದ ಆಡಳಿತ ನಡೆಸುತ್ತಿರುವ ಸರ್ಕಾರಕ್ಕೆ ಮತ್ತು ಪಕ್ಷಕ್ಕೆ ಕೆಟ್ಟ ಹೆಸರು ಬರುತ್ತದೆ. ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇರತಕ್ಕಂತಹ ಸಮಾಜದ ಪ್ರತಿಯೊಂದು

5.20 ಪಿ.ಎಂ

ಅದಕ್ಕಾಗಿ ನಾನು ಕೇಳುತ್ತೇನೆ, ಇವತ್ತು ಅನೇಕ ಸಾರಿ ಎಲ್ಲವನ್ನೂ ಡಿಪ್ರೈವ್ ಮಾಡುವುದಕ್ಕೆ ಪ್ರಾರಂಭ ಮಾಡುತ್ತೇವೆಂದರೆ, ಆಯ್ಕೆಗೋಸ್ಕರ ಸಮಿತಿಯನ್ನು ಏನು ರಚನೆ ಮಾಡುತ್ತೀರಿ ಅಲ್ಲಿಂದ ಶುರುವಾಗುತ್ತದೆ. ತಮಗೆ ಬೇಕಾದ ಸಮಿತಿಯನ್ನು ರಚನೆ ಮಾಡುವುದು, ಆ ಸಮಿತಿಯವರು ತಮಗೆ ಬೇಕಾದ ಪೇನಲ್ ತಯಾರು ಮಾಡುವುದು. ಆ ಪೇನಲ್‌ನಿಂದ ತಮಗೆ ಬೇಕಾದವರನ್ನು ಆಯ್ಕೆ ಮಾಡತಕ್ಕದ್ದು; ಈ ಕೆಲಸಗಳು ರಾಜ್ಯದಲ್ಲಿ ನಡೆಯುತ್ತಿವೆ. ಅದಕ್ಕೆ ತಾವೆಲ್ಲರೂ ಚಿಂತನೆ ಮಾಡಬೇಕಾಗಿದೆ. ಮಾನ್ಯ ಮುಖ್ಯಮಂತ್ರಿಗಳಂತೂ ವಿಶೇಷವಾಗಿ ಚಿಂತನೆ ಮಾಡಬೇಕಾಗಿದೆ. ಜೊತೆಯಲ್ಲಿ ಕ್ಯಾಬಿನೆಟ್ ಸಚಿವರು ಅಥವಾ ಸಮಾಜದಲ್ಲಿ ಆಸಕ್ತಿ ಇರತಕ್ಕವರು, ಈ ಒಂದು ರಾಜ್ಯದ ಏಳಿಗೆ ಬಗ್ಗೆ ಆಸಕ್ತಿ ಇರತಕ್ಕವರು, ಎಲ್ಲಾ ಸಮಾಜವನ್ನು ಕೂಡಿಸಿಕೊಂಡು ಹೋಗತಕ್ಕ ಒಂದು ನಿಮ್ಮ ಅಭಿಲಾಷೆ ಏನಿದೆ ಅವರೆಲ್ಲರೂ ಇದರ ಬಗ್ಗೆ ಚಿಂತನೆ ಮಾಡಬೇಕಾಗುತ್ತದೆ. ಇದರ ಬಗ್ಗೆ ಯಾರದ್ದೂ ಚಿಂತನೆ ಇಲ್ಲ. ಇದನ್ನು ಮಾಡುವುದಕ್ಕೆ ತಮಗೆ ಸಾಧ್ಯವಾಗಿಲ್ಲ. ನಿಮ್ಮಲ್ಲಿ ಅನೇಕ ಕಡೆ ಅಧಿಕಾರಿಗಳನ್ನು ಹಾಕುತ್ತೀರಿ. ವಿಶೇಷವಾಗಿ ಡಿಪಿಎಆರ್.ನಿಂದ ಅಸಿಸ್ಟೆಂಟ್ ಕಮಿಷನರ್ ಆಗಲಿ, ಎ-ದರ್ಜೆ ಅಧಿಕಾರಿಗಳಿಂದ ಮೇಲ್ಪಟ್ಟು ಹೆಚ್ಚು ಕಡಿಮೆ ಎಲ್ಲಾ ಅಧಿಕಾರಿಗಳನ್ನು ಮುಖ್ಯಮಂತ್ರಿಯವರ ಇಲಾಖೆಯಿಂದ ಹಾಕುತ್ತೀರಿ. ಅದರಲ್ಲಿ ಜಿಲ್ಲಾಧಿಕಾರಿಗಳನ್ನು ಹಾಕುತ್ತೀರಿ, ಪೊಲೀಸ್ ಎಸ್.ಪಿ. ಹಾಕುತ್ತೀರಿ, ಡಿವಿಜನಲ್ ಕಮಿಷನರ್ ಬಿಡಿ, ಅದು ಸೂಪರ್‌ವೈಸರಿ ಪೋಸ್ಟ್. ಅವರ ಹತ್ತಿರ ಯಾವ ಅಧಿಕಾರವೂ ಇರುವುದಿಲ್ಲ. ಆದ್ದರಿಂದ ಅದು ಬೇರೆ. ಆದರೆ ಉಳಿದಂತೆ ಜಿಲ್ಲಾಧಿಕಾರಿಗಳು ಇರಬಹುದು, ಜಿಲ್ಲಾ ಪರಿಷತ್ತಿನ ಅಧಿಕಾರಿಗಳು ಇರಬಹುದು ಎಸ್.ಪಿ. ಇರಬಹುದು, ಅಥವಾ ಡಿಸಿಪಿ ಹುದ್ದೆಗಳು ಬೆಂಗಳೂರಿನಲ್ಲಿ ಇರಬಹುದು. ಇಂಥ ಎಕ್ಸಿಕ್ಯುಟೀವ್ ಪೋಸ್ಟ್‌ಗಳು ವಿವಿಧ ಇಲಾಖೆಗಳಲ್ಲಿ ಇರುತ್ತವೆ. ಲೋಕೋಪಯೋಗಿ ಇಲಾಖೆಯಲ್ಲಿ ಇರಬಹುದು, ಅಥವಾ ನೀರಾವರಿ ಇಲಾಖೆಯಲ್ಲಿ ಇರಬಹುದು ಅಥವಾ ಜಿಲ್ಲಾ ಪರಿಷತ್ತಿನಲ್ಲಿ ಇರಬಹುದು. ಇವೆಲ್ಲವೂ ಕೂಡ ಇರುತ್ತವೆ. ಅಲ್ಲಿಯೂ ಕೂಡ ನೀವು ಹಾಕುವಾಗ ಮೆರಿಟ್ ನೋಡಿ, ಎಫಿಷಿಯನ್ಸಿ ನೋಡಿ, ಜೊತೆಯಲ್ಲಿ ಎಲ್ಲಾ ಜನಾಂಗದ ಜನರಿಗೆ ಅದರಲ್ಲಿ ಅವಕಾಶ ಸಿಕ್ಕಿದೆಯೇ ಇಲ್ಲವೇ ಅನ್ನತಕ್ಕದ್ದನ್ನು ತಾವು ನೋಡತಕ್ಕದ್ದು ಅವಶ್ಯಕ ಇದೆ. ಏಕೆಂದರೆ ನಾವು ಎಷ್ಟೇ ಮೆರಿಟ್ ಬಗ್ಗೆ ಮಾತನಾಡಿದರೂ ಇಂಪಾರ್ಷಿಯಲ್ ಬಗ್ಗೆ ಮಾತನಾಡಿದರೂ ಕೂಡ ಈ ದೇಶದಲ್ಲಿ, ಈ ದೇಶದ ವ್ಯವಸ್ಥೆಯಾಗಲಿ, ಸಾಮಾಜಿಕ ವ್ಯವಸ್ಥೆಯಾಗಲಿ ಜಾತಿಯಿಂದ ಕೂಡಿರತಕ್ಕದ್ದು. ವಿವಿಧ ಜಾತಿಗಳಿಂದ ಕೂಡಿತರತಕ್ಕ ಸಮಾಜ ಇದು. ಅಂದಾಗ ಸ್ವಾಭಾವಿಕವಾಗಿ ಎಲ್ಲಾ ಜನಾಂಗದವರು ಏನು ಅಪೇಕ್ಷೆ ಮಾಡುತ್ತಾರೆಂದರೆ, ನಮಗೂ ಕೂಡ ಒಳ್ಳೆಯ ಸ್ಥಾನಮಾನ ಸಿಗಬೇಕು ಅಥವಾ ನಮ್ಮವರೂ ಕೂಡ ಒಳ್ಳೆಯ ಸ್ಥಾನಮಾನದಲ್ಲಿ ಇರಬೇಕೆಂಬ ಅಪೇಕ್ಷೆ ಇರುತ್ತದೆ. ಆದರೆ ಪೋಸ್ಟಿಂಗ್ಸ್ ಕೊಡುವಾಗ ನೀವು ಏನು ಮಾಡುತ್ತೀರೆಂದರೆ, ಶಾಸಕರು ಹೇಳಿದರು, ಮಂತ್ರಿಗಳು ಹೇಳಿದರು ಎಂದು ಅವರಿಗೆ ಬೇಕಾದವರನ್ನು ಹಾಕುತ್ತೀರಿ. ಅವರು ಹೇಳಿದವರನ್ನು ಹಾಕಬಾರದೆಂದು ಹೇಳುವುದಿಲ್ಲ. ಅಲ್ಲದೆ, ಎಲ್ಲರೂ ಕೂಡ ಅದೇ ಹೇಳುತ್ತಾರೆಂದು ಹೇಳುವುದಿಲ್ಲ. ಆದರೆ ಒಂದೇ ಕಡೆ ಒಂದೇ ಜನಾಂಗದವರನ್ನು ಹಾಕುವುದು ಸರಿಯಲ್ಲ. ನಾನು ಮಾನ್ಯ ರೋಷನ್‌ಬೇಗ್ ಅವರಿಗೆ ಹೇಳಿದೆ. ಏನು ಸ್ವಾಮಿ, ನಾನು

ಹೊಸಕೋಟೆಗೆ ಹೋಗಿದೆ. ಅಲ್ಲಿ ಒಂದು ಪೊಲೀಸ್ ಕಾನ್‌ಸ್ಟೇಬಲ್‌ನಿಂದ ಹಿಡಿದುಕೊಂಡು ಡಿಐಜಿ ವರೆಗೆ ಒಂದೇ ಕ್ಯಮುನಿಟಿಯವರು. ಏನು ನ್ಯಾಯ ಸಿಗುತ್ತದೆ ಬೇರೆಯವರಿಗೆ? ನಾವು ಯಾರಿಗೆ ಹೇಳಬೇಕು? ಆಮೇಲೆ ಇಲ್ಲಿ ಪ್ರಸ್ತಾಪ ಮಾಡಿದಾಗ, ಡಿಐಜಿ ಅವರನ್ನು ಬದಲಾವಣೆ ಮಾಡಿದ್ದೇವೆಂದು ಏನೋ ಒಂದು ಉತ್ತರ ಕೊಟ್ಟರು. ಡಿಐಜಿ ಅವರು ಆಟೋಮ್ಯಾಟಿಕ್ ಆಗಿ ಚೇಂಜ್ ಆದರು. ಯಾರನ್ನು ಬದಲಾವಣೆ ಮಾಡಬಾರದಾಗಿತ್ತು ಅವರನ್ನು ಬದಲಾವಣೆ ಮಾಡಿದರು. ಎಲ್ಲಿ ಬದಲಾವಣೆ ಮಾಡಬೇಕಾಗಿತ್ತು ಅವರನ್ನು ಮಾಡಲಿಲ್ಲ. ಜನರಿಗೆ ಯಾವ ಎಸ್.ಪಿ. ಕಾಟ ಇತ್ತು, ಯಾವ ಸರ್ಕಲ್ ಇನ್ಸ್‌ಪೆಕ್ಟರ್ ಕಾಟ ಇತ್ತು, ಯಾವ ಸಬ್ ಇನ್ಸ್‌ಪೆಕ್ಟರ್ ಕಾಟ ಇತ್ತು, ಯಾವ ಹೆಡ್ ಕಾನ್‌ಸ್ಟೇಬಲ್ ಕಾಟ ಇತ್ತು ಅಲ್ಲಿ ಬದಲಾವಣೆ ಮಾಡಲಿಲ್ಲ. ಯಾರದ್ದೂ ಕಾಟ ಇರಲಿಲ್ಲ, ಸಂಬಂಧ ಇರಲಿಲ್ಲ ಅಂಥ ಡಿ.ಐ.ಜಿ.ಯನ್ನು ಬದಲಾವಣೆ ಮಾಡಿದ್ದೇವೆಂದು ಹೇಳಿದರು. ನಾನು ಏತಕ್ಕೆ ಹೇಳುತ್ತೇನೆಂದರೆ, ನೀವು ಆಡಳಿತದಲ್ಲಿ ಒಂದೇ ಜಾತಿ ಜನಾಂಗಕ್ಕೆ ಪೋಸ್ಟಿಂಗ್ಸ್ ಕೊಟ್ಟರೆ ನ್ಯಾಯ ಸಿಗುತ್ತದೆಯೇ? ಎಲ್ಲರೂ ಒಳ್ಳೆಯವರಿದ್ದು, ಇಂಪಾರ್ಷಿಯಲ್ ಆಗಿದ್ದು, ಒಳ್ಳೆಯ ಹೆಸರು ಪಡೆದುಕೊಂಡಿದ್ದರೆ ನಾನು ಒಪ್ಪುತ್ತೇನೆ. ಅಂಥವರು ಎಲ್ಲೋ ಕೆಲವು ಸಾರಿ ಬರುತ್ತಾರೆ, ಇಲ್ಲವೆಂದು ಹೇಳುವುದಿಲ್ಲ. ಆದರೆ ನೀವು ಗುರುತಿಸಿ, ಗುರುತಿಸಿ ಹಾಕುತ್ತೀರಲ್ಲಾ. ಸ್ವಲ್ಪವಾದರೂ ಧೈರ್ಯ ಬೇಕಲ್ಲಾ ನಿಮ್ಮಲ್ಲಿ. ಅದು ಇಲ್ಲ. ನಾನು ಎಸ್.ಪಿ. ಅವರಿಗೆ ಹಾಕಿದ್ದೇನೆ, ಡಿವೈಎಸ್‌ಪಿ. ಅವರಿಗೆ ಹಾಕಿದ್ದೇನೆ, ಪುನಃ ಸರ್ಕಲ್ ಇನ್ಸ್‌ಪೆಕ್ಟರನ್ನು ಹಾಕುವುದಿಲ್ಲ, ಬೇರೆಯವರಿಗೆ ಹಾಕುತ್ತೇನೆ. ಸರ್ಕಲ್ ಇನ್ಸ್ ಪೆಕ್ಟರನ್ನು ಹಾಕುತ್ತೇನೆ, ಡಿವೈಎಸ್‌ಪಿ ಬೇರೆ, ಎಸ್.ಪಿ. ಬೇರೆ ಹಾಕುತ್ತೇನೆ ಎಂಬ ಆ ಒಂದು ಧೈರ್ಯವನ್ನು ನೀವು ಮಾಡದಿದ್ದರೆ ಜನರು ಯಾವ ನ್ಯಾಯವನ್ನು ನಿಮ್ಮಿಂದ ಅಪೇಕ್ಷೆ ಮಾಡಬೇಕು? ನಿಮ್ಮಿಂದ ನ್ಯಾಯ ಸಿಗುತ್ತದೆಂದು ಹೇಗೆ ಭಾವಿಸುವುದು? ಇದು ಒಂದು ಕಡೆ, ಇನ್ನೊಂದು ಕಡೆ ನಮ್ಮ ಶಾಸಕರಿಗೆ ಬೇಕಾದ ಅಧಿಕಾರಗಳನ್ನು ತೆಗೆದುಕೊಳ್ಳುವುದು ಬಹಳ ಕಡಿಮೆ. ನನ್ನ ಹತ್ತಿರ ಬಂದರೂ ಕೂಡ ಅಷ್ಟೆ. ನಾನು ಮಾಡುವುದು ಅವರು ಮಾಡುವುದು ಎಲ್ಲಾ ಒಂದೇ. ಅದರಲ್ಲಿ ಏನಾಗುತ್ತದೆಂದರೆ, ಒಳ್ಳೆಯವರು, ಕೆಟ್ಟವರು ಎಂದು ನೋಡುವುದಕ್ಕಿಂತಲೂ ಯಾರೋ ಬಂದು ಹೋದರು ಎಂದು ಕಳುಹಿಸುವುದು ಒಂದು. ಇಲ್ಲವೆಂದರೆ ನಮ್ಮವನೇ ಬೇಕೆಂದು ಹಾಕಿಸುವುದು ಒಂದು, ಇಲ್ಲವೆಂದರೆ ಅವನು ಬೇರೆ ರೀತಿಯಿಂದ ಶಿಫಾರಸ್ಸು ಮಾಡಿಕೊಂಡು ಬರತಕ್ಕದ್ದು. ಏಕೆಂದರೆ ಕೆಲವು ಸಾರಿ ಮತದಾರರು ಹೆದರಿಸುತ್ತಾರೆ. ದೇಶ ಹೇಗಾಗಿದೆ ಎಂದರೆ ಕಡೆ ಮತದಾರರಿಗೆ ಹೆದರಬೇಕು, ಇನ್ನೊಂದು ಕಡೆ ಶಾಸಕರಿಗೆ ಹೆದರಬೇಕು, ಜಿಲ್ಲಾ ಉಸ್ತುವಾರಿ ಮಂತ್ರಿಗಳು ಪವರ್ ಫುಲ್ ಇದ್ದರೆ ಶಾಸಕರನ್ನು ಕೇಳುವುದಿಲ್ಲ, ಕಾರ್ಯಕರ್ತರನ್ನು ಕೇಳುವುದಿಲ್ಲ. ತಮ್ಮದೇ ಆದ ರೀತಿಯಲ್ಲಿ ನಡೆಸುತ್ತಾರೆ. ಬಹುಶಃ ಮಾನ್ಯ ಉಪಾಧ್ಯಕ್ಷರಿಗೂ ಇದು ಅನುಭವವಾಗಿರಬೇಕು. ಏಕೆಂದರೆ, ತಾವು ಕೈ ತೋರಿಸುತ್ತಿದ್ದೀರಿ. ಅಂದಾಗ ತಮ್ಮ ಅನುಭವಕ್ಕೆ ಹೆಚ್ಚಿನ ರೀತಿಯಲ್ಲಿ ಬಂದಿದೆ. ಮಾನ್ಯ ಉಪಾಧ್ಯಕ್ಷರ ಅನುಭವಕ್ಕೆ ಬಂದಷ್ಟೇ ಬೇರೆ ಶಾಸಕರ ಅನುಭವಕ್ಕೂ ಬಂದಿದೆ, ಕಾರ್ಯಕರ್ತರ ಅನುಭವಕ್ಕೂ ಬಂದಿದೆ ಪ್ರಭಾವಶಾಲಿ ಮಂತ್ರಿಗಳು ತಮ್ಮದೇ ನಡೆಯಬೇಕೆಂದು ಎಲ್ಲಾ ಇಲಾಖೆಗಳಲ್ಲಿ ಕೈಯಾಡಿಸುವುದು, ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ತಾಲ್ಲೂಕುಗಳಲ್ಲಿ, ಎಲ್ಲ ಮತ ಕ್ಷೇತ್ರಗಳಲ್ಲಿ ಕೈಯಾಡಿಸುವುದು ನಡೆಯುತ್ತಿದೆ. ಅವನು ಅಲ್ಲಿ ಅಭಿವೃದ್ಧಿ ಕೆಲಸ ಮಾಡುತ್ತಾನೋ

ಇಲ್ಲವೋ, ಕಾನೂನು ಶಿಸ್ತು ಪಾಲನೆ ಸರಿ ಇದೆಯೋ ಇಲ್ಲವೋ ನೋಡುವುದಿಲ್ಲ. ಯಾರೂ ಹೇಳುವವರು ಕೇಳುವವರು ಇಲ್ಲ. ಏನು ಸಾಹೇಬ್ರೆ, ನಿಮ್ಮ ಮಾತು ನಡೆಯುವುದಿಲ್ಲವಂತೆ ಮುಖ್ಯ ಮಂತ್ರಿಗಳ ಹತ್ತಿರ, ಅಂದ ಕೂಡಲೇ ಹೌದಾ, ಹಾಗೆ ಅಂದನಾ ಅವನು, ಅವನು ನಮ್ಮ ಗುಂಪಿನವನು ಅಲ್ಲ, ನಮಗೆ ಬೆಂಬಲ ಮಾಡುವ ಹಾಗೆ ಇಲ್ಲ, ಅಂಥವನಿಗೆ ಹಾಕಿ, ಸರಿಯಾಗಿ ಅವನಿಗೆ ಪಾಠ ಕಲಿಸೋಣ ಎಂದು ಹೀಗೆ ಎಷ್ಟೋ ಆಗಿದೆ, ಎಷ್ಟೋ ಮತಕ್ಷೇತ್ರಗಳಲ್ಲಿ ಆಗಿದೆ. ಎಷ್ಟೋ ತಾಲ್ಲೂಕುಗಳಲ್ಲಿ ಆಗಿದೆ. ಅದಕ್ಕಾಗಿ ಮಾನ್ಯ ಎಸ್.ಎಸ್. ಪಾಟೀಲರು ಇಂಥದ್ದು ಅನೇಕ ಮಾಡಿದ್ದಾರೆ. ಅವರು ಕಾರಜೋಳ ಅವರ ಹಿಂದೆ ಬೆನ್ನು ಹತ್ತುತ್ತಿದ್ದರು.

ಶ್ರೀ ಎಸ್.ಎಸ್. ಪಾಟೀಲ್ : ಅವರ ಅನುಭವವನ್ನು ಹೇಳುತ್ತಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನನ್ನ ಅನುಭವ ನಿಮಗೆ ಆಗಿದ್ದರೆ ಪಾಪ, ನೀವು ಕಾರಜೋಳ ಅವರ ಬೆನ್ನು ಹತ್ತುತ್ತಿದ್ದೀರಲ್ಲಾ. ಅವನು ಆಗಲೇ ನಮ್ಮ ಪಕ್ಷ ಬಿಟ್ಟಿದ್ದಾನೆ, ಅವನಿಗೆ 4 ದಿವಸ ಸುಮ್ಮನಿರಿ, ಸರಿಯಾದ ಪಾಠ ಕಲಿಸೋಣ ಎಂದು ಹೇಳಿರುವುದೆಲ್ಲಾ ಪತ್ರಿಕೆಯಲ್ಲಿ ಬಂದಿದೆ.

ಶ್ರೀ ಎಸ್.ಎಸ್. ಪಾಟೀಲ್ : ಅದನ್ನು ನಾನು ಡಿನೈ ಮಾಡಿದ್ದೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ನೀವು ಡಿನೈ ಮಾಡಿದ್ದರೆ ಸಂತೋಷ. ಆದರೆ ಪತ್ರಿಕೆಯಲ್ಲಿ ಬಂತು. ಬಹಳ ಜನ ಅನೇಕ ಸಲ ನಾವು ಪಾಠವನ್ನು ಕಲಿಸುತ್ತೇವೆಂದು ಹೇಳುತ್ತಾರೆ. ಯಾರಿಗೆ ಹೇಳುತ್ತಾರೆಂದರೆ ಡಿಸಿಡೆಂಟ್ ಶಾಸಕರಿಗೆ, ಲೋಕಶಕ್ತಿ ಶಾಸಕರಿಗೆ ಹೇಳುತ್ತಾರೆ. ನಾಳೆ ಹೆಚ್ಚು ಕಡಿಮೆ ಏನೋ ಬದಲಾವಣೆ ಆಯಿತು ಎಂದು ನಮಗೂ ಪಾಠ ಕಲಿಸುವುದಕ್ಕೆ ಅನೇಕ ಸಾರಿ ಪ್ರಯತ್ನ ಮಾಡಿದ್ದಾರೆ. ಆಡಳಿತ ಹೀಗೆ ಇದ್ದ ಮೇಲೆ ರಾಜ್ಯದಲ್ಲಿ ಯಾವ ರೀತಿ ಕಾನೂನು ವ್ಯವಸ್ಥೆಯಾಗಲಿ ಅಥವಾ ಯಾವುದೇ ಒಂದು ಇಲಾಖೆಯಲ್ಲಿ ಅಭಿವೃದ್ಧಿ ಕೆಲಸಗಳಾಗಲಿ ನಡೆಯುತ್ತವೆಂಬುದರ ಬಗ್ಗೆ ತಾವು ಮನಃಸಾಕ್ಷಿಯಾಗಿ ಹೇಳಬೇಕು. ಇವತ್ತು ಇದು ಎಲ್ಲಾ ಕಡೆ ನಡೆದಿದೆ; ಜಿಲ್ಲಾ ಪರಿಷತ್ತಿನಲ್ಲಿ ನಡೆದಿದೆ. ಇವತ್ತಿನ ದಿವಸ, ಜಿಲ್ಲಾ ಪರಿಷತ್ತುಗಳಲ್ಲಾಗಲಿ, ಲೋಕೋಪಯೋಗಿ ಇಲಾಖೆಯಲ್ಲಾಗಲಿ ಸಣ್ಣ ನೀರಾವರಿ ಇಲಾಖೆಯಲ್ಲಾಗಲಿ ಕೆಲಸಕ್ಕೆ ಬಾರದ ಎಕ್ಸಿಕ್ಯೂಟೀವ್ ಇಂಜಿನಿಯರ್‌ಗಳು ಇದ್ದಾರೆ. ಪಾಪ ಅವನು ಬಡವ, ಬಹಳ ಒಳ್ಳೆಯವನು. ಆದರೆ ಕೆಲಸ ಮಾಡುವ ಹಾಗೆ ಇಲ್ಲ, ವಿಸಿಟ್ ಮಾಡುವ ಹಾಗೆ ಇಲ್ಲ, ಎಲ್ಲಿಯೂ ಹೋಗುವ ಹಾಗೆ ಇಲ್ಲ. ಆದರೆ ಅವರ ಮಂತ್ರಿಗೆ ಬೇಕು, ಇಟ್ಟುಕೊಂಡರು. ನಿಮಗೆ ಬೇಕಾದ ಒಳ್ಳೆಯ ದಕ್ಷ, ಪ್ರಾಮಾಣಿಕ ಅಧಿಕಾರಿಯನ್ನು ತಂದು ಹಾಕಿಕೊಳ್ಳಿ, ಬೇಡ ಅನ್ನುವುದಿಲ್ಲ. ಆದರೆ ನೀವು ಹಾಕಿಕೊಂಡವರು ಕೆಲಸವನ್ನಾದರೂ ಮಾಡಬೇಕಲ್ಲಾ. ಯಾವ ಭಾಗಗಳಲ್ಲಿ ಅಭಿವೃದ್ಧಿ ಕೆಲಸ ಆಗಿಲ್ಲವೆಂದು ಹೇಳುತ್ತೇವೆ ಆ ಭಾಗದಲ್ಲಿ ಒಳ್ಳೆಯ ಅಧಿಕಾರಿಗಳನ್ನು ಹಾಕದೆ ಹೋದರೆ ಹೇಗೆ ಅಭಿವೃದ್ಧಿ ಕೆಲಸ ಆಗುತ್ತದೆ? ಇದನ್ನು ಸರ್ಕಾರದವರು ಯೋಚನೆ ಮಾಡಬೇಕು. ಮಾನ್ಯ ಮುಖ್ಯಮಂತ್ರಿಗಳ ಇಲಾಖೆ ಮತ್ತು ಅವರ ಜವಾಬ್ದಾರಿ ಹೆಚ್ಚಿನದು ಇದೆ. ಇದರ ಜೊತೆಯಲ್ಲಿ ಅನೇಕ ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳು ಇವೆ. ಯುಕೆಪಿ. ಬಗ್ಗೆ ನಾವು ಸಾಕಷ್ಟು ಮಾತನಾಡಿದ್ದೇವೆ. ಪದೇ ಪದೇ ನಾನು ಆ ಬಗ್ಗೆ ಮಾತನಾಡುವುದಿಲ್ಲ. ಹೀಗೆ ಅಭಿವೃದ್ಧಿ ಕೆಲಸಗಳು

ಅನೇಕ ಇವೆ. ಯಾರು ಅವುಗಳನ್ನು ತೆಗೆದುಕೊಂಡು ಚುರುಕುಗೊಳಿಸುತ್ತಾರೆ ಯಾರು ಸ್ವಲ್ಪಮಟ್ಟಿಗೆ ನಿಮ್ಮ ಅಭಿವೃದ್ಧಿ ಯೋಜನೆಗಳನ್ನು ತೆಗೆದುಕೊಂಡು ಜನರಿಗೆ ಮುಟ್ಟಿಸುತ್ತಾರೆ ಅಂಥವರನ್ನು ಹಾಕತಕ್ಕ ಪ್ರಯತ್ನವನ್ನು ನಾವು ಮಾಡಬೇಕು. ಅನೇಕ ಜಿಲ್ಲೆಗಳಲ್ಲಿ ಆ ಕೆಲಸ ಆಗಿಲ್ಲ. ಅದಕ್ಕಾಗಿ ನಾನು ಇವತ್ತು ಅವರಿಗೆ ಕೇಳಿಕೊಳ್ಳತಕ್ಕಂಥದ್ದು ಇಷ್ಟೇ. ಡೆಪ್ಯುಟಿ ಕಮಿಷನರ್ ಆಗಲಿ, ಎಸ್‌ಪಿ ಆಗಲಿ, ಅಥವಾ ಜಿಲ್ಲಾಪರಿಷತ್ತಿನ ಎಕ್ಸಿಕ್ಯುಟೀವ್ ಆಫೀಸರ್ ಆಗಲಿ ಇವರಿಗೆ ಪೋಸ್ಟಿಂಗ್ ಮಾಡುವಾಗ ಬೇರೆ ಬೇರೆ ಸಮಾಜದ ಜನ ಇದ್ದಾರೆ ಎನ್ನತಕ್ಕಂಥದ್ದನ್ನು ನೋಡಿಕೊಂಡು ಪೋಸ್ಟಿಂಗ್ ಮಾಡಬೇಕೇ ಹೊರತು ಯಾರೋ ಮಂತ್ರಿಗಳು ಹೇಳಿದರು, ಲೋಕಲ್ ಇನ್‌ಫ್ಲ್ಯುಯೆನ್ಸ್ ಬಂತು ಎಂದು ಮಾಡಬಾರದು, ಅವನಿಗೆ ಬೇಕಾದವರು ಹೇಳುತ್ತಾರೆ, ಹೇಳತಕ್ಕಂತಹವರು 100 ಇರಬಹುದು, ಆದರೆ ಮಾಡುವಾಗ ನಾವು ಅದನ್ನು ತಿಳಿದುಕೊಂಡು ಮಾಡದೆ ಹೋದರೆ ಇಡೀ ವ್ಯವಸ್ಥೆ ಕೆಡುತ್ತದೆ ಇಡೀ ಜಿಲ್ಲೆ ಕೊಡುತ್ತದೆ. ಹಿಂದೆ ದೇವರಾಜ ಅರಸ್‌ರವರ ಕಾಲದಲ್ಲಿ ಕೂಡ ಡೆಪ್ಯೂಟಿ ಕಮೀಷನರ್‌ರವರು ಒಂದು ಸಮಾಜಕ್ಕೆ ಸೇರಿದವರು ಇದ್ದರೆ, ಎಸ್‌ಪಿಯವರು ಇನ್ನೊಂದು ಸಮಾಜದವರು. ಜಿಲ್ಲಾ ಪರಿಷತ್ತಿನ ಎಕ್ಸಿಕ್ಯುಟೀವ್ ಆಫೀಸರ್ ಇನ್ನೊಂದು ಸಮಾಜದವರು. ಒಂದೇ ಸಮಾಜದವರು ಇದ್ದರೂ ಕೂಡ ಅವನ ಇಂಟಗ್ರಿಟಿ, ಅವನ ಹಾನೆಸ್ಟಿ, ಅವನ ಎಫಿಷಿಯೆನ್ಸಿ ನೋಡಿ ಹಾಕಿದರೆ ಎಲ್ಲರೂ ಚೆನ್ನಾಗಿದ್ದಾರೆಂದು ಅಂದುಕೊಂಡು ನಾವು ಹೋದರೆ ಖಂಡಿತವಾಗಿ ಅದರಿಂದ ನಮ್ಮ ಆಡಳಿತದಲ್ಲಿ ಏನು ಚುರುಕುಗೊಳಿಸಬೇಕೆಂದು ಅಭಿಪ್ರಾಯ ಇರುತ್ತದೆ? ಅದು ಆಗುವುದಿಲ್ಲ. ಮತ್ತು ಜನರಿಗೆ ಏನೂ ಕಾರ್ಯಕ್ರಮಗಳು ಅದರ ಫಲ ಕೂಡ ತಲುಪಬೇಕು, ಅದೂ ಕೂಡ ತಲುಪುವುದಿಲ್ಲ. ಇವತ್ತು ನಾನು ಈ ಮಾತನ್ನು ಪ್ರಸ್ತಾಪ ಮಾಡುತ್ತಿದ್ದೇನೆ. ಏಕೆಂದರೆ, ಅನೇಕ ಜನ ಇದರ ಲಾಭವನ್ನು ಪಡೆದುಕೊಂಡು ಕೆಲವು ಸಲ ಏನಾಗುತ್ತದೆ, ಯಾವಾಗ ಆಡಳಿತದಲ್ಲಿ ಹೆಚ್ಚಿಗೆ ದುರ್ಬಲತೆ ಬರುತ್ತದೆ ಅಂದರೆ ಮಾನಸಿಕವಾಗಿ ಮುಖ್ಯಮಂತ್ರಿಗಳು ಸ್ಟ್ರಾಂಗ್ ಆದರೆ ಅವರಿಗೆ ಇರತಕ್ಕಂತಹ ಬೆಂಬಲವನ್ನು ನೋಡಿದಾಗ ಅವರು ನಿಜವಾಗಿಯೂ ದುರ್ಬಲರು. ಅವರು ಎಷ್ಟೇ ಹೇಳಬಹುದು, ಆದರೆ ನಿಮಗೆ ಧೈರ್ಯ ಇರಬೇಕು, ಮನೋಬಲ ಇರಬೇಕು. ಆದರೆ ನಿಮಗೆ ಇರತಕ್ಕಂತಹ ಬೆಂಬಲವನ್ನು ನೋಡಿದಾಗ ನಿಮಗೆ ಏನು ಒತ್ತಡ ತಂದು ಅನೇಕ ಜನ ಅಪ್ರಾಮಾಣಿಕರಿಗೆ ಇನ್ ಎಫಿಷಿಯಂಟ್ ಪೀಪಲ್‌ಗೆ ಅಲ್ಲಿ ಪೋಸ್ಟಿಂಗ್ ಕೊಡತಕ್ಕಂತಹ ವ್ಯವಸ್ಥೆ ನಡೆಯುತ್ತದೆ. ಅದಕ್ಕೆ ನೀವು ಈಲ್ಡ್ ಆದರೆ ಅನೇಕ ಜನ ಸೇರಿ ರಾಜಕೀಯದಲ್ಲಿ ನಮ್ಮ ಅಧಿಕಾರವನ್ನು ಉಳಿಸಿಕೊಳ್ಳಬೇಕೆಂದು ಇವರ ಕಿರಿ ಕಿರಿ ಅಂದುಕೊಂಡು ಬಿಟ್ಟು ಬಿಡುತ್ತಾರೆ. ಒಂದಕ್ಕೆ ಈಲ್ಡ್ ಆದರೆ 10 ಅಂತಹ ಕೇಸಸ್ ಬರುತ್ತವೆ. ಯಾವುದಾದರೂ ಒಂದಕ್ಕೆ ತೃಪ್ತಿ ಪಡುವ ಜನ ಇಲ್ಲ. ಒಂದು ಆದಮೇಲೆ ಇನ್ನೊಂದು, ಇನ್ನೊಂದು ಆದ ಮೇಲೆ ಮತ್ತೊಂದು. ಒಳ್ಳೆಯವರಿಗೆ ತಂದು ತಮ್ಮ ಜಿಲ್ಲೆ ಮತ್ತು ತಮ್ಮ ಮತ ಕ್ಷೇತ್ರ ಅಭಿವೃದ್ಧಿ ಪಡಿಸಬೇಕೆಂಬ ಕಡೆ ಹೆಚ್ಚಿನ ಗಮನ ಕೊಡುವುದಿಲ್ಲ. ಅವರಿಗೆ ಏನು ಅನುಕೂಲವಾಗುತ್ತದೆ ಎಂದು ನೋಡುವುದಿಲ್ಲ, ಅವನು ನನ್ನ ಮಾತು ಕೇಳುತ್ತಾನೆ ಇಲ್ಲ ಅದು ತಿಳಿದುಕೊಂಡು ಬಹಳ ಜನ ಇಲ್ಲಿ ಪೋಸ್ಟಿಂಗ್ ಮಾಡಿಸಿ ಕೊಡುತ್ತಾರೆ. ದಯವಿಟ್ಟು ಅದರ ಕಡೆ ತಾವು ಟ್ರಾನ್ಸ್‌ಫರ್ ಮಾಡುತ್ತಿದ್ದೀರಿ. ಅದಕ್ಕಾಗಿ ಅದು ನೀವು ಮಾಡುವಾಗ ಇದು ಎಲ್ಲೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಮತ್ತು ಒಳ್ಳೆಯ ಅಧಿಕಾರಿಗಳಿಗೆ ಜಿಲ್ಲಾ ಮಟ್ಟದಲ್ಲಿ

ಕಳುಹಿಸಬೇಕು. ಇಲ್ಲದೇ ಹೋದರೆ ಜಿಲ್ಲಾ ಮಟ್ಟದಲ್ಲಿ ಒಳ್ಳೆಯ ಅಧಿಕಾರಿಗಳು ಇಲ್ಲದೆ ಹೋದರೆ ಖಂಡಿತವಾಗಿ ಅಲ್ಲಿ ಲಾ ಅಂಡ್ ಆರ್ಡರ್ ಕೆಡುತ್ತದೆ, ಡೆವಲಪ್‌ಮೆಂಟ್ ವರ್ಕ್ ಹೋಗುತ್ತದೆ. ಸಮಾಜದಲ್ಲಿ ವ್ಯತ್ಯಾಸ ಬರುತ್ತದೆ. ಇದು ಅನೇಕ ಕಡೆ ಸಾಧ್ಯವಾಗಿದೆ. ಕೆಲವು ಕಡೆ ಕ್ರೈಮ್ಸ್ ಇನ್‌ಕ್ರೀಸ್ ಆಗಿವೆ, ಡೇ ಟು ಡೇ ಕ್ರೈಮ್ಸ್ ಆಗತಕ್ಕಂತಹ ಸಿಚ್ಯುಯೇಷನ್ ಕ್ರಿಯೇಟ್ ಆಗುತ್ತಿದೆ. ಇದರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಅದು ಬಂದಿದೆ. ಆದರೆ ಅದು ತಡೆಗಟ್ಟತಕ್ಕಂತಹ ಅಧಿಕಾರಿಗಳು ಜಿಲ್ಲಾ ಮಟ್ಟದಲ್ಲಿ ಇಲ್ಲದೇ ಹೋದರೆ ಇದು ಹೇಗೆ ಸಾಧ್ಯ, ಸಾಧ್ಯವಾಗುವುದಿಲ್ಲ. ಒಬ್ಬ ಆಫೀಸರ್ ಕರೆದು ಏನು ಇಷ್ಟೊಂದು ಕಳ್ಳತನ ನಡೆದಿದೆ ಎಂದು ಕೇಳಿದೆ, ಇಷ್ಟೊಂದು ಕಡೆ ಮರ್ಡರ್ಸ್ ಆಗುತ್ತಿದೆ, ಇದೆಲ್ಲಾ ನೋಡಿದರೆ ನೀವೆಲ್ಲೋ ಇಂಟರೆಸ್ಟ್ ತೆಗೆದುಕೊಳ್ಳುತ್ತಿಲ್ಲ ಎನ್ನತಕ್ಕಂತಹ ಪ್ರಶ್ನೆ ಬರುತ್ತದೆ. ಅಂದಾಗ ಅವರು ಏನು ಹೇಳಿದರು, ನಮ್ಮ ವ್ಯವಸ್ಥೆ ಏನಾಗಿದೆ ಎಂದರೆ, ನಾವು ಪ್ರಾಮಾಣಿಕವಾಗಿ ಹಿಡಿದು ಹೆದರಿಸಿ ಬೆದರಿಸಿ ಏನಾದರೂ ಕಳ್ಳತನ ಮಾಡಿದ ಸಾಮಾನು ಎಲ್ಲಿ ಇಟ್ಟಿದ್ದೀಯಾ ಎಂದು ಕೇಳಿ ಏನಾದರೂ ಮಾಡುವುದಕ್ಕೆ ಹೋದರೆ ಅಲ್ಲಿ ಅವನು ಸತ್ತ ಎಂದರೆ ಅದು ಲಾಕ್ ಔಟ್ ಡೆತ್ ಆಗುತ್ತದೆ. ಅದಕ್ಕೂ ಒಂದು ಪ್ರಶ್ನೆ, ಏಕೆ ನೀನು ಹೀಗೆ ಮಾಡಿದೆ ಎಂದು ನಮಗೆ ಸಸ್ಪೆಂಡ್ ಮಾಡುತ್ತಾರೆ. ಅಥವಾ ನೀವು ಪ್ರಶ್ನೆ ಕೇಳುತ್ತೀರಿ, ಎನ್ನೊಬ್ಬರು ಅಜಿಟೇಷನ್ ಮಾಡುತ್ತಾರೆ. ಅದಕ್ಕೆ ಏನು ಮಾಡುವುದು, ಅದಕ್ಕೆ ಇದರಲ್ಲಿ ನಾವು ಕಾನೂನು ಪ್ರಕಾರ ಬರೀ ಎಫ್‌ಐಆರ್ ಕಳುಹಿಸಬಹುದು, ಆ ಮೇಲೆ ಎನ್‌ಕ್ವೈರಿ ಮಾಡಿ ಛಾರ್ಜ್‌ಶೀಟ್ ಹಾಕುವುದು ಇಲ್ಲವೆಂದರೆ 'ಬಿ' ರಿಪೋರ್ಟ್ ಕೊಡುವುದು. ಇದು ಬಿಟ್ಟರೆ ಕೋರ್ಟಿನಲ್ಲಿ ನಾವು ಹೋದಾಗ ಕೋರ್ಟಿನಲ್ಲಿ ಹೆಚ್ಚು ಕಡಿಮೆ ಆಗುತ್ತದೆ. ಹೀಗಾಗಿ ನಮಗೆ ಇವತ್ತು ನಮ್ಮ ಕೈ ಕಟ್ಟಿದ ಹಾಗೆ ಆಗಿದೆ. ಒಬ್ಬರು ಡಿವೈಎಸ್‌ಪಿ ರಿಟೈರ್ಡ್ ಆಗುವವರು ಹೇಳಿದರು, ಹಿಂದು ಮುಂದು ನೋಡದೆ ನಮ್ಮ ಪರಿಸ್ಥಿತಿ ಏನಾಗಿದೆ ಎಂದರೆ, ಕಳ್ಳತನ ಮಾಡಿದವನನ್ನು ನನ್ನ ಕುರ್ಚಿ ಮೇಲೆ ಕೂಡಿಸಿ ನಮ್ಮ ಕಡೆ ಪೋತ್ರಾಜ್ ಎಂದು ಹೇಳುತ್ತಾರೆ. ಪೋತ್ರಾಜ್ ಎಂದರೆ ಈ ಮೊಹರಂಗೆ ತಲೆಮೇಲೆ ಹೊತ್ತುಕೊಂಡು ಹೋಗಿ ಬುರು ಬುರು ಮಾಡಿಕೊಂಡು ಅಡ್ಡಾಡುತ್ತಾರೆ. ನಿಮ್ಮ ಕಡೆ ಕೂಡ ಅಂತಹ ಅಲೆಮಾರಿ ಜನ ಇರಬಹುದು. ಹಾಗೆ ಅವನು ರಕ್ತ ಬರುವವರೆಗೆ ಹೊಡೆದು ಕೊಳ್ಳುತ್ತಾನೆ. ಆಮೇಲೆ ಜನ ಅವನ ರಕ್ತ ನೋಡಿ 1 ರೂ, 50 ಪೈಸೆ 10 ಪೈಸೆ, 20 ಪೈಸೆ ಬಿಸಾಕಿಬಿಡುತ್ತಾರೆ. ಆ ತರಹ ಕಳ್ಳನಿಗೆ ಕುರ್ಚಿ ಮೇಲೆ ಕೂಡಿಸಿ ನಾವೇ ಚಪ್ಪಲಿಯಿಂದ ಹೊಡೆದುಕೊಳ್ಳಬೇಕು, ಆಗ ಅವನು ಹೇಳುತ್ತಾನೆ, ಏಕೆ ನೀವು ಇಷ್ಟೊಂದು ಹೊಡೆದುಕೊಳ್ಳುತ್ತೀರಿ, ನಾನು ಎಲ್ಲಿ ಕಳ್ಳತನ ಮಾಡಿದ್ದೇನೆ, ಎಲ್ಲಿ ಇಟ್ಟಿದ್ದೇನೆಂದು ಹೇಳಿ ಕನಿಕರ ಬಂದು ಅವನು ಹೇಳುವವರೆಗೆ ನಾವು ಹೊಡೆದುಕೊಳ್ಳಬೇಕಾದ ಪರಿಸ್ಥಿತಿ ಬಂದಿದೆ. ಹೊಡೆಯುವುದು ಬಿಟ್ಟು ಈ ರೀತಿಯಾಗಿ ಹೊಡೆದುಕೊಳ್ಳತಕ್ಕಂತಹ ಪರಿಸ್ಥಿತಿ ನಮ್ಮದಾಗಿದೆ ಎಂದು ಅವರು ಹೇಳಿದರು. ಹೀಗೆ ಇವತ್ತು ಆಡಳಿತದಲ್ಲಿ ಕುಸಿತವಾಗುತ್ತಿದೆ. ಇದಕ್ಕೆ ನಾವು ಏನು ಮಾಡಬೇಕು, ಏಕೆಂದರೆ ಅಧಿಕಾರಿಗಳು ಬಿಗಿ ಇಲ್ಲದೆ ಹೋದರೆ ಸಮಾಜದಲ್ಲಿ ಕಾನೂನು ವ್ಯವಸ್ಥೆ ಬಿಗಿ ಇರಬೇಕು, ಕಾನೂನು ವ್ಯವಸ್ಥೆ ಬಿಗಿ ಇರಬೇಕೆಂದರೆ, ಅವರು ಬಿಗಿ ಇರಬೇಕು. ಇವರು ಬಿಗಿ ಇರಬೇಕೆಂದರೆ, ಸರ್ಕಾರದಲ್ಲಿ ಬೆಂಬಲ ಬೇಕು, ಮತ್ತು ಅವರು ನ್ಯಾಯವಾಗಿ ನಡೆದುಕೊಳ್ಳುವುದಕ್ಕೆ ಜನ ಬೇಕು. ಯಾರೋ ರೆಕಮೆಂಡೇಷನ್ ಮೇಲೆ ಬಂದು ಜಾತಿ ಆಧಾರದ ಮೇಲೆ ಬಂದು ನಾವು ದಬ್ಬಾಳಿಕೆ ನಡೆಸುತ್ತೇವೆಂದರೆ ಆಗುವುದಿಲ್ಲ. ಅವರು

ಒಳ್ಳೆಯವರು, ಅವರ ಬ್ಯಾಕ್‌ಗ್ರೌಂಡ್ ನೋಡಿ ಅಂತಹವರಿಗೆ ನಮ್ಮ 20-25 ಜಿಲ್ಲೆಗಳಿಗೆ ಎಲ್ಲಾ ಕಡೆ ಪರ್ಟಿಕ್ಯುಲರ್‌ಲಿ ಸೆಲೆಕ್ಟೆಡ್ ಪೀಪಲ್, ಕಾರ್ಯಕ್ರಮಕ್ಕೆ ಕಮಿಟೆಡ್ ಇರಬೇಕು, ಜನರ ಮತ್ತು ಸಮಾಜದ ವ್ಯವಸ್ಥೆ ತಿಳಿದುಕೊಂಡು ನಡೆಯತಕ್ಕಂತಹ ಅಧಿಕಾರಿಗಳೂ ಕೂಡ ಇರಬೇಕು. ಅದನ್ನು ತಾವು ಇವತ್ತು ಮಾಡಬೇಕಾಗಿದೆ. ಇದರ ಕೊರತೆ ಇದೆ ಅನ್ನತಕ್ಕಂತಹ ಮಾತೂ ಕೂಡ ನಾನು ಹೇಳುತ್ತಿದ್ದೇನೆ. ಇನ್ನೊಂದು ನಾವು ನಮ್ಮ ಆಡಳಿತದಲ್ಲಿ ಕೆಲವು ಸಲ ಮಂತ್ರಿಗಳ ಮಾತು ಕಾರ್ಯದರ್ಶಿಗಳು ಕೇಳುವುದಿಲ್ಲ, ಕಾರ್ಯದರ್ಶಿಗಳು ರೂಲ್ಸ್ ಪ್ರಕಾರ ಹೇಳಿದರೆ ಅದು ಮಂತ್ರಿಗಳು ಕೆಲವರಿಗೆ ಒಳ್ಳೆಯದು ಅನ್ನಿಸುವುದಿಲ್ಲ. ಇದು ಏಕೆ ಈ ವ್ಯತ್ಯಾಸ, ಅವರಿಗೆ ಕೂಡ ತಿಳಿದುಕೊಳ್ಳತಕ್ಕಂಥದ್ದು ಮತ್ತು ತಿಳುವಳಿಕೆ ಬರತಕ್ಕಂಥದ್ದೂ ಕೂಡ ಅವಶ್ಯಕತೆ ಇದೆ. ನಮ್ಮ ಮಂತ್ರಿಗಳ ಅಧಿಕಾರಿಗಳು ಎಷ್ಟು ಕಾರ್ಯದರ್ಶಿಗಳ ಅಧಿಕಾರ ಎಷ್ಟು ಅನ್ನತಕ್ಕಂಥದ್ದನ್ನು ನಾವು ಅರ್ಥ ಮಾಡಿಕೊಳ್ಳದೇ ಹೋದರೆ ಖಂಡಿತವಾಗಿ ನಾವು ಒಳ್ಳೆಯ ರೀತಿಯಿಂದ ಆಡಳಿತ ನಡೆಸುವುದಕ್ಕೆ ಆಗುವುದಿಲ್ಲ. ತಾವು ಓದಿರಬಹುದು, ಅಡ್ಮಿನಿಸ್ಟ್ರೇಷನ್ ರಿಫಾರ್ಮ್ಸ್ ಕಮಿಟಿ ರಿಪೋರ್ಟ್ ಹಿಂದೆ ಹನುಮಂತಯ್ಯನವರ ಕಾಲದಲ್ಲಿ ಕೊಟ್ಟಿದ್ದು ಬಹುಶಃ ತಾವು ಅದನ್ನು ನೋಡಿ ಪೇಜ್ 14ರಲ್ಲಿ ಹೇಳುತ್ತಾರೆ, ಮಂತ್ರಿಗಳು ಮತ್ತು ಕಾರ್ಯದರ್ಶಿಗಳ ಸಂಬಂಧ ಹೇಗಿರಬೇಕು, ಯಾವ ರೀತಿಯಾಗಿ ಅವರು ನಡೆದುಕೊಳ್ಳಬೇಕು ಮತ್ತು ಅದರ ರೆಕಮೆಂಡೇಷನ್‌ಗಳು ಏನಿವೆ, ಕನಿಷ್ಟ ಪಕ್ಷ ಅಷ್ಟಾದರೂ ನಮ್ಮ ಸಚಿವರು ನೆನಪಿನಲ್ಲಿಟ್ಟುಕೊಂಡು ಕೆಲಸ ಮಾಡಿದರೆ ಸಾಕಷ್ಟು ಕೆಲಸ ಆಗುತ್ತದೆ. ಅದೇ ರೀತಿಯಾಗಿ ಕಾರ್ಯದರ್ಶಿಗಳಿಗೂ ನಾವು ಹೇಳತಕ್ಕಂಥದ್ದು ಅವಶ್ಯಕತೆ ಇದೆ. ಏಕೆಂದರೆ, ಕೆಲವು ಸಲ ಎಲ್ಲಾ ಮಂತ್ರಿಗಳು ಆಕ್ಟ್‌ಗಳ ಬಗ್ಗೆ ರೂಲ್ಸ್‌ಗಳ ಬಗ್ಗೆ ಪರ್ಫೆಕ್ಟ್ ಇರುವುದಿಲ್ಲ. ಎಲ್ಲೋ ಒಂದು ವರ್ಷ ಆರು ತಿಂಗಳು ಅವಕಾಶ ಸಿಗುತ್ತದೆ, ಅಷ್ಟರಲ್ಲಿ ಅದೇ ಪೋರ್ಟ್‌ಫೋಲಿಯೋ ಅಂದರೆ ಅಡ್ಡಿ ಅಲ್ಲ, ಬದಲಾವಣೆ ಆದರೆ ಮತ್ತು ಅದು ಬಿಟ್ಟು ಇನ್ನೊಂದು ನೋಡುವುದಿಲ್ಲ. ನ್ಯಾಚುರಲಿ ಕಾರ್ಯದರ್ಶಿಗಳ ಮೇಲೆ ಡಿಪೆಂಡ್ ಇರತಕ್ಕಂಥ ಸಾಧ್ಯತೆ ಇದೆ. ಕಾರ್ಯದರ್ಶಿಗಳು ಸರಿಯಾಗಿ ಗೈಡ್ ಮಾಡದೆ ಇದ್ದಾಗ ಅನೇಕ ಸಾರಿ ಮಂತ್ರಿಗಳು ಅಲಿಗೇಷನ್ಸ್‌ಗೆ ಗುರಿಯಾಗತಕ್ಕಂಥದ್ದು ಇದೆ. ಅದಕ್ಕೆ ಅವರು ತಮ್ಮ ರಿಪೋರ್ಟ್‌ನಲ್ಲಿ ಒಂದು ಮಾತು ಹೇಳಿದ್ದಾರೆ, ಅದು ಇವತ್ತು ನಾವು ಬೆಳೆಸಿಕೊಳ್ಳಬೇಕಾದಂಥದ್ದು ನಮ್ಮೆಲ್ಲರ ಕರ್ತವ್ಯವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಕಡೆ ತಾವು ಏನು ಈ ಒಂದು ರಾಜ್ಯದಲ್ಲಿ ಒಳ್ಳೆಯ ಸರ್ಕಾರ ಕೊಡಬೇಕೆಂದರೆ, ಈ ರಿಪೋರ್ಟ್ ಕನಿಷ್ಟ ಪಕ್ಷ ಅದರಲ್ಲಿರತಕ್ಕಂತಹ ಕೆಲವು ಅನಿಸಿಕೆಗಳು ಇವೆ, ಅದನ್ನು ಸಂಬಂಧಪಟ್ಟವರಿಗೆ ಕಾರ್ಯದರ್ಶಿಗಳಾಗಲಿ, ಅಥವಾ ನಮ್ಮ ಮಂತ್ರಿಗಳಾಗಲಿ ಹೇಳತಕ್ಕಂಥದ್ದು ಅವಶ್ಯಕತೆ ಇದೆ ಎಂದು ನಾನು ಭಾವಿಸಿದ್ದೇನೆ. ಅಧ್ಯಕ್ಷರೇ, ಪುಟ 14ರಲ್ಲಿ ಹನುಮಂತಯ್ಯನವರು ಕೊಟ್ಟಂಥ ರಿಪೋರ್ಟಿನಲ್ಲಿ ಅವರು ಹೇಳಿದ್ದಾರೆ - "Minister-Secretary relationship : The changed character of the executive set up at the highest level has brought new stresses and strains on civil servants, particularly those in the higher echelons, the senior civil servants find themselves handicapped on account of shifts in policies with the not infrequent changes in portfolios, holding up of decisions and lack of

co-ordination in operational measures due to difference in approach of Ministers belonging to different political parties..." ಇದು ಇಲ್ಲಿ ಬರುವುದಿಲ್ಲ. ಏಕೆಂದರೆ ಒಂದೇ ಪಕ್ಷದ ಸರ್ಕಾರ ಇದ್ದ ಕಾರಣ ಇದು ಒಂದು ಶಬ್ದ ಅನ್ವಯಿಸುವುದಿಲ್ಲ. ಆದರೆ ಒಂದು ಮಾತನ್ನು ನಾವು ನೆನಪಿನಲ್ಲಿಡುವ ಅವಶ್ಯಕತೆ ಏನು ಇದೆ ಎಂದರೆ -

"Under our present parliamentary system of Government based on adult franchise, the Ministers often feel compelled to strengthen their own political position and position of their party by getting things done for their supporters and in the process succumbing to undue political pressure. Enduring political strength, cannot, however, be built on shifting stance of appeasement. There is no apparent limit to the demands which interested parties can make on Ministers whose capacity to please them is limited. He should therefore try to build his political strength on his personal standard of commitment to public good rather than on placating such interests. While the compulsion of the political situation may at times make it necessary for a Minister to intervene in an executive matter, such intervention, if allowed, to compromise the basic principles, will open the doors to political spoils and lead to administrative chaos." ಎನ್ನತಕ್ಕಂಥ ಮಾತನ್ನು ಅಂದಿನ ಕಾಲದಲ್ಲಿ ಅಂದರೆ 69ರಲ್ಲಿ ಕೊಟ್ಟಂಥ ರಿಪೋರ್ಟಿನಲ್ಲಿ ಹೇಳಿದ್ದಾರೆ. ಈಗಾಗಲೇ ಸುಮಾರು 30 ವರ್ಷ ಕಳೆದುಹೋಯಿತು. ಆದರೆ ಆ ಮಾತುಗಳು ಇವತ್ತಿಗೂ ಕೂಡ ಅಪ್ಲಿಕಬಲ್ ಇವೆ. ಅಂದಿನ ಕಾಲದಲ್ಲಿ ಹೇಳಿದಂಥ ಮಾತುಗಳು ಇವಾಗಲೂ ಕೂಡ ಸತ್ಯ. ಆದರೆ ಇವತ್ತೂ ಕೂಡ ನಾವು ಅದನ್ನು ಪರಿಪಾಲನೆ ಮಾಡುತ್ತಿಲ್ಲ. ಅನೇಕ ಸಾರಿ ನಮ್ಮ ಬೆಂಬಲಿಗರನ್ನು ಅಥವಾ ನಮಗೆ ಸಹಾಯ ಮಾಡತಕ್ಕಂಥವರನ್ನು ನಾವು ಯಾವುದೇ ರೀತಿಯಿಂದ ಕಾನೂನು ಮುರಿದು ಸಪೋರ್ಟ್ ಮಾಡತಕ್ಕಂಥಾದ್ದು, ಸಹಾಯ ಮಾಡತಕ್ಕಂಥಾದ್ದು, ಶಕ್ತಿ ಕೊಡತಕ್ಕಂಥಾದ್ದನ್ನು ನಾವು ಮಾಡುತ್ತೇವೆ. ಅದಕ್ಕಾಗಿ ಅವರಿಗೆ ಹೇಳಬೇಕು. ಯಾವುದನ್ನು ನೀವು ಸಹಾಯ ನನ್ನಿಂದ ಪಡೆದುಕೊಳ್ಳಬಹುದು, ಯಾವುದನ್ನು ಪಡೆದುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎನ್ನತಕ್ಕಂಥಾದನ್ನು ನಿಮ್ಮಂಥವರಾದರೂ ಸ್ವಲ್ಪಮಟ್ಟಿಗೆ ಹೇಳದೇಹೋದರೆ ಮತ್ತೆ ಯಾರೂ ಸುಧಾರಣೆ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಬೇರೆಯವರ ಮಾತನ್ನಂತೂ ಅವರು ಕೇಳುವುದಿಲ್ಲ. ದಯವಿಟ್ಟು ಈ ಕಾನೂನು ಪಾಲನೆಯನ್ನು ತಾವು ಮಾಡಬೇಕು ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಮಗೆ ನಾನು ಕೇಳಿಕೊಳ್ಳುತ್ತೇನೆ. ಮತ್ತು ಇನ್ನೊಂದು ಏನು ಎಂದರೆ, ಈ ಬೋರ್ಡ್‌ಗಳು ಮತ್ತು ಕಾರ್ಪೊರೇಷನ್‌ಗಳು. ಇವೆಲ್ಲವೂ ತಮ್ಮ ಕಂಟ್ರೋಲ್‌ನಲ್ಲಿವೆ. ಈ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಲ್ಲಿ ಈಗಾಗಲೇ ಸಾಕಷ್ಟು ಚೇರ್ಮನ್‌ಗಳನ್ನು ತಾವು ಮಾಡಿದ್ದಿರಿ. ಅದಕ್ಕೆ ಉತ್ತರ ನಿಮ್ಮದು ಗೊತ್ತಿದೆ. ನಮ್ಮ ಟೀಕೆಗೆ ನಿಮ್ಮ ಉತ್ತರ ಏನು ಎಂದರೆ ನಿಮ್ಮ ಕಾಲದಲ್ಲಿ ಆಗಿತ್ತು ಎಂದು ಹೇಳುತ್ತೀರಿ. ಇದು ಸಾಮಾನ್ಯವಾಗಿರುವಂಥಾದ್ದು. ಈಗಲ್ಲ, ಯಾವಾಗಲೂ ಕೇಳಿದರೆ ನೀವು ಮಾಡಿದ್ದಿರಿ, ನಾವು ಮಾಡಿದ್ದೇವೆ ಎಂದು ಹೇಳುತ್ತೀರಿ. ಆದರೆ ನೀವು ಸುಧಾರಣೆ ಏನು ಮಾಡಿದ್ದೀರಿ

ಎನ್ನತಕ್ಕಂಥಾದ್ದು ಬೇಕಲ್ಲಾ? ಇವತ್ತು ತಾವು ಈ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಲ್ಲಿ ನಾನ್ ಅಫಿಶಿಯಲ್ಸ್ ಅನೇಕ ಜನರನ್ನು ಹಾಕಿದ್ದೀರಿ. ಅನೇಕ ಜನ ಚೇರ್ಮನ್ ಕೂಡ ಆಗಿದ್ದಾರೆ. ಆದರೂ ಕೂಡ ಏನು ಸುಧಾರಣೆಯಾಗಿದೆ? ಎಷ್ಟರಮಟ್ಟಿಗೆ ಸುಧಾರಣೆ ಈ ಬೋರ್ಡು ಮತ್ತು ಕಾರ್ಪೊರೇಷನ್‌ಗಳಲ್ಲಿ ಆಗಿದೆ? ಅಧ್ಯಕ್ಷರೇ, ತಮಗೆ ಹೇಳುತ್ತೇನೆ, ಇವತ್ತು ಸುಮಾರು 26 ಬೋರ್ಡು ಮತ್ತು ಕಾರ್ಪೊರೇಷನ್‌ಗಳಲ್ಲಿ 156 ಕೋಟಿ 19 ಲಕ್ಷ ಲುಕ್ಸಾನು ಆಗಿದೆ. ಇಷ್ಟು ಲುಕ್ಸಾನಿನಲ್ಲಿ ಇವುಗಳು ಇವೆ. ಇವೆಲ್ಲಕ್ಕೂ ಅದರಲ್ಲಿ ಸುಮಾರು 12ಕ್ಕಂತೂ ಚೇರ್ಮನ್‌ಗಳನ್ನು ಹಾಕಿದ್ದೀರಿ. ಇದರಲ್ಲಿಯಾದರೂ ಸುಧಾರಣೆ ಆಗಿದೆಯಾ? ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನೀವು ಚೇರ್ಮನ್‌ಗಳನ್ನು ಮಾಡಬಾರದು ಎಂದು ನಾನು ಹೇಳುತ್ತಿಲ್ಲ. ಅದರಲ್ಲಿ ಕೊನೆಯಪಕ್ಷ ಪ್ರವೀಣತೆ ಇರತಕ್ಕಂಥವರು, ಯಾರಿಗೆ ಅದು ಗೊತ್ತಿದೆ, ಸ್ವಲ್ಪವಾದರೂ ಸುಧಾರಣೆಯಾಗಬಹುದು ಎಂದು ನಾನ್ ಅಫಿಶಿಯಲ್ಸ್ ಇರಲಿ, ಎಕ್ಸ್‌ಪರ್ಟ್ಸ್ ಆದಂಥವರನ್ನು ಹಾಕಿದ್ದರೆ ಸ್ವಲ್ಪವಾದರೂ ಸುಧಾರಣೆಯಾಗುತ್ತದೆ. ಇಲ್ಲದಿದ್ದರೆ ಅನೇಕಸಾರಿ ಏನಾಗುತ್ತದೆ ಎಂದರೆ ನಾನ್ ಅಫಿಶಿಯಲ್ ಮೆಂಬರ್ಸ್ ಅವರು ಎಂ.ಎಲ್.ಎ ಇರಬಹುದು, ಬೇರೆ ಪೊಲಿಟಿಕಲ್ ವರ್ಕರ್ಸ್ ಇರಬಹುದು ಅವರಿಗೆ ಬೇರೆ ಚಾನ್ಸ್ ಸಿಕ್ಕಿರುವುದಿಲ್ಲ. ಇದು ಒಂದು ಸಿಗುತ್ತದೆ. ಅನ್‌ವಿಲ್ಲಿಂಗ್ಲಿ ನೀವು ಸಹಾಯ ಮಾಡುತ್ತೀರಿ. ಯಾರಿಗೆ ಮಂತ್ರಿ ಆಗಬೇಕೆಂದು ಖಾಯಿಶ್ ಇರುತ್ತದೆ ಅಂತಹವರಿಗೆ ಏನೋ ಇದೊಂದು ಇರಲಪ್ಪ, ತಗೊಳ್ಳಿ, ಮುಂದೆ ನೋಡೋಣ ಎಂದು ಹೇಳಿ ಜಬರದಸ್ತಾಗಿ ಕೊಟ್ಟಿರುತ್ತೀರಿ. ಅದನ್ನು ಒತ್ತಾಯಪೂರ್ವಕವಾಗಿ ಕೊಟ್ಟಾಗ ಅವರೂ ಕೂಡ ಅನ್‌ವಿಲ್ಲಿಂಗ್ಲಿ ಕೆಲಸ ಮಾಡುತ್ತಾ ಇರುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ ಅದು ಮುಳುಗಿಹೋಗುವುದಕ್ಕೆ ಇನ್ನಷ್ಟು ನೀವು ಪ್ರೋತ್ಸಾಹ ಕೊಟ್ಟಹಾಗೆ ಆಗುತ್ತದೆ. ಇವತ್ತು ನೋಡಿದರೆ ಹೆಚ್ಚು ಕಡಿಮೆ 156 ಕೋಟಿ ರೂಪಾಯಿಗಳಷ್ಟು ಕರ್ನಾಟಕ ಸ್ಟೇಟ್ ರೋಡ್ ಟ್ರಾನ್ಸ್‌ಪೋರ್ಟ್ ಹಿಡಿದುಕೊಂಡು 26 ಸಂಸ್ಥೆಗಳಲ್ಲಿ - ಮೈಸೂರು ಲ್ಯಾಂಪ್ಸ್, ಎನ್‌ಜಿಇಎಫ್, ಕರ್ನಾಟಕ ಟೆಲಿಕಾಂ, ಮೈಸೂರು ಎಲೆಕ್ಟ್ರಿಕಲ್ ಇಂಡಸ್ಟ್ರೀಸ್, ಕರ್ನಾಟಕ ಪಲ್ಪ್‌ವುಡ್, ಕರ್ನಾಟಕ ಇಂಪ್ಲಿಮೆಂಟ್ಸ್ ಅಂಡ್ ಮೆಶಿನರೀಸ್, ಮೈಸೂರು ಅಸಿಟೇಟ್ ಅಂಡ್ ಕೆಮಿಕಲ್ಸ್, ಕರ್ನಾಟಕ ಆಗ್ರೋ ಇಂಡಸ್ಟ್ರೀಸ್, ಹ್ಯಾಂಡ್‌ಲ್ಯೂಮ್, ಮೈಸೂರು ಕ್ರೋಮ್ ಅಂಡ್ ಟ್ಯಾನಿಂಗ್, ಕರ್ನಾಟಕ ಸ್ಟೇಟ್ ಟೆಕ್ಸ್‌ಟೈಲ್ಸ್, ಕರ್ನಾಟಕ ಬ್ಯಾಕ್‌ವರ್ಡ್ ಕ್ಲಾಸಸ್ ಡೆವಲಪ್‌ಮೆಂಟ್, ಕರ್ನಾಟಕ ಸಿಲ್ಕ್ ಇಂಡಸ್ಟ್ರೀಸ್, ಆಮೇಲೆ ಮೈನಾರಿಟೀಸ್, ಟೊಬ್ಯಾಕೋ-ಅಫ್‌ಕೋರ್ಸ್ ಬ್ಯಾಕ್‌ವರ್ಡ್ ಕ್ಲಾಸಸ್, ಪ್ರಾಫಿಟೆಬಲ್ ಅಲ್ಲ. ಅದು ಸರ್ವಿಸ್ ಓರಿಯಂಟೆಡ್. ಅದಕ್ಕೆ ನೀವೇ ಗ್ರಾಂಟ್ ಕೊಡಬೇಕು. ಈಗ ಅದಕ್ಕೆ ಗ್ರಾಂಟ್ ಕೊಡುವುದನ್ನು ನಿಲ್ಲಿಸಿದ್ದಾರೆ. ಎಸ್ಟಾಬ್ಲಿಶ್‌ಮೆಂಟ್ ಚಾರ್ಜಸ್ ಏನು ಕೊಡುತ್ತಿದ್ದರು, ಅದನ್ನೂ ಕೂಡ ಬಜೆಟ್‌ನಲ್ಲಿ ಈ ಸಾರಿ ಕಡಿಮೆ ಮಾಡಿದ್ದಾರೆ. ಎಸ್‌ಸಿ:ಎಸ್‌ಟಿ ಕಾರ್ಪೊರೇಷನ್‌ಗೆ ಕಡಿಮೆ ಮಾಡಿದ್ದಾರೆ, ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ಕಡಿಮೆ ಮಾಡಿದ್ದಾರೆ, ಮೈನಾರಿಟೀಸ್ ಡೆವಲಪ್‌ಮೆಂಟ್‌ಗೂ ಕಡಿಮೆ ಮಾಡಿದ್ದಾರೆ. ಎಸ್ಟಾಬ್ಲಿಷ್‌ಮೆಂಟ್ ಚಾರ್ಜಸ್‌ಗೆ ನೀವು ಏನು ಹಣ ಒದಗಿಸಿಕೊಡುತ್ತಿದ್ದೀರಿ ಅದನ್ನೂ ಕೂಡ ಸೆಲ್ಫ್ ಸಫಿಶಿಯಂಟ್ ಮಾಡಿಕೊಳ್ಳಿ ಎಂದು ಹೇಳಿ...

ಶ್ರೀ ಬಿ.ಎ. ಮೊಹಿದ್ದೀನ್ : ಅಲೋಕೇಷನ್‌ನಲ್ಲಿ ಜಾಸ್ತಿ ಮಾಡಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಒರಿಜಿನಲ್ ಬಜೆಟ್‌ನಲ್ಲಿ ಇಲ್ಲ. ಈಗ ಮಾಡಿದ್ದೀರೋ ಗೊತ್ತಿಲ್ಲ. ಅದಕ್ಕೆ ನಾನು ಹೇಳತಕ್ಕದ್ದು ಏನೆಂದರೆ ಏನು ಸರ್ವೀಸ್ ಓರಿಯೆಂಟೆಡ್ ಕಾರ್ಪೊರೇಷನ್‌ಗಳಿವೆ, ಅವುಗಳಿಗೆ ನೀವು ಅಲ್ಲಿ ಮ್ಯಾನುಪ್ಯುಲೇಟ್ ಮಾಡಿಕೊಂಡು ಎಸ್ಟಾಬ್ಲಿಷ್‌ಮೆಂಟ್ ಖರ್ಚನ್ನೂ ಕೂಡ ಅದರಲ್ಲಿ ತೆಗೆದುಕೊಳ್ಳಿ ಎಂದು ಹೇಳಿದರೆ ಅದು ಸಾಧ್ಯವಿಲ್ಲ. ಅದಕ್ಕಾಗಿ ನೀವು ಪ್ರತ್ಯೇಕ ಪ್ರಾವಿಷನ್‌ಅನ್ನು ಮಾಡಬೇಕಾಗುತ್ತದೆ. ಇವತ್ತು ಪ್ರತ್ಯೇಕ ಪ್ರಾವಿಷನ್ ಮಾಡದೇ ಹೋದರೆ ಪುನಃ ಈ ಕಾರ್ಪೊರೇಷನ್‌ಗಳು ಲಾಸ್‌ಪಟ್ಟಿಯಲ್ಲೇ ಬರುತ್ತವೆ. ಅದಕ್ಕಾಗಿ ಸರ್ವಿಸ್ ಓರಿಯೆಂಟಡ್ ಇರತಕ್ಕಂಥ ಮೂರು ಕಾರ್ಪೊರೇಷನ್‌ಗಳನ್ನು ಇದರಿಂದ ತೆಗೆದು ಬೇರೆಯದ್ದಕ್ಕೆ ಹಾಕಬೇಕು. ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಆದರೆ 26 ಕೂಡ ಇವತ್ತು ಯಾವ ಸುಧಾರಣೆಯ ಹಂತದಲ್ಲೂ ಇಲ್ಲ. ಆಮೇಲೆ ಉಳಿದಂಥ 40 ಏನಿವೆ, ಅದರಲ್ಲಿ ಕೂಡ ಸ್ವಲ್ಪಮಟ್ಟಿಗೆ ಲಾಭವಾಗಿದೆ. ಈ 40ರಲ್ಲಿ ತಾವೇ ಕೊಟ್ಟಂಥ ಅಂಕಿಅಂಶಗಳ ಪ್ರಕಾರ 195 ಕೋಟಿ ಇದರಲ್ಲಿ ಲಾಭ ಇದೆ. ಲುಕ್ಸಾನು ಇರತಕ್ಕಂಥಾದ್ದು 156 ಕೋಟಿ, 26 ಕಾರ್ಪೊರೇಷನ್‌ಗಳಲ್ಲಿ. ಇವತ್ತು ನಾವು ಎಷ್ಟು ಹೇಳಿದರೂ ಕೂಡ ಅಕ್ಯುಮಲೇಟಡ್ ಕೂಡ ಈ ಕಾರ್ಪೊರೇಷನ್ ಮತ್ತು ಬೋರ್ಡ್‌ಗಳಲ್ಲಿ ತೆಗೆದುಕೊಂಡರೆ ಅದರಲ್ಲಿ ಲಾಸ್‌ಕೂಡ ಲುಕ್ಸಾನು ಬರತಕ್ಕಂಥಾದ್ದು ಇದೆ. ಅದಕ್ಕಾಗಿ ಇವತ್ತು ನೀವು ಎಕ್ಸ್‌ಪರ್ಟ್ ಜನರನ್ನು ಈ ಬೋರ್ಡು ಮತ್ತು ಕಾರ್ಪೊರೇಷನ್‌ಗಳಿಗೆ ಹಾಕದೇಹೋದರೆ ಯಾವ ಬೋರ್ಡ್ ಕೂಡ ಉಳಿಯುವುದಿಲ್ಲ. ಪಬ್ಲಿಕ್ ಅಂಡರ್‌ಟೇಕಿಂಗ್ಸ್ ಯಾವುದು ಉಳಿಯುವುದಿಲ್ಲ. ಮತ್ತು ನೀವು ಏನು ಪಬ್ಲಿಕ್ ಅಂಡರ್‌ಟೇಕಿಂಗ್ಸನ್ನು ಹೇಗಾದರೂ ಉಳಿಸಿಕೊಳ್ಳಬೇಕೆಂದು ಏನು ಪ್ರಯತ್ನ ಮಾಡುತ್ತಿದ್ದೀರಿ, ಅದು ಸಾಧ್ಯವಾಗುವುದಿಲ್ಲ. ಅದಕ್ಕೆ ಇದರ ಬಗ್ಗೆ ಸರ್ಕಾರದವರು ಒಂದು ಉನ್ನತವಾದಂಥ ಕಮಿಟಿಯನ್ನು ಮಾಡಿ ಯಾವರೀತಿಯಾಗಿ ಇದನ್ನು ಬಲಪಡಿಸಬೇಕು, ಯಾವರೀತಿಯಾಗಿ ಲಾಭದಾಯಕವಾಗಿ ಮಾಡಬೇಕು ಎನ್ನತಕ್ಕಂಥಾದ್ದಕ್ಕೆ ಕೆಲವು ಆರ್ಥಿಕ ಸಲಹೆಗಾರರನ್ನು ಮತ್ತು ಆಡಳಿತ ತಜ್ಞರನ್ನು ಹಾಕಿ ಇಂತಹವರು ಇರತಕ್ಕಂಥ ಒಂದು ಕಮಿಟಿಯನ್ನು ಮಾಡಿ ಅವರು ಸಲಹೆ ಕೊಟ್ಟಿದ್ದನ್ನು ಇಂಪ್ಲಿಮೆಂಟ್ ಮಾಡತಕ್ಕದ್ದನ್ನು ಸರ್ಕಾರ ಮಾಡಬೇಕು ಎನ್ನತಕ್ಕಂಥ ಮಾತನ್ನು ಇವತ್ತು ನಾನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರುತ್ತೇನೆ. ಇದಾದಮೇಲೆ ನಾವು ಇವತ್ತು ಎಂಪ್ಲಾಯ್‌ಮೆಂಟ್ ಬಗ್ಗೆ ಸಾಕಷ್ಟು ಮಾತನಾಡುತ್ತಿದ್ದೇವೆ. ಪ್ರೈಮ್‌ಮಿನಿಸ್ಟರ್ ಜವಾಹರ್ ರೋಜಗಾರ್ ಯೋಜನೆ ಇರಬಹುದು ಅಥವಾ ನಮ್ಮಲ್ಲಿ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಹುದ್ದೆಗಳನ್ನು ಯಾವ್ಯಾವ ಫ್ಯಾಕ್ಟರಿಗಳಾಗಲೀ ಅಥವಾ ಸರ್ಕಾರವಾಗಲೀ ಕರೆದರೆ ಕೊಡತಕ್ಕಂಥಾದ್ದು ಇರಬಹುದು. ಆದರೆ ಇದು ಒಂದು ದೊಡ್ಡ ಸಮಸ್ಯೆ ಇದೆ. ಸುಮಾರು ಇವತ್ತು ನಮ್ಮ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಲ್ಲಿ ರಿಜಿಸ್ಟರ್ಡ್ ಆದಂಥ 18 ಲಕ್ಷ ಜನ ವಿದ್ಯಾವಂತರು ಇದ್ದಾರೆ.

5.50 ಪಿ.ಎಂ

ಇಂಥವರಿಗಾದರೂ ಕೂಡ ಉದ್ಯೋಗ ಕೊಡತಕ್ಕಂಥ ವ್ಯವಸ್ಥೆಯನ್ನು ತಾವು ಮಾಡಿದ್ದೀರಾ? ಕೇಂದ್ರ ಸರಕಾರದಲ್ಲಿ ಪ್ರತಿ ವರ್ಷವೂ ಎರಡು ಕೋಟಿ ಜನರಿಗೆ ಉದ್ಯೋಗವನ್ನು ಕೊಡುತ್ತಾರೆ ಎಂದು

ಮಾನ್ಯ ಸುರೇಶ್ ಕುಮಾರ್‌ರವರು ಮತ್ತು ಮಾನ್ಯ ಈಶ್ವರಪ್ಪನವರು ಹೇಳಿದರು. ಈ ಎರಡು ತಿಂಗಳ ಲೆಕ್ಕವನ್ನು ಹಾಕಿದರೆ ಹೆಚ್ಚು ಕಡಿಮೆ ಒಂದು ತಿಂಗಳಿಗೆ 6 ಲಕ್ಷ ಜನರಿಗೆ ಉದ್ಯೋಗ ಸಿಗಬೇಕಾಗಿತ್ತು. ಆದರೆ ನಮಗೆ ಕಳೆದ ಎರಡು ತಿಂಗಳುಗಳ ಲೆಕ್ಕ ಸಿಕ್ಕಿಲ್ಲ. ಆದರೆ ಕನಿಷ್ಠ ಪಕ್ಷ ಸರಕಾರದಲ್ಲಿರತಕ್ಕಂಥ ಖಾಲಿ ಹುದ್ದೆಗಳನ್ನಾದರೂ ತುಂಬಬೇಕು. 1 ಲಕ್ಷ, 10 ಸಾವಿರ ಹುದ್ದೆಗಳು ಇವೊತ್ತು ಖಾಲಿ ಇವೆ. ಇಷ್ಟು ಹುದ್ದೆಗಳು ಖಾಲಿ ಇರುವಾಗ ಇಷ್ಟೊಂದು ಪ್ರಮಾಣದಲ್ಲಿ ನಿರುದ್ಯೋಗವಿದ್ದರೂ ಕೂಡ ನೀವು ಅದನ್ನು ತುಂಬಲು ತಯಾರಾಗಿಲ್ಲ. ಇನ್ನೊಂದು ದೊಡ್ಡ ಹೊಡೆತ ಅಂದರೆ ಸರಕಾರಿ ನೌಕರರಿಗೆ 60 ವರ್ಷಕ್ಕೆ ನಿವೃತ್ತಿ ವಯಸ್ಸನ್ನು ಏರಿಸಿದ್ದಾರೆ. ಅಂದರೆ ಹೊಸ ರಕ್ತವು ಎಲ್ಲಿಂದ ಬರುತ್ತದೆ? ಕೇಂದ್ರದಲ್ಲಿ ಐದನೇ ವೇತನ ಸಮಿತಿಯು ನೀಡಿದ ಶಿಫಾರಸ್ಸುಗಳನ್ನು ಇಲ್ಲಿಯೂ ಮಾಡಬೇಕಾಗುತ್ತದೆ. ಅಲ್ಲಿನ ಪರಿಣಾಮ ಇಲ್ಲಿಯೂ ಆಗಬೇಕಾಗುತ್ತದೆ. ಇಲ್ಲಿಯೂ ಕೂಡ ಎಜಿಟೇಶನ್ ಆಗಿಯೇ ಆಗುತ್ತದೆ. ಈ ವಿಚಾರದಲ್ಲಿ ನಾವು ಮೂಲಭೂತವಾಗಿ ಒಪ್ಪಿಕೊಂಡ ಪ್ರಕಾರ ಅಲ್ಲಿ 60 ವರ್ಷಕ್ಕೆ ಏರಿಸಿದ್ದಾರೆ ಇಲ್ಲಿಯೂ ಮಾಡಿ ಅಂದರೆ ನೀವೂ ಕೂಡ ಕೇಂದ್ರ ಸರ್ಕಾರದವರು ಒಪ್ಪಿಕೊಂಡಿದ್ದಾರೆ ನಾವೇನು ಮಾಡುವುದು ಎಂದು ಹೇಳಬಹುದು. ಇಲ್ಲಿನ ನೌಕರರೂ ಕೂಡ ಧರಣಿ, ಸ್ಟ್ರೈಕ್ ಮಾಡುತ್ತಾರೆ ಎಂದು ಹೇಳುವ ಸಾಧ್ಯತೆ ಇರಬಹುದು. ಆದರೆ ಅವರು ಮಾಡಿದ ಈ ಕ್ರಮದ ದುಷ್ಪರಿಣಾಮಗಳನ್ನು ನೋಡಬೇಕು. ಅವರಿಗೆ 5000 ಕೋಟಿ ರೂಪಾಯಿಗಳನ್ನು ಉಳಿಯುತ್ತದೆ ಎಂದು ಹೇಳಿ ಸುಮಾರು ನಾಲ್ಕೂವರೆ ಲಕ್ಷ ಜನರಿಗೆ ನೌಕರಿ ಕೊಡುವುದಕ್ಕೋಸ್ಕರ ಎಕ್ಸ್‌ಟೆನ್‌ಷನ್ ಮಾಡಿದರು. ನಾವು ಸಾಮಾಜಿಕ ನ್ಯಾಯವನ್ನು ಕೊಡುತ್ತೇವೆ ಎಂದು ಹೇಳಿ ಘೋಷಣೆ ಮಾಡಿ, ಇವೊತ್ತು ಮಂಡಲ್ ವರದಿ ಪ್ರಕಾರ ಹೊಸದಾಗಿ ಐಎಎಸ್, ರೆವಿನ್ಯೂ ಆಫೀಸರ್ಸ್, ಕಸ್ಟಂ ಆಫೀಸರ್ಸ್ ಮುಂತಾಗಿ ಬೇರೆ ಬೇರೆ ಇಲಾಖೆಗಳಲ್ಲಿ ರಿಕ್ರೂಟ್‌ಮೆಂಟ್ ಮಾಡತಕ್ಕಂಥ ವಿಚಾರ ಇನ್ನೂ ಎರಡು ವರ್ಷಗಳ ನಿಂತು ಹೋದ ಹಾಗೆ ಆಯಿತು. ಅಲ್ಲಿ ವೇಕೆನ್ಸಿ ಇಲ್ಲವಾದರೆ ಹೊಸ ನೇಮಕಾತಿ ಎಲ್ಲಿಂದ ಮಾಡುತ್ತಾರೆ? ಇದು ಕೇಂದ್ರ ಸರಕಾರದವರು ಬಡವರ ಮತ್ತು ಹಿಂದುಳಿದ ವರ್ಗಗಳ ಮತ್ತು ಪರಿಶಿಷ್ಟ ಜಾತಿ ಜನಾಂಗದವರ ವಿರುದ್ಧ ಮಾಡಿದ ಸಂಚು ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಯಾಕೆಂದರೆ ಈ ಎರಡು ವರ್ಷಗಳಲ್ಲಿ 8-9 ಲಕ್ಷ ವೇಕೆನ್ಸಿ ಕ್ರಿಯೇಟ್ ಆಗುತ್ತಾ ಇತ್ತು. ಇದು ನಿವೃತ್ತಿಯಾಗುತ್ತಿದ್ದರೆ ತುಂಬಲು ಬರುತ್ತಿತ್ತು. ಅದರಲ್ಲಿ 50 ಪರ್‌ಸೆಂಟ್‌ನಷ್ಟು ಜನರು ಹಿಂದುಳಿದವರು, ಅಲ್ಪಸಂಖ್ಯಾತರು, ಹರಿಜನ-ಗಿರಿಜನರು ಮುಂತಾಗಿ ರೋಸ್ಟರ್ ಸಿಸ್ಟಂ ಪ್ರಕಾರ ಹೋಗುತ್ತಿದ್ದರು. ಈ ಒಂದು 50 ಪರ್ಸೆಂಟ್ ರಿಕ್ರೂಟ್‌ಮೆಂಟನ್ನು ತಪ್ಪಿಸಬೇಕೆಂದು ಅವರು ಎಕ್ಸ್‌ಟೆನ್‌ಶನ್ ಕೊಟ್ಟಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ನಾಳೆ ಏನಾದರೂ ಅವರ ಒತ್ತಾಯಕ್ಕೆ ಮಣಿದು ಮಾಡಲು ಹೊರಟರೆ ನಿಜವಾಗಿಯೂ ನಿಮ್ಮ ಜೀವನದುದ್ದಕ್ಕೂ ಯಾವ ತತ್ವಗಳನ್ನು ಪಾಲಿಸಿಕೊಂಡು ಬಂದಿದ್ದೀರಲ್ಲಾ? ಅದಕ್ಕೆ ದ್ರೋಹ ಬಗೆದ ಹಾಗೆ ಆಗುತ್ತದೆ. ಯಾವುದೇ ಒಂದು ಒಳ್ಳೆಯ ಮಾತಿಗೆ ಒಪ್ಪಿಕೊಂಡರೆ, ಒತ್ತಡಕ್ಕೆ ಒಪ್ಪಿಕೊಂಡರೆ, ಇಡೀ ಸಮಾಜವನ್ನು ನೀವು ನಿಮ್ಮ ಕೈಯಿಂದಲೇ ಮಣ್ಣನ್ನು ಹಾಕಿದ ಹಾಗೆ ಆಗುತ್ತದೆ. ದಯಮಾಡಿ ಅವರು 60 ವರ್ಷಗಳೆಂದು ಕೇಂದ್ರದವರು ಮಾಡಿದ್ದನ್ನು ನೀವು ಒಪ್ಪಿಕೊಳ್ಳಬೇಡಿ. ಆ ಕುರಿತು ನಮ್ಮಲ್ಲಿ ಒಂದು ರೆಸಲ್ಯೂಷನ್ ತಂದು ಅದರ ಮೇಲೆ ಚರ್ಚೆ ಆಗಬೇಕೆಂದು ಎಲ್ಲರೂ ಹೇಳಿದ್ದಾರೆ. ನಮ್ಮ ಅನಿಸಿಕೆಯು

ಅವರಿಗೆ ಗೊತ್ತಾಗಲು ಒಂದು ರೆಸಲ್ಯೂಷನ್ ಮಾಡಿ ಅವರಿಗೆ ಕಳುಹಿಸೋಣ. ಅದರ ಮೂಲಕ ನೀವು ಮಾಡಿದ್ದು ಸರಿ ಅಲ್ಲ ಎಂದು ಅವರಿಗೆ ಹೇಳಬೇಕು. ಅವರಿಗೆ ಹೀಗೆ ಯಾರದರೂ ಒಬ್ಬರು ಹೇಳಿದಾಗ ಗೊತ್ತಾಗುತ್ತದೆ. ನಾವು ಅಲ್ಲಿ ನ್ಯೂಕ್ಲಿಯರ್ ಬಾಂಬ್ ಟೆಸ್ಟ್ ಮಾಡಿದಾಗ ಅವರಿಗೆ ಅಭಿನಂದನೆಗಳನ್ನು ಕಳುಹಿಸಿದ್ದೇವೆ. ಹಾಗೆ ಅಭಿನಂದನೆಗಳನ್ನು ರೆಸಲ್ಯೂಷನ್ ಮಾಡಿ ಕಳುಹಿಸಬೇಕೆಂದು ಇರಲಿಲ್ಲ. ಆದರೂ ಕೂಡ ಒಂದು ವಿಜ್ಞಾನಿಗಳಿಗೆ, ಇಂಜನಿಯರ್‌ಗಳಿಗೆ ನಮ್ಮ ಶ್ಲಾಘನೆ ಎಂದು ಹಾಗೆ ಮಾಡಿದ್ದೇವೆ. ಅದೇ ರೀತಿಯಲ್ಲಿ ಸಮಾಜಕ್ಕೆ ಅನ್ಯಾಯ, ತೊಂದರೆಯಾಗುತ್ತಿದೆ ಅಂದರೆ ನಾವು ಅನ್ಯಾಯ ಆಗುತ್ತಿದೆ ಎಂಬುದನ್ನು ಕೇಂದ್ರ ಸರಕಾರದ ಗಮನಕ್ಕೆ ತರಬೇಕಾಗುತ್ತದೆ. ಜೊತೆಗೆ ನಿಮ್ಮಲ್ಲಿ ಇರತಕ್ಕಂಥ 1 ಲಕ್ಷ 10 ಸಾವಿರ ವೇಕೆನ್ಸಿಗಳೇನಿವೆ ಅವುಗಳನ್ನು ತುಂಬಬೇಕು. ಯಾಕೆಂದರೆ ಅದರಲ್ಲಿ ವೀಕರ್ ಸೆಕ್ಷನ್ಸ್‌ಗೆ 23 ಪರ್ಸೆಂಟ್‌ನಷ್ಟು ಉದ್ಯೋಗ ಸಿಗುತ್ತದೆ. ಅವರಿಗೆ ಬೇರೆ ಉದ್ಯೋಗವಿಲ್ಲ. ಅನೇಕ ಜನ ಪಧವೀದರರು, ಇಂಜನಿಯರ್ಸ್ ಮುಂತಾಗಿ ಖಾಲಿ ಇದ್ದಾರೆ. ಅವರಿಗೆ ಇದರಲ್ಲಿ ನೌಕರಿ ಸಿಗಬೇಕು. ಹಾಗೆ ಮಾಡಿದರೆ ಹೊಸರಕ್ತಕ್ಕೆ ನೀವು ಅವಕಾಶ ಮಾಡಿಕೊಟ್ಟ ಹಾಗೆ ಆಗುತ್ತದೆ. ನೀವು ಎಕಾನಮಿ ನೆಪದಲ್ಲಿ ಯಾರಿಗೆ ಹಕ್ಕುಗಳು ಸಿಗಬೇಕು, ಯಾರು ಸಾವಿರಾರು ವರ್ಷಗಳ ನಂತರ ತಮ್ಮ ಹಕ್ಕುಗಳನ್ನು ಪಡೆದುಕೊಂಡಿದ್ದಾರೆ, ಆ ಹಕ್ಕನ್ನು ರಕ್ಷಣೆ ಮಾಡತಕ್ಕಂಥ ಜವಾಬ್ದಾರಿಯು ನಿಮ್ಮ ಮೇಲಿದೆ. ಅವರಿಗೆ ಸಹಾಯ ಮಾಡುವುದೂ ಕೂಡ ನಿಮ್ಮ ಕರ್ತವ್ಯವಾಗಿದೆ. ಅಂಥ ಒಂದು ನೇಮಕಾತಿಗಳನ್ನು ತಾವು ಮಾಡುತ್ತೀರಿ ಮತ್ತು ನಮ್ಮಲ್ಲಿರತಕ್ಕಂಥ ಹೊಸ ದಾರಿಗಳನ್ನು ಹೊಸ ಯೋಜನೆಗಳನ್ನು ಮಾಡುವುದರ ಮೂಲಕ ತಾವು ಹೊಸ ಸುಧಾರಣೆಯನ್ನು ಮಾಡಿ ತೋರಿಸುತ್ತೀರಿ ಎಂದು ನಾನು ತಮ್ಮಲ್ಲಿ ಕಳಕಳಿ ಇಂದ ಕೇಳಿಕೊಳ್ಳುತ್ತೇನೆ. ನಮಗೆ ಅನೇಕ ಡೈರೆಕ್ಷನ್ಸ್ ಹೈಕೋರ್ಟ್‌ನಿಂದ ಬರುತ್ತವೆ. ಆದರೆ ಅವರ ಕೆಲಸವನ್ನೂ ಕೂಡ ತಾವು ನೋಡಬೇಕು. ಅಲ್ಲಿ ಎಷ್ಟು ಕೇಸ್‌ಗಳು ಪೆಂಡಿಂಗ್ ಇವೆ ಎಂಬುದನ್ನು ನೋಡಬೇಕು. ಕೆಲವು ಕೇಸ್‌ಗಳಲ್ಲಿ 20-30-40 ವರ್ಷಗಳಾದರೂ ತೀರ್ಮಾನವಾಗದೇ ಹಾಗೆಯೇ ಇವೆ. ಅದೇ ಕೆಲವು ಪಿಟಿಷನ್‌ಗಳು ಹೋದರೆ ಅನೇಕ ಸಾರಿ ಅದರ ಮೇಲೆ ಆರ್ಡರ್ ಆಗಿ ಎಂಟು ದಿನಗಳಲ್ಲಿ ತೀರ್ಮಾನವಾದವುಗಳೂ ಕೂಡ ಇವೆ. ಅಂದರೆ ನಾವು ಇದರ ಬಗ್ಗೆ ಯಾವರೀತಿಯಾಗಿ ರಿವ್ಯೂ ಮಾಡಬೇಕೆಂಬುದನ್ನು ನೋಡಬೇಕು. ಮಾನ್ಯ ಚೀಫ್‌ಜಸ್ಟೀಸ್‌ರವರ ಜೊತೆಗೆ ಮೀಟಿಂಗ್ ಮಾಡಿ. ಲಾ ಮಿನಿಸ್ಟರ್, ತಾವುಗಳು, ಅಡ್ವೋಕೇಟ್ ಜನರಲ್ ಮುಂತಾಗಿ ಕುಳಿತು ಹತ್ತಾರು ವರ್ಷಗಳಿಂದ ಉಳಿದ ಕಡತಗಳನ್ನು ವಿಲೇವಾರಿ ಮಾಡಲು ಕ್ರಮ ಜರುಗಿಸುವ ಬಗ್ಗೆ ಚರ್ಚಿಸಿ. ಇದಕ್ಕೆ ಮುಕ್ತಿ ಯಾವಾಗ, ಇದಕ್ಕೆ ಯಾವ ರೀತಿಯಿಂದ ಮುಕ್ತಿ ಮಾಡುತ್ತಾರೆ, ಎಂಬ ಬಗ್ಗೆ ಚರ್ಚೆ ಮಾಡಿ ಏನಾದರೂ ಒಂದು ದಾರಿಯನ್ನು ಕಂಡುಹಿಡಿಯದೇ ಹೋದರೆ ಅನೇಕ ಬಡವರಿಗೆ ನ್ಯಾಯ ಸಿಗುವುದಿಲ್ಲ. ನಾನು ಕೋರ್ಟ್‌ನವರನ್ನು ದ್ವೇಷ ಮಾಡುತ್ತೇನೆಂದು ಅಲ್ಲ. ಆದರೆ ಈ ಕುರಿತು ಗಮನಕೊಡುವಂಥಾದ್ದು ಬಹಳ ಮುಖ್ಯ. ಜನರು ನಾವು ರಚಿಸಿರತಕ್ಕಂಥ ಕಾನೂನಿನ ಪ್ರಕಾರ ನ್ಯಾಯ ಸಿಗುತ್ತದೆಂದು ನಂಬಿದ್ದಾರೆ. ನಾವು ಅಂಥ ಸೌಲಭ್ಯಕ್ಕೆ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಕೆಲವು ಕಾನೂನುಗಳಲ್ಲಿ ಕೋರ್ಟ್‌ಗೆ ಹೋಗಲು ಅವಕಾಶವಿರುವುದಿಲ್ಲ. ಉದಾಹರಣೆಗೆ ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಟ್ರಿಬ್ಯೂನಲ್ ಫೈನಲ್ ಅಥಾರಿಟಿಯಾಗಿರುತ್ತದೆ. ಹೋದರೆ ಸುಪ್ರೀಂಕೋರ್ಟ್‌ಗೆ

ಹೋಗುತ್ತಾರೆ, ಅಥವಾ ಹೈಕೋರ್ಟ್‌ನಲ್ಲಿ ಒಂದು ರಿಟನ್ನು ಹಾಕುತ್ತಾರೆ. ಅವರಿಂದ ಕೆಲಸ ಆಗುವುದಿಲ್ಲ ಎಂದು ಎಲ್ಲಾ ವಿಚಾರಗಳಲ್ಲಿ ಹೇಳಲು ಬರುವುದಿಲ್ಲ. ಆದರೆ ಒಂದು ವಿಚಾರ ಚರ್ಚೆಯಾಗತಕ್ಕಂಥಾದ್ದು ಅಂದರೆ, ತಮ್ಮ ಹಾಗೂ ಚೀಫ್ ಜಸ್ಟೀಸ್‌ರವರ ಮಟ್ಟದಲ್ಲಿ ಏನಾದರೂ ಒಂದು ಪರಿಹಾರೋಪಾಯವನ್ನು ಕಂಡುಹಿಡಿಯುವ ಅವಶ್ಯಕತೆಯು ಇದೆ ಎಂದು ಹೇಳಬಯಸುತ್ತೇನೆ. ಆ ಕೆಲಸವನ್ನು ತಾವು ಮಾಡುತ್ತೀರಿ ಎಂದು ನಂಬಿದ್ದೇನೆ. ಇನ್ನೊಂದು ವಿಚಾರ ಅಂದರೆ, ನಿಮ್ಮಲ್ಲಿ ಫಾರಿನ್ ಟೂರ್ಸ್ ತುಂಬಾ ಹೆಚ್ಚು ಆಗಿದೆ. ತಾವುಗಳೂ ಕೂಡ ಧಾರಾಳವಾಗಿ ಹೋಗುತ್ತಾ ಇದ್ದೀರಿ. ಮತ್ತೆ ನಾವು ಹೋಗುತ್ತೀರಿ ಎಂದು ಕಾಣುತ್ತದೆ. ತಾವುಗಳೂ ಹೋಗಬೇಕು. ತಮ್ಮ ಆರೋಗ್ಯ ಸುಧಾರಣೆಗಾಗಿ ಹೋಗುತ್ತಿದ್ದೀರಿ. ತಮ್ಮ ಆರೋಗ್ಯವನ್ನು ಸರಿಪಡಿಸಿಕೊಂಡು ಬಂದು ಇಲ್ಲಿ ಒಳ್ಳೆಯ ಸೇವೆಯನ್ನು ಮಾಡಬೇಕು. ಆದರೆ ಕೆಲವರು ಅನೇಕ ಸಾರಿ ಸಣ್ಣ ಸಣ್ಣ ಕಾರಣಕ್ಕಾಗಿ ಟೂರ್ ಹೋಗುತ್ತಾರೆ. ನಿಮ್ಮ ಅಧಿಕಾರಿಗಳು 80 ಸಾರಿ ಹೋಗಿದ್ದಾರೆ. ನಿಮ್ಮ ಮಂತ್ರಿಗಳೆಲ್ಲರೂ ಹೋಗಿರುವುದನ್ನು ಲೆಕ್ಕ ಹಾಕಿದರೆ ಸುಮಾರು 200 ಸಲ ಆಗಿರಬಹುದು. 80 ಜನ ಅಧಿಕಾರಿಗಳು 120 ಮಂತ್ರಿಗಳು ವಿದೇಶ ಪ್ರಯಾಣ ಮಾಡಿದ್ದಾರೆ. ಮಾನ್ಯ ದೇಶಪಾಂಡೆಯವರು ಹೋದಷ್ಟು ಸಾರಿ ಯಾರೂ ಹೋಗಿಲ್ಲ ಎಂದು ಕಾಣುತ್ತದೆ. ಅವರು ರಾಜ್ಯಕ್ಕೆ ಒಳ್ಳೆಯ ಸೇವೆಯನ್ನು ಮಾಡಿದರು. ಹೀಗೆ ವಿದೇಶಕ್ಕೆ ಹೋಗುವುದರಿಂದ ಆದ ಪ್ರಯೋಜನ ಏನು? ತಾವುಗಳು ಈ ಸದನದಲ್ಲಿ ಅನೇಕ ವರ್ಷಗಳ ಕಾಲ ಶಾಸಕರಾಗಿ, ಮಂತ್ರಿಗಳಾಗಿ, ಮುಖ್ಯಮಂತ್ರಿಗಳಾಗಿ, ಲೋಕಸಭಾ ಸದಸ್ಯರಾಗಿ ಕೆಲಸ ಮಾಡಿದವರು. ಯಾವ ಸರಕಾರದಲ್ಲಿ ಇಷ್ಟೊಂದು ಪ್ರಮಾಣದಲ್ಲಿ ಮಂತ್ರಿಗಳು, ಅಧಿಕಾರಿಗಳು ವಿದೇಶಪ್ರಯಾಣಕ್ಕೆ ಹೋಗಿದ್ದರು ಎಂಬುದನ್ನು ತಾವು ವಿವರ ತರಿಸಿ ನೋಡಿಕೊಳ್ಳಿ. ಮಾನ್ಯ ದೇವರಾಜ ಅರಸ್ ಮಾನ್ಯ ಗುಂಡೂರಾವ್ ಮಾನ್ಯ ಮೊಯಿಲಿ, ಮಾನ್ಯ ಬಂಗಾರಪ್ಪನವರು ಮುಂತಾಗಿ ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಎಷ್ಟು ಜನ ಹೋಗಿದ್ದಾರೆ ಎಂಬುದನ್ನು ತುಲನೆ ಮಾಡಿ ನೋಡಿ. ಕೆಲವು ಜನ ಹೇಳುತ್ತಾರೆ, ಖರ್ಚು ನಮ್ಮದು ಇಲ್ಲ ಎಂದು ಹೇಳಿ, ಇಲ್ಲಿ ಪರ್ಮಿಷನ್ ತೆಗೆದುಕೊಂಡು ಹೋಗುವುದು ಬಾಕಿ ಒಂದು 10 ದಿವಸ 20 ದಿವಸ ಬೇರೆ ಕಡೆ ಮಜಾ ಮಾಡಿಕೊಂಡು ಬರುವುದು. ಇದನ್ನು ಬಿಟ್ಟರೆ ಅವರು ಬೇರೆ ಯಾವ ಕೆಲಸವನ್ನೂ ಕೂಡ ಮಾಡಿಲ್ಲ ಎಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಎಲ್ಲಿ ಅವಶ್ಯಕತೆ ಇದೆ, ಎಲ್ಲಿ ಒಂದು ಅಗ್ರಿಮೆಂಟ್‌ಗೆ ಸಹಿ ಮಾಡಬೇಕು ಅಥವಾ ಇವರು ಹೋಗಿ ಬಂದಿದ್ದರಿಂದ ಏನಾದರೂ ಹಣ ಸಿಗುತ್ತಿತ್ತು, ಎಂದು ಅಂಥಾದ್ದು ಒಂದೋ ಎರಡೋ ಇದ್ದರೆ ಅವುಗಳನ್ನು ಹೇಳಿದರೆ ನಾವು ಒಪ್ಪಿಕೊಳ್ಳೋಣ. ಸಣ್ಣ ಸಣ್ಣ ಕಾರಣಕ್ಕೆ ಇವರೇ ಅಲ್ಲಿಂದ ಒಂದು ಇನ್‌ವಿಟೇಷನ್ ತರಿಸಿಕೊಳ್ಳುವುದು, ನನಗೆ ಒಂದು ಇನ್‌ವಿಟೇಷನ್ ಬಂದಿದೆ ಸಾರ್ ಎಂದು ಹೇಳಿ ಇವರ ಮುಂದೆ ಇಡುವುದು, ನಾನು ಹೋಗಿ ಬಂದಿದ್ದೇನೆ ಇನ್ನು ಇವನಿಗೆ ನಾನು ಪರ್ಮಿಷನ್ ಕೊಡದಿದ್ದರೆ ನಾಳೆ ಎಲ್ಲಿ ನನಗೆ ಕಾಡುತ್ತಾರೋ ಎಂದು ಹೇಳಿ ಅವರಿಗೂ ಪರ್ಮಿಷನ್ ಕೊಡುವುದು, ಅವರು ನಾಲ್ಕು ದಿವಸದ ಕೆಲಸ ಇದ್ದರೆ, 40 ದಿವಸ ಹೋಗುವುದು, ಒಬ್ಬೊಬ್ಬ ಮಂತ್ರಿಗಳು 20 ದಿವಸ 30 ದಿವಸ ಹೋಗಿ ಬಂದಿದ್ದಾರೆ. ನೋಡಿ ನಾನೇನೂ ಕೊಡಬೇಕೆಂದು ಇಲ್ಲ. ನಿಮ್ಮನ್ನು ಕೇಳಿಕೊಂಡೇ ಹೋಗಿದ್ದಾರೆ. ಅದಕ್ಕೆ ನಾನು ಹೇಳುತ್ತೇನೆ ಇದು ಕಡಿಮೆ ಮಾಡಬೇಕು, ಎಲ್ಲಿ ಅವಶ್ಯಕತೆ ಇದೆಯೋ ಅಲ್ಲಿ ಮಾಡಿ, ಇವತ್ತು ನೌಕರಿಗೆ ತೆಗೆದುಕೊಳ್ಳುವಂತಹ

ಜನರಿಗೆ ರಿಕ್ರೂಟ್‌ಮೆಂಟ್ ನಾನು ತೆಗೆದುಕೊಳ್ಳುವುದಿಲ್ಲ ಎಂದು ಬ್ಯಾನ್ ಮಾಡಿದ್ದೀರಿ. ಇನ್ನೊಂದು ಕಡೆ ತಾವು ಕೋಟ್ಯಾಂತರ ರೂಪಾಯಿಗಳನ್ನು ನಾವು ಇವತ್ತು ಖರ್ಚು ಮಾಡುತ್ತಿದ್ದೇವೆ. ದಯವಿಟ್ಟು ಇದನ್ನು ತಾವು ತಡೆಗಟ್ಟಬೇಕು ಮತ್ತು ಇದು ಸರಿ ಅಲ್ಲ ಎನ್ನತಕ್ಕಂಥ ಮಾತನ್ನು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನೊಂದು ನಾನು ಈ ಮೀಸಲಾತಿಯ ಬಗ್ಗೆ ಸಾಕಷ್ಟು ಸಾರಿ ಪ್ರಸ್ತಾಪ ಮಾಡಿದ್ದೇನೆ. ನಾನು ಒಂದು ಎರಡು ಮೂರು ಸಲ ಈ ವಿಷಯವನ್ನು ಪ್ರಸ್ತಾಪ ಮಾಡಿರಬೇಕು, ಅವರಿಗೂ ಕೂಡ ಒಂದು ಸಾರಿ ನಾನು ಕರೆಸಿ ಹೇಳುತ್ತೇನೆಂದು ಹೇಳಿದ್ದರು. ಮಾನ್ಯ ಸಾಣಯ್ಯನವರು ಒಂದು ಸರ್ಕಾರಿ ಆಜ್ಞೆಯನ್ನು ಒಂದು ವರ್ಷದ ಮೇಲೆ ಅದೂ 10 ಸಲ ಇಲ್ಲಿ ಹೇಳಿದ ಮೇಲೆ ಮಾಡಿದರು. ಆದರೆ ಆ ಸಿಂಗಲ್ ಪೋಸ್ಟ್ ಏನು ಇದೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರನ್ನು ತೆಗೆದುಕೊಳ್ಳಬೇಕೆಂದು ಸರ್ಕಾರಿ ಆಜ್ಞೆಯೇ ಇದೆ. ಫಿಲ್‌ಅಪ್ ಮಾಡಬೇಕೆಂದು ಇದೆ. ಬ್ಯಾಕ್‌ಲಾಗ್ ಪಿಲ್‌ಅಪ್ ಮಾಡಬೇಕೆಂದು ಇದೆ. ಇವತ್ತು ಬ್ಯಾಕ್‌ಲಾಗ್ ಏನು, ರೆಗ್ಯುಲರ್ ರಿಕ್ರೂಟ್‌ಮೆಂಟ್ ಆಗಲಿಲ್ಲ ಅಂದರೆ ಜನರನ್ನು ನೀವು ಎಲ್ಲಿಂದ ತುಂಬುತ್ತೀರಿ? ತುಂಬುವ ಪ್ರಶ್ನೆಯೇ ಇಲ್ಲ. ನಾನು ಈ ಬ್ಯಾಕ್‌ಲಾಗ್ ಬಗ್ಗೆ ಪದೇ ಪದೇ ಇಲ್ಲಿ ಕೇಳಿ ಕೇಳಿ ಸಾಕಾಗಿದೆ. ಏನಪ್ಪಾ ಇವರು ಯಾವಾಗಲೂ ಇದೇ ಮಾತನಾಡುತ್ತಾರಲ್ಲಾ ಎನ್ನುವ ಬೇಸರ ಸಹ ಬರಬಹುದು. ಆದರೆ ಕೆಲಸ ಆಗಲಿಲ್ಲ ಅಂದರೆ ನಾನು ಎಲ್ಲಿ ಹೇಳುವುದು? ಇಲ್ಲಾ ನಾವು ಸದನದಲ್ಲಿ ಪ್ರಸ್ತಾಪ ಮಾಡಬೇಕು ಇಲ್ಲ ನೀವು ಕ್ಯಾಬಿನೆಟ್‌ನಲ್ಲಿ ಇದಕ್ಕಾಗಿಯೇ ಕುಳಿತು ಚರ್ಚೆ ಮಾಡಿ ಆಜ್ಞೆ ಹೊರಡಿಸಿ ಇಲ್ಲ ಇಷ್ಟು ದಿವಸದ ಮೇಲೆ ಇಷ್ಟು ವೇಕೆನ್ಸಿಗಳು ಬ್ಯಾಕ್‌ಲಾಗ್ ಇವೆ, ಇವುಗಳನ್ನು ಫಿಲ್‌ಅಫ್ ಮಾಡಿ ಆಮೇಲೆ ನನಗೆ ತಾವು ಮುಖ ತೋರಿಸಿ ಎಂದು ಮುಖ್ಯ ಕಾರ್ಯದರ್ಶಿಗಳಿಗೆ ತಾವು ಹೇಳಬೇಕು. ನೀವು ಯಾರಾದರೂ ಈ ಜವಾಬ್ದಾರಿಯನ್ನು ವಹಿಸಿಕೊಳ್ಳದೇ ಹೋದರೆ ಈ ಕೆಲಸಗಳು ಆಗುವುದಿಲ್ಲ. ಅವರಿಗೂ ಆಸಕ್ತಿ ಇರುವುದಿಲ್ಲ. ಅನೇಕ ಸಾರಿ ಏನಾಗುತ್ತದೆ ಅಂದರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಅವರಿಗೆ ಪ್ರಮೋಷನ್ ಸಿಗುತ್ತದೆ ಎನ್ನುವ ಆಸೆಗೋಸ್ಕರ ಅವರೂ ಕೂಡ ಆಸಕ್ತಿ ವಹಿಸುವುದಿಲ್ಲ. ನಮ್ಮ ಜಾಗದಲ್ಲಿ ಇನ್ನೊಬ್ಬರು ಬರುತ್ತಾರೆ ಎನ್ನತಕ್ಕಂಥ ದೃಷ್ಟಿಯಿಂದ, ಅಥವಾ ರಿಕ್ರೂಟ್‌ಮೆಂಟ್ ಆದರೆ ಟೆಂಪರರಿಯಾಗಿ ತೆಗೆದುಕೊಂಡಂತಹ ಜನ ಅವರು ನಮ್ಮ ಜಾಗಗಳು ಹೋಗಿ ಖಾಯಂ ಆಗಿ ಇರತಕ್ಕಂಥವರು ಬರುತ್ತಾರೆಂದು ಹೇಳಿ ಈ ರೀತಿ ಆಗಿಯೇ ಏನಾಯಿತು ಅಂದರೆ ಸಿರಿಕಲ್ಚರ್, ಹಾರ್ಟಿಕಲ್ಚರ್, ಮತ್ತು ಲೋಕೋಪಯೋಗಿ ಇಲಾಖೆಗಳಲ್ಲಿ ಸಾವಿರಾರು ಜನರನ್ನು ಟೆಂಪರರಿಯಾಗಿ ತೆಗೆದುಕೊಂಡವರಿಗೆ ಸುಪ್ರೀಂ ಕೋರ್ಟ್ ಆಜ್ಞೆ ತಂದು ಅವರನ್ನು ಖಾಯಂ ಮಾಡತಕ್ಕಂಥಾದ್ದು ಆಯಿತು. ಏಕೆಂದರೆ ವೇಕೆಂಟ್ ಇರುತ್ತಿತ್ತು ಆದರೆ ನಾವು ಇಲ್ಲಿ ರೆಗ್ಯುಲರ್ ರಿಕ್ರೂಟ್‌ಮೆಂಟ್ ಮಾಡುತ್ತಿರಲಿಲ್ಲ. ಆದರೆ ಇಲ್ಲಿ ಕೆಲಸ ನಿಲ್ಲಬಾರದು ಎಂದು ಹೇಳಿ ಅಲ್ಲಿ ದಿನಗೂಲಿ ಆಧಾರದ ಮೇಲೆ ತೆಗೆದುಕೊಳ್ಳುವುದು ಆಮೇಲೆ ಅವರನ್ನು ಖಾಯಂ ಮಾಡುವುದು. ಯಾವುದೋ ಒಂದು ಆರ್ಡರ್ ತಂದು. ಆದರೆ ಇಲ್ಲಿ ಬ್ಯಾಕ್‌ಲಾಗ್ ತುಂಬಿ ಅಂದರೆ ಒಂದು ಕ್ವೊರಿ ಮೇಲೆ ಒಂದು ಕ್ವೊರಿ ಹಣಕಾಸು ಇಲಾಖೆಯದ್ದು ಕ್ವೊರಿ, ಡಿಪಿಎಆರ್ ನವರದ್ದು ಕ್ವೊರಿ ಮೂರನೆಯದು ಅದನ್ನು ಕ್ಯಾಬಿನೆಟ್‌ನಲ್ಲಿ ಯಾರೂ ನೋಡುವುದಿಲ್ಲ. ಆಮೇಲೆ ಹಿಂದಕ್ಕೆ ತಳ್ಳಿಕೊಂಡು ಈ ರೀತಿಯಾಗಿ ಹೋಗುತ್ತಿದೆ. ನಾನು ಈ ಸದನದಲ್ಲಿ ಈ ವಿಷಯವಾಗಿ ಮೂರು ಸಲ ಪ್ರಸ್ತಾಪ ಮಾಡಿದ್ದೇನೆ. ರೂಲ್

8ರ ಪ್ರಕಾರ ಕೆ.ಸಿ.ಎಸ್.ಆರ್. ಜನರಲ್ ರಿಕ್ರೂಟ್‌ಮೆಂಟ್ ರೂಲ್ಸ್ ಇದರ ಬಗ್ಗೆ ಸಿಂಗಲ್ ಪೋಸ್ಟ್ ಏನು ಇದೆ ಅದನ್ನು ಪ್ರೊವೈಡ್ ಮಾಡಬೇಕು ಎನ್ನತಕ್ಕಂಥಾದ್ದನ್ನು ನಾವು ಈಗಾಗಲೇ ಒಪ್ಪಿಕೊಂಡಂತಾದ್ದು, ಅದಕ್ಕೆ ತಾವು ಮೀಸಲಾತಿಯನ್ನು ಕೂಡ ತರುತ್ತಿಲ್ಲ, ಇದು ಒಂದು ದೊಡ್ಡ ಅನಾಹುತವಾಗಿದೆ. ಅದಕ್ಕೆ ಕೂಡಿಸಿ ತರಬೇಕು ಎನ್ನತಕ್ಕಂಥಾದ್ದೂ ಕೂಡ ಇದೆ. ಒಂದು ಪ್ರೊಫೆಸರ್ ಪೋಸ್ಟ್ ಇದ್ದರೆ ಅವರು ಏನು ಮಾಡುತ್ತಾರೆ ಅಂದರೆ ಇವರನ್ನು ಅವಾಯ್ಡ್ ಮಾಡುವುದಕ್ಕೆ ನಾನು ಒಂದು ಉದಾಹರಣೆಯನ್ನು ಹೇಳುತ್ತೇನೆ. ಯಾವುದೋ ಒಂದು ಕಾಲೇಜಿನಲ್ಲಿ ಎಕನಾಮಿಕ್ಸ್ ಪ್ರೊಫೆಸರ್ ಪೋಸ್ಟ್ ಇದೆ ಎಂದು ತಿಳಿದುಕೊಳ್ಳಿ. ಅವರು ಏನೋ ಮಾಡುತ್ತಾರೆ ಎಂದರೆ ಸಿಂಗಲ್ ಪೋಸ್ಟ್‌ಗೆ ರಿಸರ್ವೇಷನ್ ಇಲ್ಲ ಎನ್ನುವ ಒಂದು ಇಂಟರ್ ಪ್ರಿಟೇಷನ್‌ನಿಂದ ಒಂದೇ ಪೋಸ್ಟ್ ಮಾಡುವುದು. ಅದು ಮುಗಿದ ತಕ್ಷಣ 8 ದಿವಸ ಆದ ಮೇಲೆ ಸೋಷಿಯಾಲಜಿ ಪೋಸ್ಟ್ ಪ್ರೊಫೆಸರ್ ಅನ್ನು ತುಂಬುವುದು ಅದು ಆದ ತಕ್ಷಣ ಕೆಮಿಸ್ಟ್ರಿ ಪ್ರೊಫೆಸರ್ ಪೋಸ್ಟ್ ತುಂಬುವುದು. ಹೀಗೆ ಯೂನಿವರ್ಸಿಟಿಗಳಲ್ಲಿ ಕಾಲೇಜುಗಳಲ್ಲಿ ಮತ್ತು ಖಾಸಗಿ ಅನುದಾನ ಸಂಸ್ಥೆಗಳಲ್ಲಿ ಸಿಂಗಲ್ ಪೋಸ್ಟ್ ಮಾಡಿ ತುಂಬುವುದು, ನಾಲ್ಕು ಪೋಸ್ಟ್‌ಗಳಲ್ಲಿ ಒಟ್ಟಿಗೆ ತಂದು ಅವರು ಯಾವುದರಲ್ಲಿ ಅವೇಲಿಬಲ್ ಇರುತ್ತಾರೋ ಅದರಲ್ಲಿ ಮೀಸಲಾತಿಯನ್ನು ಕೊಟ್ಟು ಮಾಡುವುದಿಲ್ಲ. ಏಕೆ ಮಾಡುವುದಿಲ್ಲ ಅಂದರೆ ಅವರನ್ನು ಹೇಗಾದರೂ ಮಾಡಿ ಅವಾಯ್ಡ್ ಮಾಡಬೇಕೆಂದು ಮಾಡುವುದಿಲ್ಲ. ಹೀಗೆ ಮಾಡಿ ಕಾನೂನು ಎಲ್ಲೆಲ್ಲಿ ಮುರಿಯಬೇಕು ಎಲ್ಲೆಲ್ಲಿ ವೈಲೇಟ್ ಮಾಡಬೇಕು ಅಲ್ಲೆಲ್ಲಾ ರೂಲ್ಸ್ ಅಂಡ್ ರೆಗ್ಯುಲೇಷನ್ ವೈಲೇಟ್ ಮಾಡುತ್ತಿದ್ದಾರೆ. ಇದನ್ನು ಡಿ ಪಿ ಎ ಆರ್ ಅವರೇ ನೋಡಬೇಕು. ಅದರ ಜವಾಬ್ದಾರಿ ತಮಗೆ ಇದೆ. ಇದರ ಬಗ್ಗೆ ತಾವು ಇದುವರೆಗೂ ಚಿಂತನೆ ಮಾಡಿಲ್ಲ. ಒಂದು ಮೀಟಿಂಗ್ ಕರೆದು ಇದು ಏನು ಸಮಸ್ಯೆ ಇದೆ ಎಂದು. ಇಲ್ಲಾ ಸಮಾಜ ಕಲ್ಯಾಣ ಇಲಾಖೆಯವರನ್ನು ಕರೆದು ಅವರು ನೀವು ಕುಳಿತುಕೊಂಡು ಚಿಂತನೆಯನ್ನೂ ಕೂಡ ಮಾಡಿಲ್ಲ. ತಾವು ಮುಖ್ಯಮಂತ್ರಿಗಳಾಗಿ ಬಂದು ಎರಡು ವರ್ಷಗಳು ಆಯಿತು. ಎರಡು ವರ್ಷಗಳಿಂದ ಕೂಡ ನಾವು ಹೇಳುತ್ತಿದ್ದೇವೆ. ಇದನ್ನು ಯಾರಿಗಾದರೂ ಒಬ್ಬರಿಗೆ ವಿಶೇಷವಾಗಿ ಒಪ್ಪಿಸಿ ಇನ್ನು ಮೂರು ತಿಂಗಳ ಒಳಗಾಗಿ ನೀವು ಈ ಬ್ಯಾಕ್‌ಲಾಗ್ ತುಂಬುವ ಕೆಲಸ ಮಾಡಬೇಕು, ಕಾನೂನು ತೊಡಕುಗಳು ಏನು ಇವೆ ಅವುಗಳನ್ನು ಸರಿಪಡಿಸಬೇಕು ಎಂದು ಹೇಳಿ ಅಡ್ವೊಕೇಟ್ ಜನರಲ್‌ಗೆ, ಕಾನೂನು ಕಾರ್ಯದರ್ಶಿಯವರಿಗೆ, ಡಿ ಪಿ ಎ ಆರ್‌ನವರಿಗೆ ಮತ್ತು ಸಮಾಜ ಕಲ್ಯಾಣ ಇಲಾಖೆಯವರಿಗೆ and a man who is committed to this reservation policy, ಅವರಿಗೆ ಒಬ್ಬರಿಗೆ ಸೇರಿಸಿ ನೀವು ಒಂದು ಟೈಮ್ ಬೌಂಡ್ ಪ್ರೋಗ್ರಾಂ ಕೊಟ್ಟರೆ ಇದು ಆಗುತ್ತದೆ. ಇಲ್ಲದಿದ್ದರೆ ನಾವು ನೂರೆಂಟು ಸಾರಿ ಇಲ್ಲಿ ಬಂದು ಮಾತನಾಡುವುದೇ ಆಗುತ್ತದೆ, ಬೇರೆಯವರು ಇದನ್ನು ನೋಡಿ ನಗುವುದು, ಎಷ್ಟು ಸಾರಿ ಕೇಳುತ್ತಾರಪ್ಪ ಎಂದು ಹೇಳಿ ಇದು ಒಂದು ನಗೆಪಾಟಲಿಗೆ ಆಗುತ್ತದೆ. ಮತ್ತು ನಾವೂ ಕೂಡ ಪದೇ ಪದೇ ಇದನ್ನೇ ಹೇಳಿ ಏನಪ್ಪ ಇವರು ಇದನ್ನೇ ಮಾತನಾಡುತ್ತಾರೆ ಎನ್ನುವಂತಹ ಅಭಿಪ್ರಾಯ ನಿಮಗೂ ಮೂಡುತ್ತದೆ. ಬಹುಶಃ ಅದು ಬರುವುದಿಲ್ಲ ಎಂದು ನಾನು ಭಾವಿಸಿದ್ದೇನೆ. ಬಂದರೂ ಅನಿವಾರ್ಯವಾಗಿದೆ ನಾನು ಮಾತನಾಡಲೇಬೇಕಾಗಿದೆ. ಈ ರೀತಿಯಾಗಿ ಇವತ್ತು ಈ ಬ್ಯಾಕ್‌ಲಾಗ್ ಪರಿಸ್ಥಿತಿ ಆಗಿದೆ. ಆಮೇಲೆ ನಾನು ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುತ್ತೇನೆ. The Supreme Court of India

had given a clear verdict on the reservation of single post to be filled by SC/STs. An appeal was made in the House for suitable issuance of the government order. But, the Government did not implement it. Even the National Commission of SC/ST have taken up the issue and moved the Supreme Court. Now, I heard that the case is pending at Supreme Court before the Division Bench. What is the action taken by the government in this regard? ಎನ್ನತಕ್ಕಂಥ ಮಾತನ್ನು ನಾವು ಕೇಳಬೇಕಾಗಿದೆ. ಅದಕ್ಕಾಗಿಯೇ ನಾನು ಹೇಳಿದೆ. ತಾವು ಸಣ್ಣ ಒಂದು ಕಮಿಟಿಯನ್ನು ಮಾಡಿ ಅವರಿಗೆ ತಾವು ಒಂದು ಟೈಮ್‌ಬೌಂಡ್ ಪ್ರೋಗ್ರಾಂ ಹಾಕಿ ಕೊಟ್ಟರೆ ಇದು ಬಗೆಹರಿಯುತ್ತದೆ. ಇಲ್ಲದಿದ್ದರೆ ಅದು ಅದೇ ರೀತಿಯಾಗಿ ಉಳಿಯುತ್ತದೆ ಎನ್ನತಕ್ಕಂಥ ಮಾತನ್ನು ನಾನು ಹೇಳುತ್ತೇನೆ. ಇನ್ನೊಂದು ಪ್ರಮುಖವಾದಂತಹ ವಿಚಾರ ಏನೆಂದರೆ ನಮ್ಮ ರೀಜನಲ್ ಇಂಬ್ಯಾಲೆನ್ಸ್, ಇದರ ಬಗ್ಗೆ ನಾವು ಅನೇಕ ಸಾರಿ ಪ್ರಸ್ತಾಪ ಮಾಡಿದ್ದೇವೆ. ಆಮೇಲೆ ಹೈದ್ರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಅನೇಕ ಸದಸ್ಯರು ತಮ್ಮನ್ನು ಭೇಟಿ ಮಾಡಿದ್ದರು. ಡೆವಲಪ್‌ಮೆಂಟ್ ಬಗ್ಗೆ ಅಷ್ಟೇ ಅಲ್ಲ, ಸಂವಿಧಾನದಲ್ಲಿಯೂ ಕೂಡ ತಿದ್ದುಪಡಿಯನ್ನು ತರಬೇಕಾಗುತ್ತದೆ. ರಾಜ್ಯಾಂಗದಲ್ಲಿ ರೀಜನಲ್ ಇಂಬ್ಯಾಲೆಸನ್ನು ತೆಗೆದು ಹಾಕಬೇಕಾದರೆ ರಾಜ್ಯಾಂಗಕ್ಕೂ ತಿದ್ದುಪಡಿಯನ್ನು ತರಬೇಕಾಗುತ್ತದೆ. ಆ ರಾಜ್ಯಾಂಗದ ತಿದ್ದುಪಡಿಯನ್ನು ಆಂಧ್ರಪ್ರದೇಶದವರು ಮಾಡಿಕೊಂಡಿದ್ದಾರೆ. ನಮ್ಮ ಕರ್ನಾಟಕ ರಾಜ್ಯದಲ್ಲಿ ಅದು ಆಗಿಲ್ಲ. ವಿಶೇಷವಾದ ರೀಜನಲ್ ಎರಿಯಾಸ್‌ಗೆ ಏನಾಗಿದೆ ಅಂದರೆ ಅದರಲ್ಲಿ ಸರಳಗೊಳಿಸಿದ್ದಾರೆ. ಅದರ ಪ್ರಕಾರ ಹಿಂದುಳಿದಂತಹ ರೀಜನ್ಸ್ ಇದ್ದರೆ ಅದಕ್ಕೆ ತಕ್ಕಂಥ ಕಾನೂನು ಮಾಡುವುದಕ್ಕೆ ವಿಶೇಷವಾದ ಸೌಲಭ್ಯಗಳನ್ನು ಕೊಡುವುದಕ್ಕೆ ರಾಜ್ಯಾಂಗದಲ್ಲಿ ಒಂದು ಆರ್ಟಿಕಲ್ ಇದೆ. ಆಂಧ್ರಪ್ರದೇಶದವರು ಈಗಾಗಲೇ ಆ ಶೆಡ್ಯೂಲ್‌ನಲ್ಲಿ ಸೇರಿದ್ದಾರೆ. ಅದು ತೆಲ್ಲಂಗಣ ಎಜಿಟೇಷನ್ ಆದ ಮೇಲೆ. ಅದೇ ರೀತಿಯಲ್ಲಿ ಹಿಂದುಳಿದ ಭಾಗದಲ್ಲಿ ಪರ್ಟಿಕ್ಯುಲರ್ ಆಗಿ ಮೆಡಿಕಲ್ ಇದೆ, ಎಂಜನಿಯರಿಂಗ್ ವಿದ್ಯಾಭ್ಯಾಸ ಇದೆ, ಜಾಬ್ ರಿಸರ್ವೇಷನ್ ಇದೆ. ನಮ್ಮ ಐದು ಜಿಲ್ಲೆಗಳಿಗೆ ಸಂಬಂಧಪಟ್ಟ ಹಾಗೆ ರಾಜ್ಯಾಂಗದಲ್ಲಿ ತಿದ್ದುಪಡಿಯನ್ನು ತರುವುದಕ್ಕೂ ಕೂಡ ಪ್ರಯತ್ನ ಮಾಡಬೇಕಾಗುತ್ತದೆ. ಅದರ ಜೊತೆಯಲ್ಲಿಯೇ ನಾವು ಯೂನಿವರ್ಸಿಟಿ ವೈಸ್ ನಾವು ಈ ಒಂದು ಅಡ್ಮಿಷನ್ಸ್ ಕೊಟ್ಟರೆ ಕೆಲವು ವಿದ್ಯಾರ್ಥಿಗಳಿಗಾದರೂ ಅನುಕೂಲವಾಗುತ್ತದೆ. ಆದರೆ ನಾನು ಕೇಳಿದ್ದು ಏನೆಂದರೆ ಯೂನಿವರ್ಸಿಟಿ ವೈಸ್ ಕೊಟ್ಟರೆ ಮಹಾರಾಷ್ಟ್ರದಲ್ಲಿ ಅದನ್ನು ಸ್ಟ್ರಕ್ ಡೌನ್ ಮಾಡಿದ್ದಾರೆ ಎನ್ನತಕ್ಕಂಥಾದ್ದು ನನ್ನ ಗಮನಕ್ಕೆ ಬಂದಿದೆ. ಆ ಕಾನ್‌ಸ್ಟಿಟ್ಯೂಶನಲ್ ಅಮೆಂಡ್‌ಮೆಂಟ್ಸ್‌ಗೆ ಅವರು ಒಪ್ಪಿಕೊಳ್ಳುತ್ತಾರೆ. ಏಕೆಂದರೆ, ನಮ್ಮ ಈಶಾನ್ಯ ರಾಜ್ಯಗಳಾದ ನಾಗಾಲ್ಯಾಂಡ್ ಮುಂತಾದ ರಾಜ್ಯಗಳಿಗೆ, ಜೊತೆಗೆ ಆಂಧ್ರಪ್ರದೇಶ, ಮಧ್ಯಪ್ರದೇಶದ ಕೆಲವು ಭಾಗಗಳಲ್ಲಿ- ಇಂಥ ಕೆಲವು ಸೌಲಭ್ಯಗಳನ್ನು ಕೇಂದ್ರದವರು ಕೊಟ್ಟಿದ್ದಾರೆ. ಅದೇ ರೀತಿಯಲ್ಲಿ ನಮ್ಮಲ್ಲಿ ಹಿಂದುಳಿದಂಥ ಹೈದ್ರಾಬಾದ್ ಕರ್ನಾಟಕ ವಿಭಾಗಕ್ಕೆ ವಿಶೇಷ ಸವಲತ್ತುಗಳನ್ನು ಕೊಡಬೇಕೆಂದು ಹೇಳುವಾಗ ನಾವು ಆ ತಿದ್ದುಪಡಿಯನ್ನು ತರಬೇಕಾಗುತ್ತದೆ. ಆದ್ದರಿಂದ ದಯವಿಟ್ಟು ಆ ತಿದ್ದುಪಡಿಯನ್ನು ತರಲು ಕೇಂದ್ರ ಸರಕಾರಕ್ಕೆ ಕಳುಹಿಸಿ ಒತ್ತಾಯ ಮಾಡಬೇಕು. ನಮ್ಮ ಪಾರ್ಲಿಮೆಂಟ್

ಸದಸ್ಯರಿಗೂ ಕೂಡ ಈ ಬಗ್ಗೆ ತಿಳುವಳಿಕೆ ಕೊಡಬೇಕೆಂದು ಹೇಳಬಯಸುತ್ತೇನೆ. ಇನ್ನು ಗೃಹ ಇಲಾಖೆಯ ಬಗ್ಗೆ ಹೇಳುವುದಾದರೆ, ಅವರ ಫರ್‌ಫಾರ್‌ಮೆನ್ಸ್ ಬಗ್ಗೆ ಹೇಳುವುದಾದರೆ ಬಹಳ ಇದೆ. ನಾನು ಕೇವಲ ರೀಜನಲ್ ಇಂಬ್ಯಾಲೆನ್ಸ್ ಮತ್ತು ಇತರ ಇಂಬ್ಯಾಲೆನ್ಸ್ ಇವೆ ಎಂದು ತಿಳಿದುಕೊಂಡಿದ್ದೆ. ಆದರೆ ಪೋಲೀಸ್ ಇಲಾಖೆಯಲ್ಲಿ ಕಾಸ್ಟ್ ಇಂಬ್ಯಾಲೆನ್ಸ್ ಬಹಳ ಇದ್ದಾವೆ. ಒಂದು ಭಾಗದಲ್ಲಿ ಒಂದೇ ಕಮ್ಯುನಿಟಿಯವರನ್ನು ಹಾಕುತ್ತಾರೆ. ತಮಗೆ ಬೇಕಾಗಿಲ್ಲದವರನ್ನು ಯಾವುದೋ ಒಂದು ಮೂಲೆಗೆ ತಳ್ಳಿ ಬಿಡುವುದು ನಡೆದಿದೆ. ಈ ಕುರಿತು ನಾನು ಸದನದಲ್ಲಿ ಕಳೆದ ಸಾರಿ ಸಾಕಷ್ಟು ಹೇಳಿದ್ದೆ. ಈ ಸಾರಿಯೂ ಕೂಡ ಮಾನ್ಯ ಮುಖ್ಯಮಂತ್ರಿಯವರು ಡಿಪಿಎಆರ್ ನಿಂದ ಐಪಿಎಸ್ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡುವಾಗ, ಪೊಲೀಸ್ ಅಧಿಕಾರಿಗಳನ್ನು ಪೋಸ್ಟಿಂಗ್ ಮಾಡುವಾಗ ಈ ವ್ಯತ್ಯಾಸಗಳನ್ನು ಸರಿಪಡಿಸಬೇಕೆಂದು ಕೇಳಿಕೊಂಡಿದ್ದೆನು. ಈಗಲೂ ಅವರನ್ನು ಆ ಬಗ್ಗೆ ಮನವಿ ಮಾಡಿಕೊಳ್ಳುತ್ತೇನೆ. ಇದನ್ನು ಸರಿಪಡಿಸತಕ್ಕಂಥಾದ್ದು ಬಹಳ ಅವಶ್ಯಕತೆ ಇದೆ. ಕೆಲವು ಜಿಲ್ಲೆಗಳಲ್ಲಿ, ಕೆಲವು ಭಾಗಗಳಲ್ಲಿ ಒಂದೇ ಜಾತಿಯ ಜನರು ಸೇರಿದ್ದಾರೆ. ಪೋಲೀಸ್ ಕಾನ್ಸ್‌ಟೇಬಲ್ ನಿಂದು ಹಿಡಿದು ಡಿಐಜಿ ತನಕವೂ ಹಾಕುತ್ತಾ ಇದ್ದೀರಿ. ಇದು ಸರಿ ಅಲ್ಲ. ನೀವು ಹೀಗೆ ಹಾಕುವಾಗ ಸರ್ಕಲ್ ಇನ್ಸ್‌ಪೆಕ್ಟರ್, ಎಸ್.ಪಿ. ಮುಂತಾಗಿ ಬೇರೆ ಜಾತಿಯವರನ್ನು ಹಾಕಿ. ಸಮಾಜದಲ್ಲಿ ಎಲ್ಲರೂ ಮಿಕ್ಸ್ ಅಪ್ ಇರಬೇಕು. ಅದನ್ನು ಬಿಟ್ಟು ಒತ್ತಾಯ ಬರುತ್ತದೆ ಎಂದು ಹಾಗೆ ಮಾಡಲು ಹೋಗಬೇಡಿ. ನಾನು ಬೆಂಗಳೂರು ರೂರಲ್ ಡಿಸ್ಟಿಕ್ಟ್‌ನಲ್ಲಿ ಯಾವ ಪೋಲೀಸ್ ಸ್ಟೇಷನ್‌ಗೆ ಹೋದರೂ ಒಂದೇ ವರ್ಗದವರು. ಕಾನ್ಸ್‌ಟೇಬಲ್ ನಿಂದ ಪ್ರಾರಂಭಿಸಿ ಎಸ್‌ಪಿ ತನಕ ಒಂದೇ ವರ್ಗದವರು ಇದ್ದಾರೆ. ಡಿಐಜಿ ಒಬ್ಬರು ಮಾತ್ರ ಬೇರೆ ವರ್ಗದವರು ಇದ್ದಾರೆ. ಆದರೆ ಡಿಸ್ಟಿಕ್ಟ್ ಅಡ್ಮಿನಿಸ್ಟ್ರೇಷನ್‌ನಲ್ಲಿ ಹಾಗೆ ಆಗಬಾರದು. ಯಾರದೋ ಒತ್ತಾಯ ಇದೆ ಎಂದು ನೀವು ಹಾಗೆ ಹಾಕುತ್ತೀರಿ. ಅದು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಆಗಿರಬಹುದು. ಈಗಲಾದರೂ ಅಂಥ ಒಂದು ಪದ್ಧತಿಯನ್ನು ಸರಿಪಡಿಸಿರಿ. ಇವೊತ್ತು ನಮ್ಮಲ್ಲಿರುವ ಅನೇಕ ಜಿಲ್ಲೆಗಳಲ್ಲಿ ಕ್ರೈಮ್ಸ್ ಕೂಡ ಹೆಚ್ಚುತ್ತಾ ಇದೆ. ಕಳ್ಳತನ, ಮೋಸ, ದರೋಡೆ ಮುಂತಾಗಿ ಎಲ್ಲಾ ತರಹದ ಅಪರಾಧಗಳು ಹೆಚ್ಚುತ್ತಾ ಇದೆ. ನಾನು ಕೆಲವು ಉದಾಹರಣೆಗಳನ್ನು ಹೇಳಬಯಸುತ್ತೇನೆ. ಇತ್ತೀಚಿಗೆ ಮರ್ಡರ್ಸ್ ಕೂಡ ಜಾಸ್ತಿಯಾಗುತ್ತಿದೆ. ಹೀಗೆ ಅಪರಾಧಗಳು ಜಾಸ್ತಿಯಾಗಲು ಸಮಾಜದಲ್ಲಿರತಕ್ಕಂಥ ಅವ್ಯವಸ್ಥೆಯು ಕಾರಣ. ಅಂತೆಯೇ ಪ್ರಾಪರ್ಟಿಗ್ರೈನ್ ಇರಬಹುದು. ಲೈಂಗಿಕ ಕಾರಣ ಮುಂತಾಗಿ ಬೇರೆ ಬೇರೆ ಕಾರಣಗಳು ಇರಬಹುದು. ಒಟ್ಟಿನಲ್ಲಿ ಅಪರಾಧಗಳು ಹೆಚ್ಚುತ್ತಿವೆ. ಅದರಲ್ಲಿಯೂ ಬೆಂಗಳೂರು ನಗರದಲ್ಲಿಯಂತೂ ಬಾಂಬೆಯಿಂದ ಬಂದ ಅನೇಕ ಗೂಂಡಾಗಳು ಬಂದು ರಕ್ಷಣೆ ಪಡೆದುಕೊಳ್ಳುತ್ತಾ ಇದ್ದಾರೆ. ಪ್ರಾಪರ್ಟಿಗೋಸ್ಕರ ಇಲ್ಲಿ ಬರುವುದು, ಎಸ್ಟೇಟ್ ಬಿಸಿನೆಸ್‌ನಲ್ಲಿ ಇನ್‌ವಾಲ್ವ್ ಆಗಿ ಪ್ರಾಪರ್ಟಿಗಳನ್ನು ಕಬಳಿಸಲು, ಅನೇಕ ಜನರ ಮನೆಗಳು ಅಂಗಡಿಗಳು ಮುಂತಾಗಿ ಬಿಡಿಸುವುದಕ್ಕೋಸ್ಕರ ಅಪರಾಧಗಳ ಮೂಲಕ ಕೆಟ್ಟ ವಾತಾವರಣವನ್ನು ಉಂಟು ಮಾಡುವ ಶಕ್ತಿಯು ಹೊರಗಿನಿಂದ ಬೆಂಗಳೂರಿಗೆ ಬರುತ್ತಾ ಇದೆ. ಬೆಂಗಳೂರು, ಮಂಗಳೂರು, ಹುಬ್ಬಳ್ಳಿ ಧಾರವಾಡ, ಮುಂತಾದ ಭಾಗಗಳಲ್ಲಿ ಹೆಚ್ಚಿನ ಅಪರಾಧದ ಚಟುವಟಿಕೆಗಳು ನಡೆಯುತ್ತಿವೆ. ಉದಾಹರಣೆಗೆ ರಾಜ್ಯದಲ್ಲಿ 1996ರಲ್ಲಿ 1604 ಮರ್ಡರ್ಸ್ ಆಗಿವೆ. 1997-98ರಲ್ಲಿ 1920 ಮರ್ಡರ್ಸ್ ಆಗಿವೆ.

ಹಾಗೆಯೇ ಅಟೆಂಪ್ಟ್ ಟು ಮರ್ಡರ್ ಕೇಸ್‌ಗಳು 1996ರಲ್ಲಿ 1220 ಆಗಿವೆ. 1997-98ರಲ್ಲಿ 1663 ಕೇಸ್‌ಗಳು ಆಗಿವೆ. ರೇಪ್ ಇನ್ಸಿಡೆಂಟ್ಸ್ 1996-97ರಲ್ಲಿ 221 ಆಗಿದ್ದು 1997-98ರಲ್ಲಿ 254 ಕೇಸ್‌ಗಳು ಆಗಿವೆ. ಕಿಡ್ನಾಪಿಂಗ್ 1996-97ರಲ್ಲಿ 533 ಆಗಿದ್ದು 1997-98ರಲ್ಲಿ 769 ಕೇಸ್‌ಗಳು ಆಗಿವೆ. ಡಕಾಯಿತಿ ಪ್ರಕರಣಗಳು 1996-97ರಲ್ಲಿ 252 ಆಗಿದ್ದರೆ, 1997-98ರಲ್ಲಿ 315 ಪ್ರಕರಣಗಳು ಆಗಿವೆ. ಅದೇ ರೀತಿಯಲ್ಲಿ ರಾಬರಿ ಕೇಸ್‌ಗಳು 1996-97ರಲ್ಲಿ 994 ಕೇಸ್‌ಗಳು ಆಗಿದ್ದರೆ 1997-98ರಲ್ಲಿ 1482 ಪ್ರಕರಣಗಳು ಆಗಿವೆ. ಥೆಪ್ಟ್ ಕೇಸ್‌ಗಳು 1996-97ರಲ್ಲಿ 16830 ಕೇಸುಗಳು ಆಗಿವೆ. 1997-98ರಲ್ಲಿ 18342 ಕೇಸ್‌ಗಳು ಆಗಿವೆ. ಅದೇ ರೀತಿಯಲ್ಲಿ ರಾಜ್ಯದಲ್ಲಿ ನಡೆದ ಕೋಮುಘರ್ಷಣೆಗಳು 1996-97ರಲ್ಲಿ 8087 ಪ್ರಕರಣಗಳು ಆಗಿದ್ದರೆ 1997-98ರಲ್ಲಿ 9936 ಕೇಸ್‌ಗಳು ಆಗಿವೆ. ಇಂಥ ಬೇಕಾದಷ್ಟು ವಿವರಗಳು ಇದ್ದರೂ ಎಲ್ಲವನ್ನೂ ನಾನು ಹೇಳಲು ಹೋಗುವುದಿಲ್ಲ. ಇದನ್ನೆಲ್ಲಾ ನಾವು ನೋಡಿದಾಗ ಅಪರಾಧಗಳ ಸಂಖ್ಯೆಯು ಹೆಚ್ಚುತ್ತಾ ಇದೆ. ಅದಕ್ಕೆ ಅನೇಕ ಕಾರಣಗಳು ಇರಬಹುದು. ಆದರೂ ಕೂಡ ಪೋಲೀಸ್ ವ್ಯವಸ್ಥೆಯೂ ಕೂಡ ಅಷ್ಟೇ ಬಂದೋಬಸ್ತ್ ಆಗಿರಬೇಕಲ್ಲವೇ? ಪೋಲೀಸರ ಬಗ್ಗೆ ಜನರಲ್ಲಿ ಹೆದರಿಕೆಯೂ ಕೂಡ ಇರಬೇಕಲ್ಲಾ? ಪೋಲೀಸರು ನಿಸ್ಸಹಾಯಕರಾಗುವ ಸ್ಥಿತಿ ಇದೆ. ಅವರೇ ಹೇಳುವಂತೆ, ನಾವು ಕಾನೂನು ಪ್ರಕಾರ ಏನಾದರೂ ಮಾಡಿದರೆ ನಮ್ಮ ತಪ್ಪನ್ನು ಕಂಡುಹಿಡಿದು ನಮ್ಮನ್ನು ಡೀ-ಮಾರಲೈಸ್ ಮಾಡತಕ್ಕಂಥ ಪರಿಸ್ಥಿತಿ ಬಂದಿದೆ ಎನ್ನುತ್ತಾರೆ. ಆದ್ದರಿಂದ ನಾವು ಕೇವಲ ಕೇಸ್ ರಿಜಿಸ್ಟರ್ ಮಾಡುವುದು, ಎಫ್‌ಐಆರ್ ಹಾಕುವುದು, ಚಾರ್ಜ್‌ಶೀಟ್ ಹಾಕುವುದು, ಕೋರ್ಟಿಗೆ ಕಳುಹಿಸುವುದು ಮಾತ್ರ ಮಾಡುತ್ತಾ ಇದ್ದಾರೆ ಎಂದು ಅವರ ಮಾತುಗಳಿಂದ ವ್ಯಕ್ತವಾಗುತ್ತದೆ. ಕಂಪ್ಲೇಂಟ್ ಬಂದಾಗ ಡಿಟೆಕ್ಟ್ ಮಾಡಿ, ಸೂಕ್ತ ರೀತಿಯ ತನಿಖೆ ಮಾಡಿ, ಸತ್ಯಾಂಶ ತಿಳಿದುಕೊಂಡು ಅಮೂಲಾಗ್ರವಾಗಿ ಎಲ್ಲವನ್ನೂ ಮಾಡಬೇಕೆಂಬ ಮನಸ್ಸು ಅವರಲ್ಲಿ ಇಲ್ಲ. ಸರಕಾರದ ಕಾನೂನಿನ ಮತ್ತು ಪೋಲೀಸರ ಹೆದರಿಕೆ ಇದ್ದರೆ ಅನೇಕ ಅನ್ಯಾಯಗಳು ನಿಂತು ಹೋಗುತ್ತವೆ. ಸಮಾಜದಲ್ಲಿ ಕೆಲವೇ ಜನರಿಗೆ ಪೋಲೀಸರ ಅವಶ್ಯಕತೆ ಇಲ್ಲದಿರಬಹುದು. ಆದರೆ ಇನ್ನೂ ಸಮಾಜದಲ್ಲಿನ 75-80 ಪರ್ಸೆಂಟ್ ಜನರಿಗೆ ಸರಕಾರದ ಮತ್ತು ಪೋಲೀಸರ ಅವಶ್ಯಕತೆಯು ಇದೆ. ಕೆಲವು ಜನ ಶ್ರೀಮಂತರ ತಮ್ಮದೇ ಆದಂಥ ಗೂಂಡಾಗಳನ್ನು ಇಟ್ಟುಕೊಂಡು ತಮ್ಮ ರಕ್ಷಣೆ ಮಾಡಿಕೊಳ್ಳುವ ಶಕ್ತಿ ಹೊಂದಿರಬಹುದು. ಆದರೆ ಬಡವರು, ಮಧ್ಯಮ ವರ್ಗದವರು, ಕಾನೂನು ಪಾಲನೆ ಮಾಡತಕ್ಕಂಥವರು, ಕಾನೂನಿನ ಮೇಲೆ ನಂಬಿಕೆ ಇರತಕ್ಕಂಥವರು, ಅವರೆಲ್ಲರೂ ಸರಕಾರದ ಕಡೆಗೆ ವಿಶ್ವಾಸದಿಂದ ನೋಡುತ್ತಾರೆ. ಅವರು ನ್ಯಾಯದ ಕಡೆಗೆ ನೋಡುತ್ತಾರೆ. ರಕ್ಷಣೆಗಾಗಿ ಪೋಲೀಸರ ಕಡೆ ನೋಡುತ್ತಾರೆ. ಏನಾದರೂ ಒಂದು ಕೋರ್ಟ್ ಆಜ್ಞೆಯನ್ನು ತಂದು ಅದು ಇಂಪ್ಲಿಮೆಂಟ್ ಆಗುತ್ತದೆ ಎಂದು ನಂಬಿಕೆ ಇಂದ ನೋಡುತ್ತಾರೆ. ಆದರೆ ಇಂಥ ಅವರ ವಿಶ್ವಾಸವು ಯಾವುದೂ ಕೂಡ ನೆರವೇರುತ್ತಾ ಇಲ್ಲ. ಯಾರ ಹತ್ತಿರ ದೊಣ್ಣೆ ಇದೆಯೋ ಅವನದ್ದೇ ಎಮ್ಮೆ ಎಂದು ಹೇಳುವ ಹಾಗೆ ಯಾರಲ್ಲಿ ಬಲ ಇದೆಯೋ ಅವರ ಕಡೆಗೆ ಎಲ್ಲಾ ಆಗಿ ಬಿಟ್ಟಿದೆ. ಬಲ ಇಲ್ಲದವರನ್ನು ಯಾರೂ ಕೇಳುವವರು ಇಲ್ಲ. ಇದಕ್ಕೆ ನಾವು ಜನರಲ್ಲಿ ವಿಶ್ವಾಸ ಮೂಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಮ್ಮ ಅಧಿಕಾರಿಗಳು ಮನಸ್ಸಿಟ್ಟು ಕೆಲಸ ಮಾಡದೇ ಹೋದಾಗ ಜನರ ಮನಸ್ಸಿನಲ್ಲಿ ಸರಕಾರದ ಬಗ್ಗೆ ಅವಿಶ್ವಾಸ ಮೂಡುತ್ತದೆ. ಅಧಿಕಾರಿಗಳು ತಪ್ಪು ಮಾಡಿದವರಿಗೆ ಶಿಕ್ಷೆಯನ್ನು ಕೊಡದಿದ್ದರೆ, ಯಾವ

ಅಧಿಕಾರಿಗಳು ನೀವು ಹೇಳಿದಂಥ ಮಾತನ್ನು ಕೇಳದಿದ್ದಾಗ, ನಿಮ್ಮ ಅಧಿಕಾರಿಯು ಬಿಗಿಯಾಗಿ ನಡೆದುಕೊಂಡು ಹೋಗದಿದ್ದರೆ ನಿಮ್ಮ ಇಡೀ ಆಡಳಿತವೇ ಕುಸಿದು ಬೀಳುತ್ತದೆ. ಆದ್ದರಿಂದ ಈ ಆಡಳಿತವನ್ನು ಯಾರು ಕಂಟ್ರೋಲ್‌ನಲ್ಲಿ ಇಡಬಹುದು, ಯಾರೂ ಕಾನೂನಿನ ಹೆದರಿಕೆಯನ್ನು ಇಡಬಹುದು. ಅಂಥ ದಕ್ಷ ಅಧಿಕಾರಿಗಳನ್ನು ನಾವು ಆಡಳಿತದಲ್ಲಿ ಅಳವಡಿಸಿಕೊಂಡು ಸೂಕ್ತ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಬೇಕು. ಅಧಿಕಾರಿಗಳು ಕೂಡ ಜನರ ಬಗ್ಗೆ ಸ್ವಲ್ಪ ಪ್ರೀತಿ ವಿಶ್ವಾಸ ಇರುವವರು ಬೇಕು. ಸಮಾಜವನ್ನು ಸುಲಿಗೆ ಮಾಡತಕ್ಕಂಥ ಅಧಿಕಾರಿಗಳನ್ನು ನಾವು ಹಾಕಿದರೆ ಅವನು ಕೇವಲ ತನ್ನ ಕೆಲಸವನ್ನು ಮಾಡಿಕೊಳ್ಳುತ್ತಾನೆ. ಜೂಜುಖಾನೆಗಳನ್ನು ಹೆಚ್ಚಿಸುವುದು, ಮಟ್ಕಾ ಹೆಚ್ಚಿಸುವುದು, ಕಾನೂನುಬಾಹಿರ ಚಟುವಟಿಕೆಗಳಿಗೆ ಪ್ರೋತ್ಸಾಹಿಸುವುದು ಮುಂತಾಗಿ ಮಾಡಲು ಇದೇ ಅಧಿಕಾರಿಗಳು ಪ್ರೋತ್ಸಾಹವನ್ನು ಕೊಡುತ್ತಾರೆ. ಪ್ರಾಪರ್ಟಿ ಹೆಲ್ಡ್ ಆಫ್ ಮಾಡಿಸುವುದು, ಪ್ರಾಪರ್ಟಿ ಕಬ್ಜಾ ಮಾಡಿಸುವುದು ಮುಂತಾದ ಚಟುವಟಿಕೆಗಳಲ್ಲಿ ಶಾಮೀಲಾಗಿ ದುಡ್ಡು ತಿನ್ನುವ ಕೆಲಸವನ್ನು ಮಾಡಲು ಮುಂದಾಗುತ್ತಾರೆ. ಅದನ್ನು ಬಿಟ್ಟು ರಿಸ್ಕ್ ತೆಗೆದುಕೊಂಡು ಬಡವರ ಪರವಾಗಿ ಕೆಲಸ ಮಾಡಲು ಮುಂದಾಗುವ ವಾತಾವರಣವನ್ನು ಮೂಡಿಸಬೇಕು. ಬಡವರ ರಕ್ಷಣೆ ಮಾಡಲು ಅಂಥವರು ಮುಂದಾಗುವುದು ಅವಶ್ಯವಿದೆ. ನಾವು ಏನಾದರೂ ಶಿಸ್ತು-ಕಾನೂನು ಕ್ರಮ ತೆಗೆದುಕೊಂಡಾಗ ಸಂಬಂಧಪಟ್ಟವರು ಒತ್ತಡ ತಂದು ನಮ್ಮ ಮೇಲೆ ತಿರುಗಿ ಬಿಡುತ್ತಾರೆ. ಹಾಗಾಗಿ ನಾವು ಏನೂ ಮಾಡುವಂತಿಲ್ಲ ಎಂದು ಪೋಲೀಸ್ ಅಧಿಕಾರಿಗಳೇ ಹೇಳುವ ಪ್ರಸಂಗಗಳೂ ಇವೆ. ಒತ್ತಡ ತರುವಾಗ ಅವರ ಹಿಂದೆ ರಾಜಕಾರಣಿಗಳು, ಮಂತ್ರಿಗಳು, ಬಲಾಢ್ಯವ್ಯಕ್ತಿಗಳು, ಶಾಸಕರು ಇದ್ದಾರೆ ಎಂದು ಹೇಳುತ್ತಾರೆ. ಇಷ್ಟೇ ಅಲ್ಲದೆ ಒತ್ತಡ ತರುವವರಿಗೆ ದೊಡ್ಡ ಸಮಾಜದ ಬಲ ಇದೆ ಎಂದು ಹೇಳುವವರೂ ಇದ್ದಾರೆ. ಹೀಗೆ ಇಂಥ ಭಾವನೆಗಳನ್ನು ಇಟ್ಟುಕೊಂಡು ಪೋಲೀಸ್ ಅಧಿಕಾರಿಗಳು ಕೆಲಸಮಾಡಿದರೆ ಯಾವ ಪ್ರಯೋಜನವು ಆಗುವುದಿಲ್ಲ ಇಲ್ಲಿ ಇರುವ ಅಂಕಿ ಅಂಶಗಳನ್ನು ನೋಡಿದರೆ ತಾವು ಸಂಪೂರ್ಣವಾಗಿ ಕಾನೂನಿನ ವ್ಯವಸ್ಥೆಯನ್ನು ಕಂಟ್ರೋಲ್ ಮಾಡುವುದರಲ್ಲಿ ವಿಫಲರಾಗಿರುವುದು ವ್ಯಕ್ತವಾಗುತ್ತದೆ ಎಂದು ಹೇಳಬೇಕಾಗುತ್ತದೆ.

6.20 ಪಿ.ಎಂ

ಈ ಅಂಕಿಅಂಶಗಳು ತಮ್ಮ ಇಲಾಖೆಯಿಂದ ದೊರೆತದ್ದು ಅಥವಾ ಪ್ರಶ್ನೋತ್ತರ ಕಾಲದಲ್ಲಿ ತಾವು ಕೊಟ್ಟ ಅಂಕಿಅಂಶಗಳನ್ನೇ ನಾವು ಕ್ರೋಢೀಕರಿಸಿ ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಇದನ್ನೆಲ್ಲಾ ನೋಡಿದಾಗ, ನಿಜವಾಗೂ ಸರ್ಕಾರ ಇವತ್ತು ಗೃಹಆಡಳಿತದಲ್ಲಿ ತನ್ನ ವರ್ಚಸ್ಸನ್ನು ಕಳೆದುಕೊಂಡಿದೆ ಎನ್ನುವುದನ್ನು ನಾನು ಸ್ಪಷ್ಟಪಡಿಸುತ್ತೇನೆ. ಬಿಗಿ ಆಗಬೇಕೆಂದರೆ ಪ್ರಮಾಣಿಕರು, ದಕ್ಷರು ಮತ್ತು ನಾವು ಎಷ್ಟು ಟೈಟ್ ಮಾಡಿದರೂ ಎಲ್ಲಾ ಕಡೆ ಸಿಕ್ಕುತ್ತಾರೆ ಎಂದು ಅಲ್ಲ ಒಂದರೆಡು ಕಡೆ ಹೆಚ್ಚುಕಡಿಮೆ ಇರಬಹುದು, ಆದರೆ 90 ಪರ್ಸೆಂಟ್ ಹಾಗೆ ಇದ್ದರೆ ಇದು ಹದಗೆಡುತ್ತದೆ. ಆದ್ದರಿಂದ ದಯವಿಟ್ಟು ಈ ಕೆಲಸ ಇನ್ನು ಮೇಲಾದರೂ ತಾವು ಶುದ್ಧ ಮಾಡುತ್ತೀರಿ ಎಂದು ನಾನು ತಿಳಿದುಕೊಂಡಿದ್ದೇನೆ. ಇದರ ಜೊತೆಯಲ್ಲೇ ಕೆಲವು ಅಟ್ರಾಸಿಟೀಸ್ ಕೆಲವು ಕಡೆ ನಡೆದಿದೆ. ಅದರ ಕಡೆ ಸರ್ಕಾರದ ಗಮನ ಯಾಕಿಲ್ಲವೋ ನನಗೆ ಗೊತ್ತಾಗುತ್ತಿಲ್ಲ. ಈ ಸದನದಲ್ಲಿ ಎರಡು ಮೂರು ಸಲ ಅನೇಕ ಸದಸ್ಯರು ಪ್ರಸ್ತಾಪ

ಮಾಡಿದರು. ಉದಾಹರಣೆಗೆ, ನಾನು ಹೋದ ಸಲ ಹೇಳಿದೆ. ಆಳಂದ ಅಫ್ಜಲ್‌ಪುರ ಮುಂತಾದ ಬಾರ್ಡರ್ ತಾಲ್ಲೂಕುಗಳಲ್ಲಿ ಖೂನಿ ಮೇಲೆ ಖೂನಿ. ಯಾವರೀತಿಯೂ ಹೊಸಕೋಟೆಯಲ್ಲಿ, ಪ್ರತಿ ತಿಂಗಳೂ, ಅಧ್ಯಕ್ಷರೇ ತಾವೂ ಓದಿರಬೇಕು, ಅದೇನೋ ಕೋಲಾರ ಹತ್ತಿರ ಎಂದು ಆ ಪರಿಣಾಮ ಇದೆಯೋ ಅಥವಾ ಬೆಂಗಳೂರಿಗೆ ಹತ್ತಿದೆ ಎಂದು ಪರಿಣಾಮವಿದೆಯೋ ಗೊತ್ತಿಲ್ಲ, ಪ್ರತಿ ತಿಂಗಳೂ ಒಂದು ಖೂನಿ, ಅದಕ್ಕೆ ರಾಜಕೀಯ ಇವತ್ತು ಕಾಂಗ್ರೆಸ್‌ನವನಿಗೆ ಹೊಡೆದರು, ಇನ್ನೊಂದು ದಿವಸ ಜನತಾದಳದವನಿಗೆ ಹೊಡೆದು, ಮತ್ತೆ ಕಾಂಗ್ರೆಸ್‌ನವನಿಗೆ ಹೊಡೆದರು ಹೀಗೆ ನಡೆದಿದೆ. ಇವು ರಾಜಕೀಯ ಪ್ರೇರಿತ ಖೂನಿಗಳು ಎಂದು ಜನಕ್ಕೂ ಸರ್ಕಾರಕ್ಕೂ ಗೊತ್ತಿದೆ. ಪೋಲಿಸರಿಗೂ ಗೊತ್ತಿದೆ. ಅಂತಹ ಅಧಿಕಾರಿಗಳು ಯಾಕಿರಬೇಕು ಅಲ್ಲಿ? ಯಾರ ಸಪೋರ್ಟ್ ಮೇಲೆ ಉಳಿದಿದ್ದಾರೆ. ಕಿತ್ತು ಬಿಸಾಕಿ ಬೇರೆಯವರಿಗೆ ಹಾಕಿ, ಮುಲಾಜೇನಿದೆ? ಕಾನೂನು ವ್ಯವಸ್ಥೆ ಸರಿಯಿರಲಿಲ್ಲ ಅಂದರೆ, ಸರ್ಕಾರಕ್ಕೆ ಜನ ಚೆನ್ನಾಗಿರಬೇಕು, ಲಾ ಮತ್ತು ಆರ್ಡರ್ ಚೆನ್ನಾಗಿರಬೇಕು ಇದೇ ನಿಮ್ಮ ಅಪೇಕ್ಷೆ ಅಂದಾಗ ಯಾವ ಅಧಿಕಾರಿಗಳು ಇದರಲ್ಲಿ ವಿಫಲರಾಗುತ್ತಾರೋ ಕೆಟ್ಟ ಹೆಸರು ತರುತ್ತಾರೋ ಅಂತಹ ಅಧಿಕಾರಿಗಳನ್ನು ಯಾರ ಮುಲಾಜಿನ ಮೇಲೆ ಕಂಟಿನ್ಯೂ ಮಾಡಿದಿರಿ ಎಂದು ನಾನು ಕೇಳುತ್ತಿದ್ದೇನೆ. ಒಂದೆರಡು ಸಲ ಅಲ್ಲ, ನಾಲ್ಕೈದು ಸಲ. ಅದೇ ರೀತಿ ಗುಲ್ಬರ್ಗಾದಲ್ಲಾಯಿತು, ಆಳಂದದಲ್ಲಾಯಿತು, ಒಬ್ಬ ಶೆಡ್ಯೂಲ್‌ಕ್ಯಾಸ್ಟ್ ಪಂಚಾಯತಿ ಪ್ರಧಾನ ದತ್ತಪ್ಪನನ್ನು ಹಾಡುಹಗಲೇ ಖೂನಿ ಮಾಡಿದರು. ಕಂಡುಹಿಡಿಯಿರಿ ಅಲ್ಲೇ ಇರುತ್ತಾರೆ ಅಂದರೆ ನಿಮ್ಮ ಕೈಲಿ ಆಗಲಿಲ್ಲ, ಇವತ್ತು ಮಹಾರಾಷ್ಟ್ರ ಪೋಲಿಸರು ಅರೆಸ್ಟ್ ಮಾಡಿದರು, ಪತ್ರಿಕೆಯಲ್ಲೂ ಬಂತು, ನಾನು ಯಾವ ಎಂಎಲ್‌ಎ ಹೆಸರನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಆದರೆ ಒಂದು ವರ್ಷದ ಹಿಂದೆ ನಾನು ಪ್ರಸ್ತಾಪಿಸಿದಾಗ ಅದು ಸುಳ್ಳು ಆಯಿತು. ಇವತ್ತು ಶೊಲ್ಲಾಪುರದ ಪೋಲಿಸರು ತನಿಖೆ ಮಾಡುತ್ತಿದ್ದಾರೆ, ನಿಮಗೂ ಬಂದಿರಬೇಕು. ಗಡಿಪ್ರದೇಶಗಳು ಇವೆಯಲ್ಲಾ, ಆಳಂದ, ಅಫ್ಜಲ್‌ಪುರ, ಚಿಂದೋಳಿಯಲ್ಲಿ ನಕ್ಸಲೈಟರ ಹಾವಳಿ, ಇಲ್ಲೆಲ್ಲಾ ಕಮಿಟ್ ಮಾಡುವುದು ಓಡಿಹೋಗುವುದು. ಹೊಸಪೇಟೆಯಲ್ಲಿ ಕ್ರೈಂ ಮಾಡುವುದು, ಆಂಧ್ರಕ್ಕೆ ಓಡಿಹೋಗುವುದು, ಕೋಲಾರದಲ್ಲಿ ಮಾಡುವುದು ಚಿತ್ತೂರು ಕಡೆ ಓಡಿ ಹೋಗುವುದು. ಅಂತಹ ಕಡೆ ವಿಶೇಷವಾದಂತಹ ಪೋಲಿಸ್ ಪಡೆಗಳನ್ನು ಹಾಕಿ. ಸಿಐಡಿಗಳನ್ನು ಕಳುಹಿಸಿ ಸಿಓಡಿ ತನಿಖೆ ಮಾಡಿಸಿ ಏಕೆಂದರೆ ಇದು ಯಾರೋ ಒಬ್ಬಿಬ್ಬರ ಪ್ರಶ್ನೆಯಲ್ಲ, ಸಮಾಜ ವ್ಯವಸ್ಥಿತವಾಗಿರಬೇಕು, ನೆಮ್ಮದಿಯಿಂದ ಬಾಳಬೇಕು. ಕಾನೂನು ವ್ಯವಸ್ಥೆ ನಾವು ಸರಿಯಿಡದೇ ಹೋದರೆ ಬಡವರಂತೂ ನೆಮ್ಮದಿ ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಬಾರಾಕೂನ್‌ಮಾಫ್ ಅಂದುಬಿಟ್ಟರೆ ಯಾರನ್ನು ಯಾರೂ ಕೇಳುವುದಕ್ಕೆ ಹೋಗುವುದಿಲ್ಲ. ಆಮೇಲೆ ಸೇಡಂನ ಅಲ್ಲೋಳಿ ಗ್ರಾಮದಲ್ಲಿ ಒಬ್ಬನನ್ನು ಹಾಡುಹಗಲೇ ಹೊಡೆದುಹಾಕಿದರು. ಅವನ ತಮ್ಮನಿಗೆ ಹೊಡೆದುಹಾಕಿದರು, ಏನಾಯಿತು ಅಂದರೆ ಪೋಲಿಸ್ ಸಬ್ ಇನ್‌ಸ್ಪೆಕ್ಟರ್‌ಗೆ ನಮ್ಮ ಜಗಳದಲ್ಲಿ ನೀವ್ಯಾಕೆ ಬರ್ತೀರಿ ಅಂದಾಗ ಪೊಲೀಸ್ ಎಸ್‌ಐ ಒಂದು ಹೊಡೆದ, ಅವ ಅಲ್ಲೇ ಸತ್ತು ಬಿದ್ದ. ಆಗೊಂದು ದೊಡ್ಡ ಎಜಿಟೇಷನ್ ಆಯಿತು. ಆಮೇಲೆ ಆಬಾಳಂ ಅನ್ನುವ ಗ್ರಾಮದಲ್ಲಿ ಸಾಯಿಬಣ್ಣ ಅನ್ನುವವನನ್ನು ಒಯ್ದು ಕೊಲೆ ಮಾಡಿ ಬಾವಿ ಒಳಗೆ ಹಾಕಿದರು, ಇವೆಲ್ಲಾ ಎರಡು ತಿಂಗಳ ಅವಧಿಯಲ್ಲೇ ನಡೆದದ್ದು. ಇಂತಹ ತಾಲ್ಲೂಕಿನಲ್ಲಿ ಇಂತಹ ಕ್ರೈಂ ಆಗುತ್ತಿದೆ, ಯಾಕೆ ಆಗುತ್ತಿದೆ ಎನ್ನುವ

ತನಿಖೆ ಅಲ್ಲಿನ ಅಧಿಕಾರಿಗಳು ಮಾಡದೇ ಇದ್ದರೆ ನಾವು ಎಲ್ಲಿ ಹೇಳಬೇಕು? ಯಾರಿಗೇ ಹೇಳಬೇಕು? ಇದನ್ನು ಹೇಳುವುದಕ್ಕೆ ನನಗೆ ವಿಷಾದವಾಗುತ್ತದೆ, ಅನೇಕ ಸಾರಿ, ಕಾರ್ಯದರ್ಶಿಗಳಿರಬಹುದು, ಜಿಲ್ಲಾಧಿಕಾರಿಗಳಾಗಿರಬಹುದು, ಯಾರೇ ಶಾಸಕರು ಫೋನ್ ಮಾಡಿದರೆ ಇರುವ ಪರಿಸ್ಥಿತಿಯನ್ನು ತಿಳಿಸುವುದಕ್ಕೂ ಅವರು ಫೋನಿಗೆ ಸಿಗುವುದಿಲ್ಲ. ಅನೇಕ ಶಾಸಕರು ಬಂದು ನನ್ನ ಹತ್ತಿರ ಇದ್ದೂ ಇಲ್ಲ ಎನ್ನುತ್ತಾರೆ ಎನ್ನುವುದು, ಎಲ್ಲಿಗೆ ಹೋಗಿದ್ದಾರೆ ಅಂದರೆ ಮೀಟಿಂಗ್‌ಗೆ ಎನ್ನುವುದು. ಮೀಟಿಂಗ್ ಎಷ್ಟು ಸಲ ಇಡುತ್ತೀರಿ ಸ್ವಾಮಿ? ಇಲ್ಲಿ ನಾನು ನೋಡುತ್ತೇನಲ್ಲಾ, ವಿಧಾನಸೌಧಕ್ಕೆ ಬರಲಾರದ ಅಧಿಕಾರಿಗಳಿಗೂ ಯಾರದಾದರೂ ಅಲ್ಲಿ ಕೆಲಸ ಇದೆ ಎಂದು ನಾವು ಫೋನ್ ಮಾಡಿದರೆ ಎಲ್ಲಿ ಹೋಗಿದ್ದಾರೆ ಅಂದರೆ ವಿಧಾನಸೌಧಕ್ಕೆ , ಮಿನಿಸ್ಟರ್ ಕರೆಸಿದ್ದಾರೆ, ಆ ಮಿನಿಸ್ಟರ್ ಸಹ ಪತ್ತೆ ಇರುವುದಿಲ್ಲ, ಆ ಅಧಿಕಾರಿಗಳೂ ಪತ್ತೆ ಇರುವುದಿಲ್ಲ. ಅಲ್ಲಿ ಆಫೀಸಿನಲ್ಲೂ ಇರುವುದಿಲ್ಲ. ಇಲ್ಲೂ ಇರುವುದಿಲ್ಲ. ಹೀಗೆ ತಪ್ಪಿಸಿಕೊಳ್ಳುವುದು. ಜನ ಪ್ರತಿನಿಧಿ ಏನಾದರೂ ಹೇಳುತ್ತಾರೆ ಕೇಳಬೇಕು ಸಚಿವರು ಏನಾದರೂ ಹೇಳುತ್ತಾರೆ ಕೇಳಬೇಕು, ಅದ್ಯಾವುದೂ ಇಲ್ಲ. ಬೇಕಾದರೆ ಕಾನೂನಿನ ಪ್ರಕಾರ ಮಾಡುವುದಕ್ಕೆ ಆಗುವುದಿಲ್ಲ ಎಂದು ಹೇಳಿ. ನಮ್ಮ ಅಧ್ಯಕ್ಷರ ಮಾತನ್ನು ಕೇಳುತ್ತಿರಬೇಕು ಏತಕ್ಕೆಂದರೆ ದಬಾಯಿಸುತ್ತಾರೆ ಎಂದು ಇದು ಅನೇಕ ಶಾಸಕರ ಅನುಭವ. ಮತ್ತೆ ಎಷ್ಟೋ ಸಲ ನಾವು, ಮಂತ್ರಿಗಳು ಬೇರೆ ಕಾರ್ಯಕರ್ತರು ಫೋನ್ ಮಾಡಿದರೆ ಏನೋಪ್ಪ ಅಂಥವರು ಫೋನ್ ಮಾಡಿದ್ದರಂತೆ ಏಕಿರಬಹುದು ಎಂದು ತರಾತುರಿಯಲ್ಲಿ ಫೋನ್ ಮಾಡುತ್ತಾರೆ. ಇವರು ಶಾಸಕರು ಮಂತ್ರಿಗಳು ಮಾಡಿದರೂ ತಿರುಗಿ ಫೋನ್ ಮಾಡುವುದಿಲ್ಲ. ಏನಾದರೂ ಕೇಳಿದರೆ ನನ್ನ ಫೋನ್ ಕೆಟ್ಟಿತ್ತು. ಇಲ್ಲ ನಾನು ಹೊರಗೆ ಹೋಗಿದ್ದೆ ಏನಾದರೂ ಒಂದು ನೆಪ ಹೇಳುತ್ತಾರೆ. ಇಂಥವರ ಮೇಲೆ ನೀವು ಕಂಟ್ರೋಲ್ ಇಡಲಿಲ್ಲ ಅಂದರೆ ಮುಂದೇನೂ ಇದೇ ಪ್ರವೃತ್ತಿ ಬೆಳೆಯುತ್ತದೆ, ಇದೇ ರೀತಿ ನಡವಳಿಕೆ ಮುಂದೇನೂ ವರ್ತಿಸಿದರೆ ಮುಂದಿನ ಪೀಳಿಗೆಗೂ ನೀವು ನಡೆಸಿದಂತಹ ಆಡಳಿತ ನೋಡಿಕೊಂಡು ಅವರು ಹೇಳಬಹುದು, ಇದೇನಪ್ಪ, ಓ ಇದರ ಕಂಟಿನ್ಯೂಟಿ ಹೀಗೇ ಇದೆ, ಇನ್ನೂ ಹದಗೆಡುತ್ತದೆ ಎಂಬ ಒಂದು ಭಾವನೆ ಬರುತ್ತದೆ. ದಯವಿಟ್ಟು ನಿಮ್ಮ ಕೈಯಲ್ಲಿದ್ದಾಗ ಪ್ರಯತ್ನಪಡಿ. ಯಾಕೆಂದರೆ ಎಲ್ಲವನ್ನೂ ಒಂದು ದಿವಸದಲ್ಲಿ ಸರಿಪಡಿಸುವುದಕ್ಕಾಗುವುದಿಲ್ಲ. ನಿಮಗೆ ಎರಡು ವರ್ಷ ಅವಧಿ ಇತ್ತು, ಎರಡು ವರ್ಷದಲ್ಲೂ ಸರಿಪಡಿಸುವುದು ಸಾಧ್ಯವಾಗದೇ ಇದ್ದರೆ ಮತ್ತೆ ಹತ್ತು ವರ್ಷ ಬೇಕಾ? ಕರ್ನಾಟಕದಲ್ಲಂತೂ ಯಾರು ಹತ್ತು ವರ್ಷ ಕಂಪ್ಲೀಟ್ ಮಾಡಿರುವುದು ನೋಡಿಲ್ಲ. ದೇವರಾಜ ಅರಸರದ್ದೇ ಗರಿಷ್ಠ 8 ವರ್ಷಗಳು. ಆದರೆ ಒಂದೆರಡು ಮೀಟಿಂಗ್ಸ್ ಮಾತ್ರ ಬಹಳ ಸೀರಿಯಸ್ ಮಾಡಿದಿರಿ, ಯಾವಾಗ ಪಾರ್ಲಿಮೆಂಟ್ ಚುನಾವಣೆ ಆದಮೇಲೆ, ಮೂರನೇ ಮಹಡಿಯ ಸಮ್ಮೇಳನಾಂಗಳದಲ್ಲಿ ಓ ನಮ್ಮ ಕುರ್ಚಿನೇ ಹೋಗುವ ಹಾಗೆ ಕಾಣುತ್ತದೆ ಎಂದು ತಿಳಿದು ಕೊಂಡು ಎರಡು ಮೀಟಿಂಗ್ ಮಾತ್ರ ಸೀರಿಯಸ್ಸಾಗಿ ಮಾಡಿದಿರಿ. ಅದಾದಮೇಲೆ ಜಿಲ್ಲಾಧಿಕಾರಿಗಳು ಒಂದು ತಿಂಗಳಿನಲ್ಲಿ ಒಂದು ರಾತ್ರಿ ಟೂರ್ ಮಾಡುತ್ತಾರೆ. ಮೊದಲು ಅದೂ ಇರಲಿಲ್ಲ. ಯಾಕೆಂದರೆ ಜಿಲ್ಲಾಧಿಕಾರಿಗಳು ಟೂರ್‌ನಲ್ಲಿ ತಾಲ್ಲೂಕುಗಳಲ್ಲಿ ತಿಂಗಳಲ್ಲಿ ಒಂದೆರಡು ದಿವಸ ಇರದೇ ಇದ್ದರೆ ಉಪಯೋಗ ಇಲ್ಲ. ಅದೇ ರೀತಿ ಜಿಲ್ಲಾಪಂಚಾಯತಿಗಳ ಚೀಫ್ ಸೆಕ್ರೆಟರಿಯವರು, ಇಂಜಿನಿಯರ್‌ಗಳು, ಹೀಗೆ ಎಲ್ಲಾ ಅಧಿಕಾರಿಗಳು, ಇವತ್ತು ನಾನು ಸ್ಪಷ್ಟವಾಗಿ ಹೇಳುತ್ತೇನೆ, ಸಾಕಷ್ಟು ಕ್ಲಾಸ್ ಓನ್ ಕ್ಲಾಸ್

ಟು ಅಧಿಕಾರಿಗಳು ತಾಲ್ಲೂಕು ಕೇಂದ್ರ ಸ್ಥಳಕ್ಕೆ ಬರುತ್ತಾರೆ, ಇಲ್ಲಾ ಜಿಲ್ಲಾ ಕೇಂದ್ರ ಸ್ಥಳಕ್ಕೆ ಬರುತ್ತಾರೆ. ತಾಲ್ಲೂಕು ಕೇಂದ್ರ ಸ್ಥಳದವರು ಜಿಲ್ಲಾ ಕೇಂದ್ರ ಸ್ಥಳಕ್ಕೆ ಬರುತ್ತಾರೆ, ವಿಲೇಜ್‌ನಲ್ಲಿರುವವರು ತಾಲ್ಲೂಕಿಗೆ ಬರುತ್ತಾರೆ. ಬೇಕಾದರೆ ನಿಮ್ಮ ಜಿಲ್ಲಾಧಿಕಾರಿ, ಚೀಫ್ ಎಕ್ಸಿಕ್ಯುಟೀವ್ ಆಫೀಸರ್‌ಗಳು ಮತ್ತು ಎಇಒಗಳಿಗೆ ಸರ್ಪ್ರೈಸ್ ವಿಸಿಟ್ ಮಾಡಿ ಎಂದು ಹೇಳಿ, ಯಾರು ಹಳ್ಳಿಗಳಲ್ಲಿ ಕೆಲಸ ಮಾಡುತ್ತಾರೆ. ತಾಲ್ಲೂಕಿನಲ್ಲಿ ಮನೆ ಮಾಡಿಕೊಂಡು ಅಲ್ಲಿ ಇರುತ್ತಾರೆ. ತಾಲ್ಲೂಕಿನಲ್ಲಿರುವ ಅಧಿಕಾರಿಗಳು ಜಿಲ್ಲೆಗೆ, ಸುಮ್ಮನೆ ಬರುವುದು, ಎಲ್ಲಿದ್ದಾರೆ ಎಂದು ಕೇಳಿದರೆ ಚಿಂತಾಮಣಿಯಲ್ಲಿದ್ದರೆ ಶ್ರೀನಿವಾಸಪುರ ಅನ್ನುವುದು ಅಥವಾ ಅವರ ವ್ಯಾಪ್ತಿಗೆ ಬರುವ ಊರು ಹೆಸರು ಹೇಳಿಕೊಂಡು ಬೆಂಗಳೂರಿಗೇ ಬರುವುದು. ಹೀಗೆ ಇವೊತ್ತು ನಡೆದಿದೆ. ಅವರನ್ನು ಚುರುಕುಗೊಳಿಸದೆ, ಯಾರಿಗೂ ಇದರ ಟಾರ್ಗೆಟ್ ಕೊಡದಿದ್ದರೆ ಅವರು ಕೆಲಸ ಮಾಡುವುದಿಲ್ಲ. ಅದಕ್ಕೋಸ್ಕರ ನಾನು ಇವೊತ್ತು ಹೇಳತಕ್ಕಂಥಾದ್ದು ಇಷ್ಟೆ, ಪೊಲೀಸ್ ಇಲಾಖೆಯಲ್ಲೂ ಕೂಡ ಆಡಳಿತ ಹದಗೆಟ್ಟಿದೆ. ಇದಕ್ಕೆ ಉದಾಹರಣೆಯಾಗಿ, ಸೇಡಂ, ಆಳಂದ, ಅಫಜಲಪುರ, ಹೊಸಕೋಟೆ ಮತ್ತು ಬೆಂಗಳೂರಿನ ಪ್ರಕರಣಗಳನ್ನು ಹೇಳಿದೆ. ಇದೆಲ್ಲವನ್ನೂ ಕೂಡ ತಾವು ನೋಡಿದಾಗ ನನಗನ್ನಿಸಿದ ಮಟ್ಟಿಗೆ ಇದರಲ್ಲಿ ಮನಸ್ಸಿಟ್ಟು ತಾವು ಸುಧಾರಣೆ ತರುವ ಪ್ರಯತ್ನ ಮಾಡುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಮತ್ತು ಎಲ್ಲೆಲ್ಲಿ ದೌರ್ಜನ್ಯಗಳಾಗಿವೆಯೋ ಅದರ ಬಗ್ಗೆಯೂ ಪ್ರತಿ ಮೂರು ತಿಂಗಳಿಗೊಮ್ಮೆ ರಿವ್ಯೂ ಮಾಡಬೇಕು. ದೌರ್ಜನ್ಯವಾಗುವುದಕ್ಕೆ ಹಿನ್ನೆಲೆ ಏನು? ಇದಕ್ಕೆ ಸಾಮಾಜಿಕ, ಆರ್ಥಿಕ ಕಾರಣವೇ? ಆಡಳಿತದ ಕಾರಣವೇ? ಅಧಿಕಾರಿಗಳಿಂದ ಆಗುತ್ತಿದೆಯೇ? ಇದರಲ್ಲಿ ರಾಜಕೀಯವೇನಾದರೂ ಇದೆಯೇ ಎನ್ನುವುದರ ಬಗ್ಗೆ ತಿಳಿದುಕೊಂಡು ದೌರ್ಜನ್ಯಗಳನ್ನು ತಡೆಗಟ್ಟಲು ಸೂಕ್ತ ಕ್ರಮ ತೆಗೆದುಕೊಳ್ಳದಿದ್ದರೆ ಖಂಡಿತವಾಗಿಯೂ ಇದು ಮುಂದುವರಿಯುತ್ತಲೇ ಇರುತ್ತದೆ ಮತ್ತು ಇದರಿಂದ ಏನಾಗುತ್ತದೆಂದರೆ, ನಾವು ಯಾರಿಗೇ ಹೊಡೆದರೂ, ಬಡಿದರೂ ನಮ್ಮನ್ನು ಯಾರು ಕೇಳುವುದಿಲ್ಲ, ಸರ್ಕಾರ ನಮ್ಮ ಜೊತೆಯಲ್ಲಿದೆ, ಅಧಿಕಾರಿಗಳು ನಮ್ಮ ಜೊತೆಯಲ್ಲಿದ್ದಾರೆ, ನಾವು ಏನು ಬೇಕಾದರೂ ಮಾಡಬಹುದೆಂಬ ಭಾವನೆ ಬರುತ್ತದೆ. ಆದುದರಿಂದ, ಇದರ ಬಗ್ಗೆ ತಾವು ಬಹಳ ಗಂಭೀರದಿಂದ ಚಿಂತನೆ ಮಾಡಬೇಕು. ಇದರಲ್ಲಿ ಈಗಾಗಲೇ ಹಿಂದೇಟು ಹಾಕಿರುವುದರಿಂದ ಇದರ ಬಗ್ಗೆ ತಾವು ವೈಯಕ್ತಿಕವಾಗಿ ಆಸಕ್ತಿ ವಹಿಸಬೇಕೆಂದು ಹೇಳುತ್ತೇನೆ. ಇನ್ನೊಂದು ಸಲಹೆ ಏನೆಂದರೆ, ಜಿಲ್ಲಾ ಮಟ್ಟದಲ್ಲಿ ನಾವು ಕೆ.ಡಿ.ಪಿ. ಮೀಟಿಂಗ್ ಅನ್ನು ನಡೆಸುತ್ತೇವೆ. ಮೀಟಿಂಗ್‌ನಲ್ಲಿ ಬಹಳಷ್ಟು ಜಿಲ್ಲಾ ಉಸ್ತುವಾರಿ ಮಂತ್ರಿಗಳು ಗಂಭೀರವಾಗಿ ರಿವ್ಯೂ ಮಾಡುವುದಿಲ್ಲ. ಇದು ನನ್ನ ವೈಯಕ್ತಿಕ ದೂರಲ್ಲ, ಇದರ ಬಗ್ಗೆ ನೀವು ಯಾರನ್ನೇ ಕೇಳಿ ಅಥವಾ ಅವರ ಬಗ್ಗೆ ಚಾರ್ಜ್ ಮಾಡುತ್ತೇನೆಂದಲ್ಲ. ಕೆಲವು ಮಂತ್ರಿಗಳು ಮೀಟಿಂಗ್‌ಗೆ ಬಂದು ಸರಿಯಾಗಿ ರಿವ್ಯೂ ಮಾಡದೆ ಹಾಗೆ ನೋಡಿ ಹೋಗಿ ಬಿಡುತ್ತಾರೆ. ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಯಾವ್ಯಾವ ಅಭಿವೃದ್ಧಿ ಕೆಲಸಗಳಾಗಿವೆ? ಯಾವ ಅಧಿಕಾರಿ ಸರಿಯಾಗಿ ಕೆಲಸ ಮಾಡಿಲ್ಲ, ಯಾವ ಅಧಿಕಾರಿ ತನಗೆ ಕೊಟ್ಟಿರುವ ಟಾರ್ಗೆಟ್ ಮುಟ್ಟಿಲ್ಲ, ಟಾರ್ಗೆಟ್ ಮುಟ್ಟಲಿಲ್ಲವೆಂದರೆ ಆತನ ತೊಂದರೆಯೇನು? ಬಜೆಟರಿ ತೊಂದರೆ ಇದೆಯೇ? ಅಡ್ಮಿನಿಸ್ಟ್ರೇಟಿವ್ ತೊಂದರೆ ಇದೆಯೇ? ಸೆಕ್ರಟೇರಿಯೇಟ್‌ನಿಂದ ಬರುವುದು ಏನಾದರೂ ಇದೆಯೇ? ಯಾವುದಾದರೂ ಮಂತ್ರಿಗಳ ಬಳಿ ಫೈಲ್‌ನಿಂತರೆ ಹೋಗಿ ಪರ್‌ಸ್ಯೂ ಮಾಡಬೇಕು ಅಥವಾ ಸ್ಯಾಂಕ್ಷನ್ ಮಾಡಿಕೊಂಡು ಪುನಃ ತಂದು

ಹೇಳಬೇಕು. ಈ ಕೆಲಸವನ್ನು ಒಬ್ಬರೂ ಕೂಡ ಮಾಡುವುದಿಲ್ಲ. ಅನೇಕರು ಶಾಸ್ತ್ರಕ್ಕೋಸ್ಕರ ಮೀಟಿಂಗ್‌ಗೆ ಬಂದು ಅರ್ಧ ಗಂಟೆ ಕಾಲ ರೆಕಾರ್ಡ್ ಮಾಡಿಕೊಂಡ ನಂತರ ಹೊರಟು ಬಿಡುತ್ತಾರೆ. ಅವರ ಟೂರ್ ಪ್ರೋಗ್ರಾಂ ಅನ್ನು ತರಿಸಿಕೊಂಡು ನೋಡಿದರೆ ತಿಂಗಳಿನಲ್ಲಿ ಇಪ್ಪತ್ತೈದು ದಿವಸಗಳ ಕಾಲ ಟೂರ್‌ನಲ್ಲೇ ಇರುತ್ತಾರೆ, ಆದರೆ ಈ ಕೆಲಸ ಮಾಡುವುದಿಲ್ಲ, ಬೇರೆಲ್ಲಾ ಕೆಲಸಗಳನ್ನೂ ಮಾಡುತ್ತಾರೆ. ಇದರ ಬಗ್ಗೆ ನಿಮಗೆ ಹೇಳಿದರೆ ಬೇಜಾರಾಗುತ್ತದೆ, ಬೇಕಾದರೆ ಪ್ರೊಸೀಡಿಂಗ್ಸ್ ತೆಗೆದುಕೊಂಡು ನೋಡಿ. ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ರಿವ್ಯೂ ಮಾಡಬೇಕೆಂದು ಇರುತ್ತದೆ. ಅವರುಗಳು ಸಭೆಯಲ್ಲಿ ಎಷ್ಟು ಗಂಟೆಗಳ ಕಾಲ ಕುಳಿತು ರಿವ್ಯೂ ಮಾಡುತ್ತಾರೆ? ಹೌಸಿಂಗ್ ಪ್ರೋಗ್ರಾಂ ಬಗ್ಗೆ ಇರಬಹುದು, ಜಿಲ್ಲಾ ಪರಿಷತ್ ಪ್ರೋಗ್ರಾಂ ಇರಬಹುದು, ವಿಲೇಜ್ ಕಾಟೇಜ್ ಇಂಡಸ್ಟ್ರೀಸ್ ಬಗ್ಗೆ ಇರಬಹುದು ಅಥವಾ ಮೈನರ್ ಇರಿಗೇಷನ್ ಬಗ್ಗೆ ಇರಬಹುದು, ಅಂದರೆ, ಅವರವರ ಜ್ಯುರಿಸ್‌ಡಿಕ್ಷನ್‌ನಲ್ಲಿ ಯಾವ್ಯಾವ ಅಭಿವೃದ್ಧಿ ಕೆಲಸಗಳಾಗಿವೆ, ಎಷ್ಟರಮಟ್ಟಿಗೆ ಗಮನ ಕೊಟ್ಟು ಅದರ ಬಗ್ಗೆ ಚಿಂತನೆ ಮಾಡಿದ್ದಾರೆಂಬುದರ ಬಗ್ಗೆ ತಿಂಗಳಿಗೊಮ್ಮೆ ರಿವ್ಯೂ ಮಾಡುವುದಕ್ಕೆ ಅವರಿಗೇನು ತಾಪತ್ರಯವಿದೆ? ಇದರೊಳಗೆ ತಪ್ಪಿದ್ದರೆ, ಅಥವಾ ಏನಾದರೂ ಬಜೆಟರಿ ಪ್ರಾವಿಷನ್‌ನಲ್ಲಿ ಕೊರತೆ ಇದ್ದರೆ ಮುಖ್ಯಮಂತ್ರಿಗಳ ಹತ್ತಿರ ಬಂದು ಸರ್, ಮೊನ್ನೆ ದಿವಸ ನಾನು ರಿವ್ಯೂ ಮಾಡಿದೆ, ನನ್ನ ಕ್ಷೇತ್ರಕ್ಕೆ ಹೋದರೆ ತಾಪತ್ರಯವಿದೆ, ಇದಕ್ಕೆ ಹಣದ ಕೊರತೆ ಇದೆ, ಮೂರನೇ ಒಂದು ಭಾಗದಷ್ಟು ಬಜೆಟ್ ಪ್ರಾವಿಷನ್ ಇಲ್ಲವೆಂದೋ ಅಥವಾ ಈ ರೀತಿ ಪ್ರೋಗ್ರಾಂ ಕೊಟ್ಟಿರುವುದರಿಂದ ಸರ್ಕಾರಿ ಆಜ್ಞೆ ಬಂದಿಲ್ಲವೆಂದು ಯಾರಾದರೂ ಹೇಳಿದ್ದಾರೆಯೇ? ಇವೊತ್ತು ತಾವು ಹೇಗೂ ಉತ್ತರ ಕೊಡುತ್ತೀರಿ, ತಾವು ಪ್ರಾಮಾಣಿಕವಾಗಿ, ಆತ್ಮಸಾಕ್ಷಿಯಾಗಿ ಹೇಳಿ. ಎಷ್ಟು ಜನ ಮಂತ್ರಿಗಳು ರಿವ್ಯೂ ಮಾಡಿ ತಮ್ಮ ಜಿಲ್ಲೆಯಲ್ಲಿ ಇದರ ಕೊರತೆ ಇದೆಯೆಂದು ರೆಪ್ರಸೆಂಟ್ ಮಾಡಿದ್ದಾರೆ? ಒಟ್ಟು 40 ಮಂತ್ರಿಗಳಲ್ಲಿ ನೀವು ಇನ್‌ಚಾರ್ಜ್ ಇರುವ 25 ಜಿಲ್ಲೆಗಳಿರಬಹುದು ಅಥವಾ ಹಿಂದಿನ 20 ಜಿಲ್ಲೆಗಳಿರಬಹುದು. ಈ ರೀತಿ ನಿಮ್ಮ ಬಳಿ ಬಂದು ರೆಪ್ರಸೆಂಟ್ ಮಾಡಿದ್ದಾರೆಯೇ? ಇಲ್ಲ ನಾನು ಈ ಮಾತನ್ನು ಏಕೆ ಹೇಳುತ್ತಿದ್ದೇನೆಂದರೆ, ಇಡೀ ರಾಜ್ಯದಲ್ಲಿ ಈ ರೀತಿ ಮಾಡದೆ ಹೋದರೆ ಅಭಿವೃದ್ಧಿ ಕೆಲಸ ಕುಂಠಿತಗೊಳ್ಳುತ್ತದೆ. ಏಕೆಂದರೆ, ನಮಗೂ ಒಂದು ಟಾರ್ಗೆಟ್ ಇರುತ್ತದೆ, ನಾವು ರಾಜ್ಯಕ್ಕೆ 4-5-7 ಲಕ್ಷದಷ್ಟು ಸೈಟುಗಳನ್ನು ಕೊಡುತ್ತೇವೆಂದು ಟಾರ್ಗೆಟ್ ಕೊಟ್ಟ ನಂತರ, ನೀವು ಕೊಟ್ಟ ಟಾರ್ಗೆಟ್ ಅನ್ನು ನಿಮ್ಮ ಮಂತ್ರಿಗಳು ಸಾಧಿಸಿದ್ದಾರೆಯೇ? ಇಲ್ಲವೇ ಎಂಬ ಬಗ್ಗೆ ಅಧಿಕಾರಿಗಳು ರಿವ್ಯೂ ಮಾಡಿ ನಿಮಗೆ ಹೇಳಬೇಕೇ? ಬೇಡವೇ? ಈ ರೀತಿ ಮಾಡಿದರೆ ಅಭಿವೃದ್ಧಿ ಕಾರ್ಯಗಳು ಅನುಷ್ಠಾನಗೊಂಡು ರಾಜ್ಯ ಪ್ರಗತಿ ಕಾಣುತ್ತದಲ್ಲದೆ, ವಿವಿಧ ವರ್ಗಗಳವರ ಏಳಿಗೆಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳು ಯಶಸ್ವಿಯಾಗಿ ಅದರ ಲಾಭ ಫಲಾನುಭವಿಗಳಿಗೆ ಸಿಗುತ್ತದೆ. ಆದರೆ, ಸಾಕಷ್ಟು ಜನರು ಈ ಕೆಲಸ ಮಾಡುವುದಿಲ್ಲ. ಇದಕ್ಕೆ ರಾಜಕೀಯ ಒತ್ತಡವಿರಬಹುದು ಅಥವಾ ನಿಮ್ಮ ಆಂತರಿಕ ತೊಂದರೆಗಳಿರಬಹುದು, ನನಗೆ ಗೊತ್ತಿಲ್ಲ ಅಥವಾ ಅದರ ಕಡೆ ಲಕ್ಷ್ಯ ಕೊಡದಿರಬಹುದು. ಲಕ್ಷ್ಯ ಕೊಟ್ಟರೂ ಆಯಿತು, ಕೊಡದಿದ್ದರೂ ಆಯಿತು ಎನ್ನುವ ಭಾವನೆ ಇರಬಹುದು. ಅನಂತರ, ಕೆಲವು ಮಂತ್ರಿಗಳು ಕೆಲವು ಕಡೆಗಳಲ್ಲಿನ ಡೆವಲಪ್‌ಮೆಂಟಲ್ ವರ್ಕ್ ಬಗ್ಗೆ ವೆಂಜನ್ಸ್‌ನಿಂದ ಆ್ಯಕ್ಟ್ ಮಾಡುತ್ತಾರೆ, ಏಕೆಂದರೆ, ಅವರಿಗೆ ಡಿಸ್ಕ್ರಿಷನ್ ಇರುತ್ತದಲ್ಲಾ. ಈಗ ಒಬ್ಬರಿಗೆ

50 ಮನೆ ಕೊಟ್ಟರೆ, ಇನ್ನೊಬ್ಬರಿಗೆ 100 ಮನೆ ಮತ್ತೊಬ್ಬರಿಗೆ 200 ಮನೆಗಳನ್ನು ಕೊಡುವುದು. ಅಲ್ಲಿರುವ ಜನರು ನಿಮಗೆ ಓಟು ಕೊಡದಿರಬಹುದು, ಮುಂದಿನ ಸಲ ಕೊಡಬಹುದು. ಸರ್ಕಾರ ಇರುವುದು ಜನರಿಗೋಸ್ಕರವೇ ಹೊರತು ಯಾರಾದರೂ ಮಂತ್ರಿಗಳಿಗೋಸ್ಕರ, ಪಕ್ಷದ ಕಾರ್ಯಕರ್ತರಿಗೋಸ್ಕರ ಇದೆಯೇ? ದಯವಿಟ್ಟು ನಿಮ್ಮ ಕಾಲದಲ್ಲಾದರೂ ಇದರ ಬಗ್ಗೆ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕು. ಕೆಲವರು ಯಾರೋ ನ್ಯಾರೋ ಮೈಂಡೆಡ್ ಜನರು ತಮ್ಮ ಬಳಿಗೆ ಬಂದು, ಸರ್ಕಾರ ಇದನ್ನು ಕೊಟ್ಟರೆ ನಮ್ಮ ಪಕ್ಷಕ್ಕೆ ಅನುಕೂಲವಾಗುತ್ತದೆ, ಅವರನ್ನು ತುಳಿದರೆ ನಮಗೆ ಒಳ್ಳೆಯದಾಗುತ್ತದೆಂದು ನಿಮ್ಮ ಕಿವಿಯಲ್ಲಿ ಹೇಳುತ್ತಿರಬಹುದು, ಮತ್ತು ನಿಮ್ಮಿಂದ ಬರೆಸಿಕೊಂಡು ಹೋಗುತ್ತಿರಬಹುದು. ನೀವೂ ಸಹ ಅದೇ ರೀತಿಯಾಗಿ ನಡೆದುಕೊಂಡರೆ ನಾನು ಹೇಳುತ್ತೇನೆ. ನಿಜವಾಗಿಯೂ ತಮಗೆ ನಲವತ್ತು ವರ್ಷಗಳ ಅನುಭವವೇನಿದೆ, ಅದನ್ನು ಕಟ್ಟಿ ಬುತ್ತಿ ಮಾಡಿ ಬೇರೆ ಕಡೆ ಬಿಸಾಕಿ ಬಿಡಿ, ಇಲ್ಲವೆಂದರೆ ಜನರಿಗೆ ಯಾವುದು ಬೇಕೋ ಅದನ್ನು ತಾವು ದಯವಿಟ್ಟು ಆಚರಣೆಗೆ ತನ್ನಿ ಎಂದು ಹೇಳುತ್ತೇನೆ. ಎಲ್ಲಾ ಜಿಲ್ಲಾಧಿಕಾರಿಗಳು, ಮಂತ್ರಿಗಳು ತಿಂಗಳಿಗೊಮ್ಮೆ ರಿವ್ಯೂ ಮಾಡದಿದ್ದರೆ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮೆಯಾದರೂ ರಿವ್ಯೂ ಮಾಡಲು ಕ್ರಮ ಕೈಗೊಳ್ಳಬೇಕು. ನಾವು ಶಾಸಕರಾದವರು ನಮ್ಮ ತಾಲ್ಲೂಕುಗಳಲ್ಲಿ ಅಭಿವೃದ್ಧಿ ಕೆಲಸ-ಕಾರ್ಯಗಳ ಬಗ್ಗೆ ರೂಲ್ಸ್ ಪ್ರಕಾರ ಮೂರು ತಿಂಗಳಿಗೊಮ್ಮೆಯಾದರೂ ಕೆ.ಡಿ.ಪಿ. ಮೀಟಿಂಗ್‌ನಲ್ಲಿ ಪಾಲ್ಗೊಂಡು ರಿವ್ಯೂ ಮಾಡುತ್ತೇವೆ. ಆದರೆ, ಜಿಲ್ಲಾಧಿಕಾರಿಗಳು, ಚೀಫ್ ಸೆಕ್ರೆಟರಿಯವರು ವರ್ಷದಲ್ಲಿ ಒಂದು ಸಾರಿಯೂ ಮೀಟಿಂಗ್‌ಗೆ ಅಟೆಂಡ್ ಆಗಿಲ್ಲ. ಏಕೆಂದರೆ, ಕೆಲವು ಸ್ಯಾಂಕ್ಷನ್ಸ್, ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ಸ್ ಇರುತ್ತದಾದ್ದರಿಂದ ಅವರು ಕಛೇರಿಯಲ್ಲಿಯೇ ಇರುತ್ತಾರೆ. ಆದುದರಿಂದ, ಇದರ ಬಗ್ಗೆ ತಮಗೆ ಹೇಳಬೇಕೆಂದರೆ, ಒಂದು ತಿಂಗಳು ಕಾಲ ದಾವಣಗೆರೆಯಲ್ಲಿನ ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಪರಿಶೀಲಿಸುವುದಕ್ಕೆ ಸಭೆಯಲ್ಲಿ ಪಾಲ್ಗೊಳ್ಳಬೇಕು, ಅದೇ ರೀತಿ ಚನ್ನಗಿರಿಯಲ್ಲಿ ಒಂದು ತಿಂಗಳು, ಇನ್ನೊಂದು ಕ್ಷೇತ್ರದಲ್ಲಿ ಒಂದು ತಿಂಗಳ ಕಾಲ ಸಭೆಯಲ್ಲಿ ಪಾಲ್ಗೊಂಡು ಅಭಿವೃದ್ಧಿ ಕೆಲಸ-ಕಾರ್ಯಗಳನ್ನು ಪರಿಶೀಲಿಸುವುದರಿಂದ ಏನಾಗುತ್ತದೆಂದರೆ, ಜಿಲ್ಲಾ ಮಟ್ಟದ ಒಬ್ಬ ಅಧಿಕಾರಿ ಸಭೆಯಲ್ಲಿ ಪಾಲ್ಗೊಳ್ಳುತ್ತಾರೆಂದರೆ ಮತ್ತು ನಾವು ಸಭೆಯಲ್ಲಿ ರಿವ್ಯೂ ಮಾಡುತ್ತೇವೆಂದಾದರೆ ಕೆಳಮಟ್ಟದಲ್ಲಿರುವ ಅಧಿಕಾರಿಗಳು ಎಚ್ಚರಗೊಂಡು 'ಸಭೆಗೆ ಜಿಲ್ಲಾಧಿಕಾರಿಗಳು ಬಂದಿರುವುದರಿಂದ, ನಾನು ಏನಾದರೂ ತಪ್ಪು ಮಾಡಿದ್ದರೆ ನನ್ನ ಮೇಲೆ ಕ್ರಮ ಜರುಗಿಸುತ್ತಾರೆ. ಎಂಬ ಭಾವನೆ ಅವರಲ್ಲಿ ಬರುತ್ತದೆ. ಅವರು ವರ್ಷದಲ್ಲಿ 5-6 ಅಥವಾ 10 ತಾಲ್ಲೂಕುಗಳನ್ನಾದರೂ ಕವರ್ ಮಾಡಬೇಕೆಂದು ಆದೇಶಿಸಿದರೆ ಭಯದಿಂದ ಕೆಲಸ ಮಾಡುತ್ತಾರಲ್ಲದೆ, ಸರ್ಕಾರ ಹಮ್ಮಿಕೊಂಡಿರುವ ನಾನಾ ಯೋಜನೆಗಳನ್ನು ಅನುಷ್ಠಾನಕ್ಕೆ ತರುವೂದು ಕೂಡ ಸುಲಭವಾಗುತ್ತದೆಂಬ ಮಾತನ್ನು ಹೇಳುತ್ತೇನೆ. ಬಹುಶಃ ಇದನ್ನು ತಾವು ಜಾರಿಗೊಳಿಸುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ಅನಂತರ, ಕೊನೆಯದಾಗಿ ವಿಷಯ ಪ್ರಸ್ತಾಪಿಸುತ್ತೇನೆ, ಅದು ನಿಮ್ಮ ಗಮನಕ್ಕೆ ಈಗಾಗಲೇ ಬಂದಿದೆ. ಏನೆಂದರೆ, ಎಲೆಕ್ಟ್ರಿಸಿಟಿ ಬಗ್ಗೆ ವಿಶೇಷವಾಗಿ ಸಾಕಷ್ಟು ಸಲ ಇಲ್ಲಿ ಚರ್ಚೆ ಮಾಡಿದ್ದೇವೆ, ಇದರ ಬಗ್ಗೆ ನೀವು ಏನಾದರೊಂದು ನಿರ್ಧಾರ ತೆಗೆದುಕೊಳ್ಳಬೇಕಾಗುತ್ತದೆ. ಏಕೆಂದರೆ, ಕೇಂದ್ರ ಸರ್ಕಾರದವರು ಈ ಕುರಿತು ಒಂದು ಬಿಲ್ ತಂದಿದ್ದು, ಇವೊತ್ತು ನಿಮ್ಮದೂ ಒಂದು ಬಿಲ್ ಇಂಟ್ರಡ್ಯೂಸ್ ಆಗಿ ಚರ್ಚೆಯಿಲ್ಲದೆ

ಪಾಸ್ ಆಯಿತು. ಈ ಕುರಿತು ಹೇಳುವುದಾದರೆ, ಕೇಂದ್ರ ಸರ್ಕಾರದವರು ಒಂದು ಆರ್ಡಿನೆನ್ಸ್ ಅನ್ನು ಇಶ್ಯೂ ಮಾಡಿ ಮೂರು ವರ್ಷಗಳ ಕಾಲ ಸಬ್ಸಿಡಿ ಇರುವುದನ್ನು ತೆಗೆದುಹಾಕಬೇಕೆಂದು ಸಲಹೆ ಕೊಟ್ಟಿದ್ದಾರೆ, ಇದೇ ವಿಷಯವನ್ನು ಜಯಲಲಿತಾರವರೂ ಕೂಡ ಪ್ರಸ್ತಾಪಿಸಿದ್ದಾರೆ, ಅದು ಎಲ್ಲರಿಗೂ ಅಪ್ಲಿಕಬಲ್ ಆಗುತ್ತದೆ. ಅಂದರೆ, ಸಬ್ಸಿಡಿ ಕೊಡತಕ್ಕಂಥಾದ್ದರ ಬಗ್ಗೆ ಒಂದು ವೇಳೆ ಕೇಂದ್ರ ಸರ್ಕಾರ ಹೊರಡಿಸಿರುವ ಆರ್ಡಿನೆನ್ಸ್ ಆಧಾರದ ಮೇಲೆ ನಾವೇನಾದರೂ ಮುಂದಿನ ಕ್ರಮ ಕೈಗೊಂಡರೆ ನಿಜವಾಗಿಯೂ ನಮ್ಮ ರೈತರಿಗೆ ನಾವು ತೊಂದರೆಯುಂಟು ಮಾಡಿದಂತಾಗುತ್ತದೆ. ಈಗಾಗಲೇ ಟ್ಯಾರಿಫ್ ಅನ್ನು ಸಾಕಷ್ಟು ಏರಿಸಿದ್ದೇವಲ್ಲದೆ ಮುಂದೆ ಟ್ಯಾರಿಫ್ ಅನ್ನು ರಿವೈಸ್ ಮಾಡುವುದಕ್ಕೂ ಕೂಡ ಅವರು ಅವಕಾಶ ಮಾಡಿಕೊಟ್ಟಿದ್ದಾರೆ. ಅಲ್ಲದೆ, ಪ್ರತಿಯೊಂದು ಬೋರ್ಡ್, ಕಾರ್ಪೊರೇಷನ್‌ಗಳೂ ಸಹ ಸೆಲ್ಫ್‌ಸಫಿಷಿಯೆಂಟ್ ಆಗಿ ತಮ್ಮ ಕಾಲ ಮೇಲೆ ತಾವು ನಿಲ್ಲಲು ಅಷ್ಟರಮಟ್ಟಿಗೆ ನೀವು ಟ್ಯಾಕ್ಸ್ ವಿಧಿಸಬೇಕೆಂದು ಹೇಳಿದ್ದಾರೆ. ತಾವೇನಾದರೂ ಇದರ ಬಗ್ಗೆ ಕ್ರಮ ಕೈಗೊಳ್ಳುವುದಕ್ಕೆ ಮುಂದಾದರೆ ಇಲ್ಲಿ ತೊಂದರೆಯಾಗುತ್ತಾದ್ದರಿಂದ ಅದನ್ನು ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಈಗಿನ ಹೊರೆಯೇ ಸಾಕಾಗಿದೆ, ಜೊತೆಗೆ ಇದನ್ನು ಏನಾದರೂ ಮಾಡುವುದಕ್ಕೆ ಹೋದರೆ ಮುಂದೆ ಅನಾಹುತವಾಗುತ್ತದೆ. ಇದರಿಂದ ರೈತರೆಲ್ಲಾ ತಮ್ಮ ಪಂಪುಸೆಟ್ಟುಗಳನ್ನೆಲ್ಲಾ ಕಿತ್ತು ಬಿಸಾಕಿ ಒಣಭೂಮಿಯಲ್ಲೇ ನಾವು ಬೆಳೆ ಬೆಳೆದುಕೊಳ್ಳುತ್ತೇವೆಂದು ಸುಮ್ಮನಾಗುತ್ತಾರೆ. ಹೀಗೆ ಮಾಡುವುದರಿಂದ ಒಂದು ಕಡೆ ಫುಡ್ ಪ್ರೊಡಕ್ಷನ್‌ಗೆ ಹೊಡೆತ ಬೀಳುತ್ತದಲ್ಲದೆ, ಇನ್ನೊಂದೆಡೆ 2-3 ಎಕರೆಗಳನ್ನು ಹೊಂದಿ ಪಂಪುಸೆಟ್ಟು ಇಟ್ಟುಕೊಂಡು ಜೀವನ ಸಾಗಿಸಿಕೊಳ್ಳುತ್ತೇವೆನ್ನುವಂಥ ರೈತರ ಬದುಕಿಗೂ ಕಲ್ಲು ಹಾಕಿದಂತಾಗುತ್ತದೆ. ಅದರ ಬಗ್ಗೆ ತಾವು ಚಿಂತನೆ ಮಾಡಬಾರದು ಎಂದು ನಾನು ಹೇಳುತ್ತೇನೆ. ವಿದ್ಯುಚ್ಛಕ್ತಿಗೆ ಸಂಬಂಧಿಸಿದಂತೆ ಮಂಡಿಸಲಾಗಿದ್ದ ಬಿಲ್ ಮೇಲೆ ನಾನು ಮಾತನಾಡಲಿಚ್ಛಿಸಿದ್ದೆ. ಆದರೆ ನಾನು ಯಾವುದೋ ಒಂದು ವಿಷಯದ ಬಗ್ಗೆ ಮಾನ್ಯ ಅಧ್ಯಕ್ಷರೊಡನೆ ಮಾತನಾಡಿ ಬರುವುದರೊಳಗೆ ಎರಡೇ ನಿಮಿಷದಲ್ಲಿ ಆ ಬಿಲ್ ಪಾಸ್ ಆಗಿಬಿಟ್ಟಿತ್ತು. ಆ ಬಿಲ್ ಎಷ್ಟು ಸ್ಪೀಡಾಗಿ ಪಾಸಾಗಿ ಬಿಟ್ಟಿದೆ ನೋಡಿ. ಸುಗ್ರೀವಾಜ್ಞೆಯಲ್ಲಿ ಕೇಂದ್ರದವರು ಸ್ಟೇಟ್‌ಗೆ ಡಿಸ್ಕ್ರಿಷನ್ ಕೊಟ್ಟಿದ್ದಾರೆ, ಅವರು ಬೇಕಾದರೆ ಹೆಚ್ಚು ಮಾಡಿಕೊಳ್ಳಬಹುದು, ಕಡಿಮೆಯೂ ಕೂಡ ಮಾಡಿಕೊಳ್ಳಬಹುದು, ಸಬ್ಸಿಡಿ ಬೇಕಾದರೂ ಕೊಡಬಹುದು ಎಂದು ಹೇಳಲಾಗುತ್ತಿದೆ. ಸರ್ಕಾರದಲ್ಲಿ ಏನಾದರೂ ಒಂದು ಕಾನೂನು ಅಥವಾ ಅವರದ್ದೇ ಆದಂತಹ ಒಂದು ಒತ್ತಡ ಇದ್ದ ಮೇಲೆ, ನಾವು ಮಾಡಿದರೂ ಕೂಡ ಅದು ನಡೆಯುತ್ತದೆ ಎನ್ನತಕ್ಕಂಥ ಭಾವನೆ ಬರುತ್ತದೆ. ಆಮೇಲೆ ಅಧಿಕಾರಿಗಳೂ ಕೂಡ ಅದೇ ಸಲಹೆಯನ್ನು ಕೊಡುತ್ತಾರೆ. ಸೆಂಟ್ರಲ್ ಆಕ್ಟ್ ಇದೆ, ನಾವ್ಯಾಕೆ ಮಾಡಬಾರದು ಎಂದು ಅವರು ಸಲಹೆ ನೀಡಬಹುದು. ಅದಕ್ಕಾಗಿ ದಯವಿಟ್ಟು ಅದರ ಬಗ್ಗೆ ಕೂಡ ತಾವು ಪುನರ್ ಪರಿಶೀಲನೆ ಅಷ್ಟೇ ಅಲ್ಲ, ಅದರ ಬಗ್ಗೆ ಚಿಂತನೆ ಮಾಡಿ ಒಂದು ನ್ಯಾಯವನ್ನು ದೊರಕಿಸಿ ಕೊಡಬೇಕು. ಅದಕ್ಕೆ ನೀವು ಒಪ್ಪಬಾರದು ಎನ್ನತಕ್ಕಂಥ ಮಾತನ್ನು ಹೇಳುತ್ತೇನೆ. ಕೊನೆಯದಾಗಿ, ಹೇಳುವುದೇನೆಂದರೆ, ಬೀದರ್ ಜಿಲ್ಲೆಯಲ್ಲಿ ಇನ್ನೂ ಅಜಿಟೇಷನ್ ನಡೆದಿದೆ. ಶ್ರೀಮಾನ್ ಖಂಡ್ರೆಯವರು ಅಜಿಟೇಷನ್ ಮಾಡುತ್ತಿದ್ದಾರೆ, ರೈತ ಸಂಘದವರೂ ಸೇರಿದಂತೆ ಎಲ್ಲಾ ಸಂಘದವರೂ ಕೂಡ ಮಾಡುತ್ತಿದ್ದಾರೆ. ಅವರ ಬೇಡಿಕೆ ಏನೆಂದರೆ ಮಹಾರಾಷ್ಟ್ರದಲ್ಲಿ ಯಾವ ರೀತಿ ಎಲ್ಲಾ ರೀತಿಯ ಬೆಳೆಗಳಿಗೂ ಕೂಡ ಕ್ರಾಪ್ ಕಾಂಪನ್‌ಸೇಷನ್ ಏನು ಕೊಟ್ಟಿದ್ದಾರೆ, ಅದೇ ರೀತಿ ಇಲ್ಲಿಯೂ

ಕೊಡಬೇಕೆಂದು ಕೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬೇಕಾದರೆ ಆ ರಾಜ್ಯದಿಂದ ಇದಕ್ಕೆ ಸಂಬಂಧಿಸಿದ ಜಿ.ಓ. ತರಿಸಿಕೊಂಡು ನೋಡಲಿ. ಆಂಧ್ರಪ್ರದೇಶದಲ್ಲಿ ಕಾಟನ್ ಮತ್ತು ರೆಡ್ ಗ್ರಾಮ್ಸ್ ಬೆಳೆಗಳಿಗೆ ಪರಿಹಾರ ಕೊಟ್ಟಿದ್ದಾರೆ. ಮಹಾರಾಷ್ಟ್ರದಲ್ಲಿ ಎಲ್ಲಾ ರೀತಿಯ ಬೆಳೆಗಳಿಗೂ ಕೂಡ ಎಕರೆಗೆ 1,000 ಸಾವಿರ ರೂ. ಅನಾನ್ಸ್ ಮಾಡಿ ಇವತ್ತು ರೈತರಿಗೆ ಅನುಕೂಲ ಮಾಡಿ ಕೊಟ್ಟಿದ್ದಾರೆ. ನಮ್ಮ ಪಕ್ಕದ ರಾಜ್ಯದಲ್ಲಿರತಕ್ಕಂತಹ ಸರ್ಕಾರ ಎಲ್ಲಾ ರೀತಿಯ ಬೆಳೆಗಳಿಗೆ ಕಾಂಪನ್‌ಸೇಷನ್ ಕೊಟ್ಟಿರುವಾಗ, ನಮ್ಮ ಕರ್ನಾಟಕ ಸರ್ಕಾರ ನಮಗೆ ಈ ರೀತಿ ಕೊಟ್ಟಿಲ್ಲ, ಸದನ ಸಮಿತಿ ಕೊಟ್ಟಂತಹ ರಿಪೋರ್ಟ್ ಅನ್ನೂ ಕೂಡ ಸರ್ಕಾರ ಒಪ್ಪಿಲ್ಲ, ದೊಡ್ಡ ಅನ್ಯಾಯ ಇದರಿಂದಾಗಿ ನಮ್ಮ ರೈತರಿಗೆ ವಿಶೇಷವಾಗಿ ಆ ಭಾಗದ ರೈತರಿಗೆ ಆಗಿದೆ ಎಂಬ ಭಾವನೆ ಇವತ್ತು ಅಲ್ಲಿಯ ಜನರಲ್ಲಿ ಮೂಡಿದೆ. ಆದುದರಿಂದ ದಯವಿಟ್ಟು ತಾವು ಅದರ ಬಗ್ಗೆಯೂ ಕೂಡ ಪುನರ್ ಪರಿಶೀಲನೆ ಮಾಡಿ ತಮ್ಮ ಉತ್ತರದಲ್ಲಿ, ಅದಕ್ಕೆ ಏನಾದರೂ ಪರಿಹಾರ ಕಂಡು ಹಿಡಿದು ಪ್ರಕಟಿಸಬೇಕು. ಈಗ ತೊಗರಿ ಬೇಳೆ ಬೆಳೆಗೆ ಮಾತ್ರ ಪರಿಹಾರ ಅಂತ ಇದೆ. ಅದನ್ನು ದಯವಿಟ್ಟು ಬೇರೆ ಕ್ರಾಪ್‌ಗಳಿಗೂ ಕೂಡ ಕೊಡಬೇಕು. ಯಾವ ಬೆಳೆಯಾದರೂ ಸರಿ 10 ಎಕರೆಯವರೆಗೆ ಲಿಮಿಟೇಷನ್ ಮಾಡಿ ಬೆಳೆ ಪರಿಹಾರ ಧನವನ್ನು ಮಾನ್ಯ ಮುಖ್ಯಮಂತ್ರಿಗಳು ಘೋಷಣೆ ಮಾಡಬೇಕೆಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ, ನನಗೆ ಮಾತನಾಡಲು ಅವಕಾಶ ಮಾಡಿ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಅಧ್ಯಕ್ಷರೇ, ಮಾನ್ಯ ಖರ್ಗೆಯವರು ಆಗಲೇ ಮಾತನಾಡುತ್ತಾ ನನ್ನ ಹೆಸರನ್ನು ಪ್ರಸ್ತಾಪ ಮಾಡಿದರಂತೆ. ನಾನು ಆಗಲೇ ಇರಲಿಲ್ಲ, ಹೊರಗಡೆ ಹೋಗಿದ್ದೆ. ಸಹಕಾರ ಸಚಿವರಾದಂತಹ ಸನ್ಮಾನ್ಯ ಎಸ್.ಎಸ್. ಪಾಟೀಲರು ಮುಧೋಳಕ್ಕೆ ಬಂದಾಗ ನನ್ನ ವಿಷಯ ಪ್ರಸ್ತಾಪ ಮಾಡಿದ್ದು ಸತ್ಯವಿದೆ, ಅವರು ಇಲ್ಲವೆಂದು ಡಿನೈ ಮಾಡಿದರು ಎಂದು ಮಾನ್ಯ ಖರ್ಗೆಯವರು ಪ್ರಸ್ತಾಪ ಮಾಡಿದಾಗ ಹೇಳಿದರು. ಅವರು ಬಂದು ಪೇಪರ್ ಸ್ಟೇಟ್‌ಮೆಂಟ್ ಅಷ್ಟೇ ಇಲ್ಲ, ಕಾರ್ಯಕರ್ತರ ಸಭೆಯಲ್ಲೂ ಕೂಡ ಮಾತನಾಡಿದ್ದಾರೆ. ಕಾರಜೋಳ ಇಲ್ಲಿಯ ಎಂ.ಎಲ್.ಎ. ಅಲ್ಲ, ಇಲ್ಲಿ ಎಸ್.ಎಸ್. ಮಲಗಾಣ ಅವರೇ ಶಾಸಕರು, ಅವರು ಹೇಳಿದ್ದು ಕೆಲಸ ನಡೆಯುತ್ತದೆ, ಸರ್ಕಾರದಲ್ಲಿ ಇವರು ಹೇಳಿದ್ದು ಕೆಲಸ ಆಗುವುದಿಲ್ಲ, ಮತ್ತು ಇವರನ್ನು ನೀವು ನೋಡಿಕೊಳ್ಳಿರಿ, ಏನೇ ಜವಾಬ್ದಾರಿ ಇದ್ದರೂ ಕೂಡ ನಾನು ಅದನ್ನು ಸರಿಯಾಗಿ ಡೀಲ್ ಮಾಡುತ್ತೇನೆ ಎನ್ನತಕ್ಕಂಥ ವಿಚಾರವನ್ನು ಅವರು ಪ್ರಸ್ತಾಪ ಮಾಡಿದ್ದು ಸತ್ಯವಿದೆ, ಅದು ಅಸತ್ಯವೇನೂ ಅಲ್ಲ. ಆದರೆ ನಾನು ಇಷ್ಟೇ ಸನ್ಮಾನ್ಯ ಎಸ್.ಎಸ್. ಪಾಟೀಲರಿಗೆ ಕೇಳಬಯಸುತ್ತೇನೆ, ಅವರು ಮೊದಲು ಕಾಂಗ್ರೆಸ್‌ನಲ್ಲಿದ್ದರು. ಅವರು ಕಾಂಗ್ರೆಸ್‌ನಲ್ಲಿದ್ದಾಗ ಒಂದು ಸೊಸೈಟಿಗೂ ಕೂಡ ಅವರು ಎಲೆಕ್ಟ್ ಆಗಲಿಲ್ಲ. ಒಂದು ಪಿ.ಎಲ್.ಡಿ. ಬ್ಯಾಂಕಿಗೂ ಕೂಡ ಅವರು ಎಲೆಕ್ಟ್ ಆಗಲಿಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ರೀತಿ ಮಾತನಾಡುವ ಅವಶ್ಯಕತೆ ಇಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಚಿವರು ಆ ರೀತಿ ಮಾತನಾಡಿದ್ದು ಸತ್ಯ ಇದೆ.

ಅಷ್ಟೇ ಅಲ್ಲ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್ : ಮಾನ್ಯ ಸದಸ್ಯರು ಮಾನ್ಯ ಸಚಿವರಿಗೆ X ಎಂಬ ಪದ ಬಳಸಿ ಮಾತನಾಡಿದ್ದಾರೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಹೇಳುವ ತನಕ ಸ್ವಲ್ಪ ಸುಮ್ಮನಿರಿ.....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಯಾರಿಗೆ ನೋವು ಆಗಿದೆಯೋ ಅವರು ಅದನ್ನು ಇಲ್ಲಿ ಹೇಳಲೇಬೇಕು. ನಾನು ಅದಕ್ಕೆ ಹೇಳಿದೆ, ನಿಮ್ಮ ಆಡಳಿತದಲ್ಲಿ ನಿಮ್ಮ ಶಾಸಕರಿಗೆ ಈ ರೀತಿ ಬೆದರಿಕೆ ಹಾಕಿದರೆ, ಬೇರೆಯವರ ಗತಿ ಏನು ಎನ್ನತಕ್ಕಂಥ ಮಾತನ್ನು ನಾನು ಪ್ರಸ್ತಾಪ ಮಾಡಿದೆ.

ಶ್ರೀ ಗೋವಿಂದ ಎಂ. ಕಾರಜೋಳ : .... ನಾನು ಹೇಳುವುದಕ್ಕೂ ಕೂಡ ಅವಕಾಶ ಕೊಡುವುದಿಲ್ಲ ಎಂದರೆ ಹೇಗೆ? ಮಾನ್ಯ ಅಧ್ಯಕ್ಷರೇ, ಅವರು ಈ ರೀತಿಯಾಗಿ ಪ್ರಸ್ತಾಪ ಮಾಡಿದ್ದರಲ್ಲಿ ಯಾವುದೇ ಅಸತ್ಯ ಇಲ್ಲ, ಸತ್ಯ ಇದೆ, ಅವರು ಹಾಗೆ ಮಾತನಾಡಿದ್ದು ನಿಜ. ನಾನು ಪ್ರಿವಿಲೇಜ್ ಮೋಷನ್ ಮೂವ್ ಮಾಡಲಿಕ್ಕೆ ಬರೆದುಕೊಟ್ಟಿದ್ದೆ, ಆದರೆ ತಾವು ಇರಲಿಲ್ಲ, ಉಪಾಧ್ಯಕ್ಷರು ಇದ್ದರು, ಅವರಿಗೆ ಕೊಟ್ಟಿದ್ದೆ, ಆದರೆ ಅವರು ನನಗೆ ಪರ್ಮಿಷನ್ ಕೊಡಲಿಲ್ಲ.

ಅಧ್ಯಕ್ಷರು : ಮಾನ್ಯ ಕಾರಜೋಳರವರೇ, ನಿಮ್ಮ ಪಕ್ಷದೊಳಗೆ ಆಂತರಿಕ ಜಗಳ ಅಥವಾ ವ್ಯವಹಾರ ಏನೆಲ್ಲಾ ಬರುತ್ತದೆ, ಅದನ್ನೆಲ್ಲಾ ಸೆಟ್ಲ್ ಮಾಡಿಕೊಳ್ಳಲಿಕ್ಕೆ ಇದು ವೇದಿಕೆ ಅಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ಅದರ ಸಲುವಾಗಿ ಅಲ್ಲ.

ಅಧ್ಯಕ್ಷರು : ನೀವಾಯಿತು, ಅವರಾಯಿತು, ನಿಮ್ಮ ಪಾರ್ಟಿ ಮೀಟಿಂಗ್, ಅವರ ಪಾರ್ಟಿ ಮೀಟಿಂಗ್, ಅಥವಾ ನೀವೆಲ್ಲಾ ಒಂದೇ ಪಾರ್ಟಿಯಲ್ಲಿದ್ದರೆ ಅಲ್ಲೆಲ್ಲಾ ಈ ಜಗಳ ಸೆಟ್ಲ್ ಮಾಡಿಕೊಳ್ಳಿ. ಅದಕ್ಕೆ ಈ ಸದನ ಜಾಗವಲ್ಲ. ನಾನು ಹೇಳುವುದನ್ನು ದಯಮಾಡಿ ಕೇಳಿ. ಅಸೆಂಬ್ಲಿಗೆ ಸಂಬಂಧಿಸಿದ್ದು, ನಿಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ್ದು ಏನಾದರೂ ಇದ್ದರೆ ಹೇಳಿ. ಅವರ ನಿಮ್ಮ ಜಗಳ.....

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ಕ್ಷೇತ್ರಕ್ಕೆ ಸಂಬಂಧಿಸಿದಂತೆಯೇ ಅವರು ಮಾತನಾಡಿದ್ದಾರೆ. ಇಲ್ಲಿ ಅವರು ಹೇಳಿದ ಕೆಲಸ ಆಗುವುದಿಲ್ಲ, ಇಲ್ಲಿ ಅವರು ಶಾಸಕರು ಅಲ್ಲ ಅಂತ ಹೇಳಿ ಅವರು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಮಾತನಾಡುತ್ತಾ ಇಷ್ಟೇ ಸೂಕ್ಷ್ಮವಾಗಿ ಪ್ರಸ್ತಾಪ ಮಾಡಿದೆ, ಆಡಳಿತದಲ್ಲಿ ನೀವೆಲ್ಲರೂ ಸರಿ ಸಮಾನ ದೃಷ್ಟಿಯಲ್ಲಿ ನೋಡಿಕೊಂಡು ಹೋಗಬೇಕು. ಉದಾಹರಣೆ ಕೊಡುವುದಾದರೆ.... ವಿರೋಧ ಪಕ್ಷದವರ ಶಾಸಕರನ್ನು ಬಿಡಿ, ಅವರನ್ನು ನೋಡಿಕೊಳ್ಳುವುದಂತೂ ಬೇರೆ ರೀತಿ ಇರುತ್ತದೆ. ನಿಮ್ಮ ಶಾಸಕರನ್ನೂ ಕೂಡ ಈ ರೀತಿಯಾಗಿ ನಡೆಸಿಕೊಳ್ಳುತ್ತಿದ್ದೀರಿ. ಮಾನ್ಯ ಸಚಿವರು ಶ್ರೀಮಾನ್ ಕಾರಜೋಳರವರ ವಿಧಾನ ಸಭಾಕ್ಷೇತ್ರಕ್ಕೆ ಹೋದಾಗ x .

---

X ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ಇದಿಷ್ಟೇ ಅಲ್ಲ, ದಯವಿಟ್ಟು...

ಅಧ್ಯಕ್ಷರು : ಅದೆಲ್ಲಾ ಚರ್ಚೆ ಮಾಡುವುದಕ್ಕೆ ಇದು ವೇದಿಕೆಯಲ್ಲ. ನೀವು ಜನತಾದಳ ಶಾಸಕಾಂಗ ಪಕ್ಷದ ಸಭೆಗೆ ಹೋಗಿ ಅಲ್ಲಿ ಗಲಾಟೆ ಮಾಡಿ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಸಚಿವರು ಈ ರೀತಿ ಮಾತನಾಡುವುದು ಸರಿಯಲ್ಲ. ಅವರು ಯಾವೊಂದು ಭಾವನೆಯಿಂದ ಮಾತನಾಡಿದ್ದಾರೆ ಎಂದರೆ, x x x

ಅಧ್ಯಕ್ಷರು : ಅದನ್ನೆಲ್ಲಾ ಇಲ್ಲಿ ಮಾತನಾಡಲು ಬರುವುದಿಲ್ಲ. Nothing will go on record. ಅದನ್ನೆಲ್ಲಾ ಇಲ್ಲಿ ನೀವು ಅವರ ಮೇಲೆ ಹೇಳಬೇಕಾಗಿದ್ದರೆ ನನಗೆ ನೋಟೀಸ್ ಕೊಟ್ಟು ಹೇಳಬೇಕಾಗುತ್ತದೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಮಾನ್ಯ ಉಪಾಧ್ಯಕ್ಷರು ಇದ್ದಾಗ ನೋಟೀಸ್ ಕೊಟ್ಟಿದ್ದೇನೆ. ಕಾರ್ಯದರ್ಶಿಯವರು ಇಲ್ಲೇ ಇದ್ದಾರೆ, ಬೇಕಾದರೆ ಕೇಳಿ ನೋಡಿ.

ಅಧ್ಯಕ್ಷರು : ನಿಮ್ಮ ಪಾರ್ಟಿ ಜಗಳ ಇಲ್ಲಿ ಪ್ರಸ್ತಾಪಿಸಲು ಬರುವುದಿಲ್ಲ. ನೀವು ಇವತ್ತು ಜಗಳವಾಡುತ್ತೀರಿ, ನಾಳೆ ಒಂದಾಗುತ್ತೀರಿ, ಯಾರಿಗೆ ಗೊತ್ತು ನಿಮ್ಮ ಕಥೆ. ಜಗಳ ಸೆಟ್ಲ್ ಮಾಡುವುದಕ್ಕೆ ಇದು ಜಾಗವೇ ?

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ಅದರ ಸಲುವಾಗಿ ಅಲ್ಲ. ನಾನು ಈ ಮನೆಯ ಸದಸ್ಯನಾಗಿದ್ದೇನೆ.....

ಅಧ್ಯಕ್ಷರು : ಸದಸ್ಯರಾಗಿ ನಿಮ್ಮ ಕರ್ತವ್ಯ ನಿರ್ವಹಣೆಗೆ ಏನಾದರೂ ಹಕ್ಕುಚ್ಯುತಿ ಉಂಟಾಗಿದ್ದರೆ ದಯಮಾಡಿ ನೋಟೀಸ್ ಕೊಡಿ. ಅದನ್ನು ನಾನು ವಿಚಾರಣೆ ಮಾಡುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು ಅದಕ್ಕೂ ಕೂಡ ನೋಟೀಸ್ ಕೊಟ್ಟಿದ್ದೇನೆ.

ಅಧ್ಯಕ್ಷರು : ಅದಕ್ಕೆ ನಾವು ರಿಪ್ಲೈ ಕೊಟ್ಟಿದ್ದೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ತಾವೇ ನನಗೆ ಈ ರೀತಿ ಹೇಳಿದರೆ ನಾನು ನನ್ನ ಸಮಸ್ಯೆ ಯಾರ ಮುಂದೆ ಹೇಳಿಕೊಳ್ಳಬೇಕು. ನನಗೆ ಅಡಚಣೆಯಾಗಿದೆ ಎಂದೇ ನಾನು ಇದನ್ನು ನಿಮ್ಮ ಮುಂದೆ ಹೇಳಿಕೊಳ್ಳುತ್ತಿದ್ದೇನೆ.

ಅಧ್ಯಕ್ಷರು : ಪಾರ್ಟಿ ಜಗಳ ನನಗೆ ಸಂಬಂಧಪಡುವುದಿಲ್ಲ

ಶ್ರೀ ಗೋವಿಂದ ಎಂ. ಕಾರಜೋಳ : ಇದು ಪಾರ್ಟಿ ಜಗಳವಲ್ಲ. ಪಾರ್ಟಿ ಸಲುವಾಗಿ ಮಾತನಾಡಿಲ್ಲ. ನನ್ನ ಶಾಸಕ ಸ್ಥಾನದ ಬಗ್ಗೆ ಅವರು ಅಲ್ಲಿ ಮಾತನಾಡಿದ್ದಾರೆ.

ಅಧ್ಯಕ್ಷರು : ಇದೊಳ್ಳೆ ಕಥೆಯಾಯಿತಲ್ಲಾ. ನಿಮಗೆ ನಾನು ಏನು ಹೇಳಿದರೂ ಅರ್ಥವಾಗುತ್ತಿಲ್ಲ.

---

XXX ಈ ಪದಗಳನ್ನು ಅಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದುಹಾಕಲಾಗಿದೆ.

ಶ್ರೀ ಗೋವಿಂದ ಎಂ. ಕಾರಜೋಳ : ಸಾರ್, ನೀವು ನನಗೆ ನಾಳೆ ಬೆಳಿಗ್ಗೆಯಾದರೂ ಇದನ್ನು ಪ್ರಸ್ತಾಪಿಸಲು ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಆಯಿತು, ಇದಕ್ಕೆ ಸಂಬಂಧಿಸಿದ ಕಾಗದ ಪತ್ರಗಳೇನಿವೆ, ಅವುಗಳನ್ನೆಲ್ಲಾ ತೆಗೆದುಕೊಂಡು ನನ್ನ ಹತ್ತಿರ ಬನ್ನಿ.

ಶ್ರೀ ಗೋವಿಂದ ಎಂ. ಕಾರಜೋಳ : ಆಯಿತು, ನಾನು ತೆಗೆದುಕೊಂಡು ಬರುತ್ತೇನೆ.

ಅಧ್ಯಕ್ಷರು : ಆಯಿತು ನೋಡೋಣ ಬನ್ನಿ

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೇ, ಹೇಗೂ ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲೇ ಇದ್ದಾರೆ. ನಿಯಮ 69ರ ಅಡಿಯಲ್ಲಿ ಮಲೆನಾಡು ಅಭಿವೃದ್ಧಿ ಮಂಡಳಿಗೆ ಅನುದಾನ ಕೊಡುವ ಬಗೆಗಿನ ವಿಚಾರವನ್ನು ನಮಗೆ ಈಗಲೇ ಪ್ರಸ್ತಾಪಿಸಲು ನಮಗೆ ಅನುಮತಿ ನೀಡಬೇಕೆಂದು ಕೋರುತ್ತೇನೆ.

ಅಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರರವರೇ, ತಾವು ಬೇಡಿಕೆಗಳ ಮೇಲೆ ನಾಳೆ ಬೆಳಿಗ್ಗೆ ಭಾಷಣ ಮಾಡಲು ಅವಕಾಶ ಮಾಡಿಕೊಡುತ್ತೇನೆ. ಈಗ ನಿಯಮ 69ರ ವಿಷಯ ಚರ್ಚೆಗೆ ತೆಗೆದುಕೊಳ್ಳೋಣ. ಅದು ತಮ್ಮ ಭಾಗಕ್ಕೂ ಕೂಡ ಸಂಬಂಧಪಟ್ಟಿದ್ದೇ ಆಗಿದೆ.

6.50 ಪಿ.ಎಂ

## ನಿಯಮ 69ರ ಮೇರೆಗೆ

## ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ 1998-99ನೇ ಸಾಲಿನಲ್ಲಿ ಅನುದಾನವನ್ನು ಕಡಿತಗೊಳಿಸಿರುವುದು.

+ ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರು ಸದನದಲ್ಲಿದ್ದಾರೆ. ಎಲ್ಲರಿಗೂ ಗೊತ್ತಿರುವ ರೀತಿಯಲ್ಲಿ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಿರುವ ಉದ್ದೇಶವೇನೆಂದರೆ, ಮಲೆನಾಡು ಪ್ರದೇಶದ ವಸ್ತು ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ವಿಶೇಷವಾದ ರೀತಿಯಲ್ಲಿ ಅಭಿವೃದ್ಧಿಯನ್ನು ಮಾಡಿದರೆ ಆ ಪ್ರದೇಶ ಬೆಳವಣಿಗೆಯಾಗುತ್ತದೆ ಮತ್ತು ಅಲ್ಲಿನ ಜನರ ಅನೇಕ ಬೇಡಿಕೆಗಳನ್ನು ಪೂರೈಸಿಕೊಟ್ಟಂತೆ ಆಗುತ್ತದೆ. ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ ಅಸ್ತಿತ್ವಕ್ಕೆ ಬಂದ ಪ್ರಾರಂಭದಿಂದಲೂ ಅದಕ್ಕೆ ಸರ್ಕಾರವೇನು ಅನುದಾನ ನೀಡಿಕೊಂಡು ಬರುತ್ತಿತ್ತೋ ಅದು ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಾ ಬಂದಿದೆ. ಪ್ರಾರಂಭದಲ್ಲಿ ನಾವೇನು ಅಭಿವೃದ್ಧಿಯ ಕಾರ್ಯವನ್ನು ವೇಗವಾಗಿ ಮಾಡಿಕೊಂಡು ಬಂದಿದ್ದೆವೋ ಅದರ ವೇಗ ಬರ್ತಾ ಬರ್ತಾ ಜಾಸ್ತಿಯಾಗಬೇಕೇ ಹೊರತು ಕಡಿಮೆ ಯಾಗಬಾರದು. ಸರ್ಕಾರ ಈಗ ಅನುದಾನವನ್ನು ಕೊಡುತ್ತಿರುವ ರೀತಿನೀತಿಯನ್ನು ನೋಡಿದರೆ ಅಲ್ಲಿನ ಅಭಿವೃದ್ಧಿಯ ವೇಗವನ್ನು ಹಿನ್ನೆಡೆಗೊಳಿಸುವ ಕೆಲಸವನ್ನು ಸರ್ಕಾರ